ಓದು, ಬರಹ ಬಲ್ಲವರ ಮಾಸಪತ್ರಿಕೆ

- ಅಪಾಯದ ವೈರಸ್‌ನಿಂದ ಜ್ಞಾನವಿಜ್ಞಾನ ಕಾಪಾಡಿ
- ವಿಮರ್ಶೆಯ ಪರಿಕಲ್ಪನೆಗಳು
- ನಾನು ಮತ್ತು ಸಂಶೋಧನೆ
- ದೇಶೀ ಚಿಂತನೆಗೆ ಮಾರ್ಗ ತೋರಿದ ಕಲಬುರ್ಗಿಯವರ ಮಾರ್ಗ-೪
- ಕನ್ನಡ ಭಾಷಾವಿಜ್ಞಾನಕ್ಕೆ ಎ. ಕೆ. ರಾಮಾನುಜನ್ ಕೊಡುಗೆ
- ವೀಣಾ ಶಾಂತೇಶ್ವರ - ಹೊಸತನದ ಪ್ರತಿಭೆ
- ಹರಿಹರಪ್ರಿಯರ ಸಾಂಸ್ಕೃತಿಕ ಚಡಪಡಿಕೆಯ ನಿರಂತರತೆ
- ಕೆ. ಸತ್ಯನಾರಾಯಣರ ಸನ್ನಿಧಾನ

೬

ಮೇ ೨೦೦೭

ಸಂಪಾದಕ
ಪುಸ್ತಕಮನೆ ಹರಿಹರಪ್ರಿಯ

ಸಂಚಿಕೆ : ೯ ಓದು, ಬರಹ ಬಲ್ಲವರ ಮಾಸಪತ್ರಿಕೆ ಮೇ ೨೦೦೭

ಒಳಪುಟಗಳಲ್ಲಿ....

ಬಿಡಿ ಸಂಚಿಕೆ ಸಿಗುವುದಿಲ್ಲ.

12 ಸಂಚಿಕೆಗಳೂ ಸೇರಿ 250/– ರೂ.

ಹಣವನ್ನು ಎಂ.ಓ./ಡಿ.ಡಿ./ಚೆಕ್‌ಗಳಲ್ಲಿ (ಬೆಂಗಳೂರಿನ ಹೊರಗಿನವರು 25/– ರೂ. ಸೇರಿಸಿ) ಪುಸ್ತಕಮನೆ ಹೆಸರಿಗೆ ಕಳಿಸಿಕೊಡಬೇಕಾಗಿ ವಿನಂತಿ.

ಪ್ರಕಾಶನ

ಪುಸ್ತಕಮನೆ

702, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು 560062

ಮೊಬೈಲ್ : 9845867184

ಮುದ್ರಣ

ಇಳಾ ಮುದ್ರಣ, ನಂ. 36, 40 ಅಡಿ ರಸ್ತೆ, ರಾಘವನಗರ, ನ್ಯೂಟಿಂಬರ್‌ಯಾರ್ಡ್ ಲೇಔಟ್ ಬೆಂಗಳೂರು 560 026. ದೂರವಾಣಿ : 32715773 / 26757159

ಅಪಾಯದ ವೈರಸ್‌ನಿಂದ ಜ್ಞಾನವಿಜ್ಞಾನ ಕಾಪಾಡಿ

ಸೂರ್ಯಸತ್ಯ

ಕೇವಲ ನೂರು ವರ್ಷಗಳ ಹಿಂದೆ ಕನ್ನಡದಲ್ಲಿ ಗ್ರಂಥ ಸಂಪಾದನೆ, ಗ್ರಂಥ ಸಂಪಾದಕರೇ ನಮ್ಮ ಭಾಷೆಯ ಸಾಹಿತ್ಯ ಸಾಂಸ್ಕೃತಿಕ ಸಂಶೋಧಕರು, ವಿಮರ್ಶಕರು ಆಗಿದ್ದರು, ಆಗಿಹೋದರು. ಇತ್ತೀಚಿನ ವರ್ಷಗಳಲ್ಲಿ ಓದಲು ಬರೆಯಲು ಬಾರದ ಎಷ್ಟೋ ಸಂಪಾದಕರು ಇದ್ದಾರೆ. ಆ ಅವರು ಸಾಹಿತಿಗಳು, ವಿದ್ವಾಂಸರು. ಈ ಇವರು ಪತ್ರಕರ್ತರು, ಪತ್ರಿಕೋದ್ಯಮಿಗಳು. ಈಗ ಅದೂ ಬದಲಾಗಿ ಸಮೂಹ ಮಾಧ್ಯಮದವರು ಅನ್ನಿಸಿಕೊಂಡಿದ್ದಾರೆ. ಈ ಎರಡರ ನಡುವೆ ವಿಶ್ವವಿದ್ಯಾಲಯಗಳು, ಅಕಾಡಮಿಗಳು ಹುಟ್ಟಿ, ಯಾರಯಾರ ಹೆಸರಿನಲ್ಲೋ ಎಷ್ಟೆಷ್ಟೋ ಗ್ರಂಥಗಳು ಪಾರ್ಥೇನಿಯಂನಂತೆ ಹೊರಬಂದಿರುವುದು, ಬರುತ್ತಿರುವುದು ಉಂಟು. ಜಾತಿಗೆ ಒಂದೊಂದು ವಿಶ್ವವಿದ್ಯಾಲಯ, ಅಕಾಡಮಿ ತಲೆಹೆತ್ತಿ ಪಠ್ಯಪುಸ್ತಕಗಳು, ಪದವಿಗಳು, ಸ್ಥಾನಗಳು, ಪ್ರಶಸ್ತಿಗಳು, ಸಮಿತಿಗಳ ಮೂಲಕ ಪೋಲಿಪುಂಡರಿಗಿಂತ ಹಣ ದೋಚುತ್ತಿರುವುದು ಉಂಟು. ದಿನವೂ ತಮ್ಮ ಹೇಳಿಕೆಗಳಿಂದ ರೌಡಿಗಳಂತೆ ಧಾಳಿಮಾಡುವುದು ಇವರ ದಂಧೆಯಾಗಿ ಹೋಗಿದೆ.

ಪರಿಸ್ಥಿತಿ ಹೀಗಿರುವಾಗ, ಅಂಥ ಗ್ರಂಥ-ಸಂಪಾದನೆಯಿಂದ ಸಂಶೋಧನೆ, ವಿಮರ್ಶೆ ಬೇರೆಬೇರೆಯಾಗಿ, ಈಗ, ನಿಜವಾಗಿಯೂ ತನ್ನ ಕೆಲಸ ತಾನು ಕನ್ನಡದಲ್ಲಿ ಮಾಡಿತೋರಿಸಲು ಸಾಧ್ಯವೊ ? ಈವರೆಗಾದರೂ ಸಾಧ್ಯವಾಗಿದೆಯೋ ?

ಕೀಟ (ವೈರಸ್) ಗಳಂತೆ ಪಾಶ್ಚಾತ್ಯ ಭಾಷೆ, ಸಾಹಿತ್ಯ ಓದಿ, ಅವನ್ನು ಸಾರಾಸಗಟು ನಮ್ಮ ಭಾಷೆಗೆ ಹೊತ್ತು ತಂದು ಹಾಕಿ, ಕೆಲಕಾಲ ದಿಗ್ಭ್ರಮೆ ಹುಟ್ಟಿಸಿ, ಜೊತೆಯಲ್ಲಿ ಕೀಟದ ಅಭಿವೃದ್ಧಿಗೂ, ಕೀಟದ ಸಂರಕ್ಷಣೆಗೂ ಬೇಕಾದ ಔಷಧ (ಸಿ.ಡಿ.) ಅಲ್ಲಿಂದಲೇ ತಾವೇ ಒದಗಿಸಿ, ಇಡೀ ಓದು ಬರಹ ಸಂಸ್ಕೃತಿ ಜೀವನವನ್ನೇ ಸರ್ವನಾಶಗೈವ ವೈರಸ್ಸುಗಳು ನಮ್ಮ ನಡುವೆ ಹುಟ್ಟಿಬಿಟ್ಟವು. ಇವುಗಳನ್ನೇ, ಇವುಗಳ ಸಂತತಿಯನ್ನೇ ಶ್ರೇಷ್ಠ, ಮುಖ್ಯ, ಮಹತ್ತ್ವದ್ದು ಎಂಬಂತೆ ಆಹ್ವಾನ-ಪ್ರಚಾರಪತ್ರಗಳನ್ನೂ ಮುದ್ರಿಸಿ; ಮಾಧ್ಯಮಗಳ, ಸರಕಾರದ, ಸಮಾಜದ ಕಣ್ಣುಗಳಿಗೆ ಮಣ್ಣು-ಖಾರದಪುಡಿ ಎರಚಿ ಮೆರೆದಿದ್ದಾರೆ, ಮೆರೆಯುತ್ತಿದ್ದಾರೆ. ಆ ಮೂಲಕ ನಾಡಿನ ಸಂಸ್ಕೃತಿ ಅಪಾಯದ, ಅವನತಿಯ ಸ್ಥಿತಿ ತಲುಪಿಯಾಗಿದೆ.

ಅಂತೆಯೇ ಕೃತಿ ಪ್ರಕಟವಾಗುವ ಮುನ್ನವೇ ವಿಮರ್ಶೆ-ಲೇಖನಗಳೂ ಹೊರಬಂದ ದೃಷ್ಟಾಂತಗಳು ನಮ್ಮಲ್ಲಿವೆ. ಇದಕ್ಕೂ ಹಾಸ್ಯಾಸ್ಪದ ಎಂದರೆ ಕೃತಿಯೊಂದಿಗೇ ಪ್ರಕಟವಾಗುವ ಮುನ್ನುಡಿಯಲ್ಲೇ ಈ ಶತಮಾನದ ಶ್ರೇಷ್ಠ, ಮಹತ್ತ್ವದ, ಮುಖ್ಯ ಮೇಜರ್ ಕೃತಿ ಇದು, ಇದೊಂದೇ ಎನ್ನುವಂತೆ, ಬೇರೆಯವರು ಓದಲಿಬಿಡಲಿ ನಾಯಿಕೊರಳಿನ ಬಿಲ್ಲೆಯಂತೆ ಕಟ್ಟಿ ಬಿಟ್ಟವರೂ ಇದ್ದಾರೆ. ಬೇರೆಯವರ ಕೃತಿಗಳನ್ನು ಕಣ್ಣೆತ್ತಿ ಕೂಡ ನೋಡದವರು ಇವರು.

ತಮಾಷೆ ಎಂದರೆ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಹಿಂದಿನ ಕಾಲದ ರಾಜಮಹಾರಾಜರಿಗೆ ಹೇಗೋ ಹಾಗೆ ಕಾವ್ಯ, ಮಹಾಕಾವ್ಯ, ಸಂಶೋಧನೆ, ವಿಮರ್ಶೆ ಅರ್ಪಿಸುವುದಲ್ಲ ಬರೆದೇಕೊಟ್ಟು; ಕುಲಪತಿ, ಕುಲಸಚಿವ, ವಿಧಾನಸಭೆ-ಪರಿಷತ್ತು, ಅಭಿವೃದ್ಧಿ ಪ್ರಾಧಿಕಾರ, ಪುಸ್ತಕ ಪ್ರಾಧಿಕಾರ, ಅಕಾಡಮಿಗಳು, ವಿಶ್ವವಿದ್ಯಾಲಯಗಳು, ದೇಶವಿದೇಶಗಳಲ್ಲೂ-ಸ್ಥಾನ, ಮಾನ, ಸವಲತ್ತು ಗಿಟ್ಟಿಸಿದವರೇ ಲೋಕದ ಕಣ್ಣಿಗೆ ದೊಡ್ಡವರು, ಪ್ರಖ್ಯಾತರು, ಪ್ರಮುಖರಾಗಿ ಬದುಕಿ ಸಾಯುತ್ತಿರುವವರೂ ನಮ್ಮ ನಡುವೆ ಅಸಂಖ್ಯಾತರಿದ್ದಾರೆ. ಸಮೂಹ ಮಾಧ್ಯಮಗಳೂ ಇಂತಹ ಭ್ರಷ್ಟರು, ನೀಚರನ್ನೇ ಅನುದಿನವೂ ಹಾಡಿ ಹರೆಸುತ್ತಿರುತ್ತವೆ. (ಪುಟ ೧೨ಕ್ಕೆ)

೨

ವಿಮರ್ಶೆಯ ಪರಿಕಲ್ಪನೆಗಳು

ಜಿ.ಎಚ್. ನಾಯಕ

೧. ನಿಮ್ಮ ದೃಷ್ಟಿಯಲ್ಲಿ ವಿಮರ್ಶೆ ಎಂದರೇನು ?

ಮನುಷ್ಯ ಬುದ್ಧಿಜೀವಿ. ಸಾರಾಸಾರ ವಿಚಾರ ಮಾಡುವಂಥವನು. ಆ ಮೂಲಕ ತೀರ್ಮಾನಕ್ಕೆ ಬರುವಂಥವನು. ಬದುಕಿನ ಎಲ್ಲಾ ವ್ಯವಹಾರಗಳಲ್ಲಿಯೂ ಅದು ಸಾಮಾನ್ಯವಾಗಿ ಕಾಣಿಸುತ್ತದೆ. ಆ ಬಗೆಯ ಮನಸ್ಸಿನ ಚಟುವಟಿಕೆಗೆ ವಿಮರ್ಶೆ ಎನ್ನಬಹುದು. ಇದು ಸಾಮಾನ್ಯ ಅರ್ಥ. ಆದರೆ ಸಾಹಿತ್ಯದ ಸಂದರ್ಭದಲ್ಲಿ ಸಾಹಿತ್ಯ ಕೃತಿಯನ್ನು ಅಥವಾ ಕೃತಿ ಸಮೂಹವನ್ನು ಕುರಿತು ಅಧ್ಯಯನ ಮಾಡುವಾಗ ತನ್ನ ಮನಸ್ಸಿನಲ್ಲಿ ಮೂಡುವ ಭಾವ-ಭಾವನೆಗಳನ್ನು, ಅರಿವು-ವಿವೇಕಗಳನ್ನು ವಿವರಿಸುವ, ವಿಶ್ಲೇಷಿಸುವ, ವ್ಯಾಖ್ಯಾನಿಸುವ, ಬೆಲೆಕಟ್ಟುವ ಪ್ರಕ್ರಿಯೆಯನ್ನು ವಿಮರ್ಶೆ ಅಥವಾ ಸಾಹಿತ್ಯ ವಿಮರ್ಶೆ ಎನ್ನಬಹುದು.

೨. ಸಾಹಿತ್ಯ ಕ್ಷೇತ್ರದಲ್ಲಿ ನೀವು ವಿಮರ್ಶೆ ಆಯ್ಕೆ ಮಾಡಿಕೊಳ್ಳಲು ಕಾರಣವೇನು ?

ಪ್ರಾರಂಭದಲ್ಲಿ ನಾನು ಕವನಗಳನ್ನು ಬರೆಯುತ್ತಿದ್ದೆ. ಕೆಲವು ಪ್ರಕಟವಾಗಿವೆ. ಅವು ಹಿರಿಯರ ಮೆಚ್ಚುಗೆಗೆ ಪಾತ್ರವಾಗಿದ್ದವು. ನಾನು ಕವಿಯಾಗಿ ಬೆಳೆಯಬಹುದು ಎಂಬ ನಿರೀಕ್ಷೆ ಅವರಿಗೆ ಇತ್ತು. ಮೈಸೂರಿಗೆ ನನ್ನನ್ನು ಕಾಲೇಜು ವಿದ್ಯಾಭ್ಯಾಸಕ್ಕೆಂದು ಕಳಿಸಿದವರು ಅಂಕೋಲಾದ ಕವಿ ಸ.ಪ. ಗಾಂವಕಾರ್. ನಾನು ದೊಡ್ಡ ಕವಿಯಾಗಿ ಬೆಳೆಯಬಹುದು ಎಂಬ ನಿರೀಕ್ಷೆಯೂ ಅವರಿಗೆ ಇತ್ತು. ಮೈಸೂರಿಗೆ ಕಳಿಸುವಾಗ ಕುವೆಂಪು ಅವರನ್ನು ನನ್ನ ಕಾವ್ಯಗುರುವಾಗಿ ಮಾಡಿಕೊಳ್ಳಬೇಕು ಎಂದು ಹೇಳಿ ಕಳುಹಿಸಿದ್ದರು. ೧೯೫೪ ಆಗಸ್ಟ್ ೮ ಭಾನುವಾರದಂದು ಕುವೆಂಪು ಅವರನ್ನು ಕಂಡು ನನಗೆ ಕಾವ್ಯಗುರುಗಳಾಗಬೇಕು ಎಂದು ಕೇಳಿಕೊಂಡಿದ್ದೆ. ಆ ಸಂದರ್ಭದಲ್ಲಿ ಡಾ. ಪ್ರಭುಶಂಕರ ಕೂಡ ಕುವೆಂಪು ಅವರ ಜೊತೆ ಮಾತನಾಡುತ್ತ ಕುಳಿತಿದ್ದರು. ನಾನು ದುಂಡಗಿನ ಅಕ್ಷರಗಳಲ್ಲಿ ಬರೆದುಕೊಂಡು ಹೋಗಿದ್ದ ಕವನಗಳನ್ನು ಕುವೆಂಪು ಅವರಿಗೆ ತೋರಿಸಲು ಮುಂದಾದೆ. ಅವರು ಅದನ್ನು ತೆಗೆದುಕೊಳ್ಳಲಿಲ್ಲ. ನನ್ನ ಕಡೆ ತಿರುಗಿ ಹೇಳದೆ, ಪ್ರಭುಶಂಕರ ಅವರ ಕಡೆ ತಿರುಗಿ "ಅಧ್ಯಾತ್ಮಕ್ಕೆ ಗುರು ಬೇಕು, ಕಾವ್ಯಕ್ಕೆ ಗುರು ಬೇಕೇಬೇಕೆಂದೇನಿಲ್ಲ; ಒಳಗೆ ಪ್ರತಿಭೆಯ ಕಿಡಿ ಇದ್ದರೆ ಅದು ಬೆಳಗುತ್ತದೆ" ಎಂದು ಹೇಳಿದರು. ನನ್ನ ಕಡೆ ತಿರುಗಿ "ಹಿರಿಯ ಕವಿಗಳ ಕಾವ್ಯವನ್ನು ಚೆನ್ನಾಗಿ ಓದಿ, ತಾನಾಗಿ ಬೆಳೆಯುತ್ತೀರಿ" ಎಂದರು. ಚಿಕ್ಕವನಾದ ನನ್ನನ್ನು ಬಹುವಚನದಿಂದ ಸಂಬೋಧಿಸಿ ಮಾತನಾಡಿದ್ದು ನನಗೆ ತುಂಬಾ ಮುಜುಗರ ಉಂಟುಮಾಡಿತು. ನನ್ನ ಕವನಗಳನ್ನು ಅವರು ಓದಿ ನೋಡಲಿಲ್ಲ. ಅದರಿಂದಾಗಿ ನನಗೆ ನಿರಾಶೆ ಆಗಿತ್ತು. ಆದರೆ ಕುವೆಂಪು ಅವರ ಜೊತೆ ಮಾತನಾಡಿದೆನಲ್ಲಾ ಎಂದು ಸಂತೋಷವಾಗಿತ್ತು.

ಕೆಲವು ಕಾಲದ ಮೇಲೆ ಕಿಂದರಿಜೋಗಿ ಎಂಬ ಕವನ ಬರೆದೆ. ಕುವೆಂಪು ಅವರ 'ಕಿಂದರಿಜೋಗಿ' ಕಥನಕವನದಲ್ಲಿ ಒಬ್ಬ ಹೆಳವ ಬರುತ್ತಾನೆ. ನಾನು ಈ ಲೋಕದಲ್ಲಿ ಅಂಥ ಒಬ್ಬ ಹೆಳವ, ಮುಂದೆ ಹೋಗುವುದಕ್ಕೂ ಆಗದೆ, ಬಂದ ದಾರಿಗೆ ತಿರುಗಿ ಹೋಗಲು ಕೂಡ ಆಗದೆ ಪಾಡು ಪಡುತ್ತಿರುವ ಜೀವ ಎಂಬಂಥ ಒಂದು ಸಾಂಕೇತಿಕ ಅರ್ಥವಿಟ್ಟು ಮನುಷ್ಯ ಸಾಮಾನ್ಯಸ್ಥಿತಿ ಇದು ಎಂದು ಕವನದಲ್ಲಿ ಅಭಿವ್ಯಕ್ತಿಸುವ ಪ್ರಯತ್ನಮಾಡಿದ್ದೆ. ಆ ಕವನವನ್ನು ಆಗ ನವ್ಯಕವನ, ನವ್ಯಕತೆ ಬರೆಯುತ್ತಿದ್ದ ಡಾ. ಯು.ಆರ್. ಅನಂತಮೂರ್ತಿಯವರಿಗೆ ತೋರಿಸಿದೆ. ಕವನ ಚೆನ್ನಾಗಿದೆ ಎಂದು ಮೆಚ್ಚುಗೆಯನ್ನು ಸೂಚಿಸಿದ ಅವರು "ಕವನದಲ್ಲಿ ಅಧ್ಯಾತ್ಮ ಹೆಚ್ಚಾಯಿತು. ಈ ವಯಸ್ಸಿನಲ್ಲಿ ಅಂಥ ಭಾವನೆ ಎಷ್ಟು ನಿಜ?" ಎಂದು ಮುಂತಾಗಿ ನಯವಾಗಿಯೇ ಆದರೂ ಸ್ಪಷ್ಟವಾಗಿ ನನಗೆ ಮನವರಿಕೆಯಾಗುವಂತೆ ತಿಳಿಸಿ ಹೇಳಲು ಪ್ರಯತ್ನಿಸಿದರು. ಅಲ್ಲಿಂದ ಏಕೋ ಕವನ ಬರೆಯುವುದನ್ನು ಕೆಲವು ವರ್ಷಗಳವರೆಗೆ ನಿಲ್ಲಿಸಿಬಿಟ್ಟೆ. ಆಮೇಲೆಯೂ ಕೆಲವು ಕವನಗಳನ್ನು ಬರೆದದ್ದುಂಟು. 'ಲಹರಿ', 'ಪ್ರಬುದ್ಧಕರ್ನಾಟಕ' ಪತ್ರಿಕೆಗಳಲ್ಲಿ ಕೆಲವು ಪ್ರಕಟವಾಗಿವೆ. ಇನ್ನಷ್ಟು

ಕವನಗಳನ್ನು ಬರೆದಿಟ್ಟುಕೊಂಡಿದ್ದೆ. ಆ ನೋಟ್‌ಬುಕ್ ಕಳೆದು ಹೋಯಿತು. ಎಷ್ಟೋ ಸಾಲುಗಳು ಬಿಡಿಬಿಡಿಯಾಗಿ ನೆನಪಿವೆ. ಆದರೆ ಇಡಿಇಡೀ ಕವನಗಳ ನೆನಪು ಬರುತ್ತಿಲ್ಲ. ಅನಂತಮೂರ್ತಿಯವರ ನವ್ಯ ಸಾಹಿತ್ಯ ಚಿಂತನೆಯ ಪ್ರಭಾವ, ಅವರ ಸೂಕ್ಷ್ಮ ಚಿಂತನಶಕ್ತಿಯ ಕಾರಣದಿಂದಾಗಿ, ಅವರ ಹತ್ತಿರದ ಒಡನಾಟದಿಂದಾಗಿ, ನನ್ನ ಮೇಲೆ ಸಾಕಷ್ಟು ಪ್ರಭಾವ ಆಗಿರಬೇಕು.

ಅನಂತರದ ಕಾಲದಲ್ಲಿ ನವ್ಯ ಕವಿ ಎಂ. ಗೋಪಾಲಕೃಷ್ಣ ಅಡಿಗರ ಜೊತೆ ಮೈಸೂರಿನ ಕಾಫಿ ಹೌಸಿನಲ್ಲಿ ಸಾಹಿತ್ಯ ಚಿಂತನ, ಚರ್ಚೆ ಇವುಗಳನ್ನು ಕೇಳಿಸಿಕೊಳ್ಳುತ್ತ ಎಷ್ಟೋ ಸಂಜೆಗಳನ್ನು ಕಳೆಯುವ ಅವಕಾಶ ದೊರೆತಾಗ ಕವನವನ್ನು, ಕಥೆಯನ್ನು, ಕಾದಂಬರಿಯನ್ನು, ನಾಟಕವನ್ನು ಓದುವ ಮತ್ತು ವಿಮರ್ಶಿಸುವ ಬಗೆ ಯಾವ ರೀತಿ ಇರಬೇಕು ಎಂಬುದರ ಬಗ್ಗೆ ನನ್ನಲ್ಲಿ ಸ್ಪಷ್ಟ ಕಲ್ಪನೆಗಳು ಮೂಡಿದವು.

ಕನ್ನಡ ಎಂ.ಎ. ಓದುತ್ತಿರುವ ವಿದ್ಯಾರ್ಥಿಯಾಗಿದ್ದಾಗ 'ಮಾಸ್ತಿಯವರ ಕಾವ್ಯ' ಎಂಬ ಒಂದು ಪ್ರಬಂಧವನ್ನು ವಿಚಾರಗೋಷ್ಠಿಯಲ್ಲಿ ಮಂಡಿಸಿದ್ದೆ. ಗೋಷ್ಠಿ ನಿರ್ವಹಿಸುತ್ತಿದ್ದ ಗುರುಗಳಾದ ಡಾ. ಜಿ.ಎಸ್. ಶಿವರುದ್ರಪ್ಪನವರು ನನ್ನ ಆ ಪ್ರಬಂಧವನ್ನು 'A-I' (ಎ–ಒನ್) ಎಂದು ಗುರುತಿಸಿ ಮೆಚ್ಚಿದ್ದರು. ಪ್ರಬಂಧ ಮಂಡಿಸಿದ ಮೇಲೆ ಪ್ರೊ. ತೀ.ನಂ. ಶ್ರೀಕಂಠಯ್ಯನವರು, ಪ್ರೊ. ಡಿ.ಎಲ್. ನರಸಿಂಹಾಚಾರ್ ಅವರು ತುಂಬು ಮನಸ್ಸಿನಿಂದ ಮೆಚ್ಚುಗೆಯನ್ನು ಸೂಚಿಸಿದರು. ಅದು ನನ್ನಲ್ಲಿ ಹೆಚ್ಚಿನ ಆತ್ಮವಿಶ್ವಾಸ ಬೆಳೆಸಿತು. ಅದೇ ಪ್ರಬಂಧವನ್ನು ಗೋಪಾಲಕೃಷ್ಣ ಅಡಿಗರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ 'ಸಾಕ್ಷಿ' ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ಪ್ರಕಟಣೆಗೆಂದು ಕೊಟ್ಟೆ. ಅಡಿಗರು 'ಚೆನ್ನಾಗಿದೆ ಆದರೆ...." ಎಂದು ಹೇಳಿ ಸ್ವಲ್ಪ ಹೊತ್ತು ಬಿಟ್ಟು ಆಮೇಲೆ ಇನ್ನೂ ಹೆಚ್ಚು ಸೂಕ್ಷ್ಮವಾಗಿ, ಆಳವಾಗಿ ಅಧ್ಯಯನ ಮತ್ತು ವಿವೇಚನೆ ಮಾಡಿ ಬರೆದಾಗ ವಿಮರ್ಶೆಗೆ ಹೆಚ್ಚಿನ ತೂಕ ಬರುತ್ತದೆ ಎಂದು ಹೇಳಿದರು. ನನ್ನ ಗುರುಗಳು ಸೂಚಿಸಿದ ಮೆಚ್ಚುಗೆಯಿಂದ ಬೆಳೆದ ಆತ್ಮವಿಶ್ವಾಸ ಕುಂದದಿದ್ದರೂ ಅಡಿಗರ ವಿಮರ್ಶೆ ಮತ್ತು ಮಾತುಗಳು ಇನ್ನೂ ನಾನು ಹೆಚ್ಚು ಬೆಳೆಯಬೇಕಾದ್ದಿದೆ ಎಂದು ಅನಿಸುವಂತೆ ಮಾಡಿತು. ನನ್ನ ವಿಮರ್ಶನ ಪ್ರತಿಭೆ ಗಟ್ಟಿಯಾಗಿದೆ ಎಂಬ ಮಾತನ್ನು ಅಡಿಗರೂ ಹೇಳಿದ್ದರಿಂದ ನನ್ನ ಆತ್ಮವಿಶ್ವಾಸ ತೀರಾ ಕುಂದುವುದಕ್ಕೆ ಕಾರಣವಿರಲಿಲ್ಲ. ಬಹುಶಃ ವಿಮರ್ಶೆಯ ಕ್ಷೇತ್ರವನ್ನು ನಾನು ಆಯ್ಕೆ ಮಾಡಿಕೊಳ್ಳುವುದಕ್ಕೆ ನನ್ನ ಗುರುಗಳು ವ್ಯಕ್ತಪಡಿಸಿದ ಮೆಚ್ಚುಗೆ, ಅಡಿಗರು ನೀಡಿದ ಎಚ್ಚರಿಕೆ, ತಿಳಿವಳಿಕೆ ಕಾರಣವಾಗಿರಬೇಕು. ಈವರೆಗೂ ನನ್ನ ವಿಮರ್ಶೆಯ ಬರವಣಿಗೆಯ ಗುಣಸ್ವರೂಪವನ್ನು ನಿರ್ಧರಿಸುವಲ್ಲಿ ಅದು ಸಾಕಷ್ಟು ಪ್ರಭಾವ ಬೀರಿರಬೇಕು ಎಂದು ನಾನು ಭಾವಿಸಿದ್ದೇನೆ. ಒಟ್ಟಿನಲ್ಲಿ ವಿಮರ್ಶೆಯ ಕ್ಷೇತ್ರಕ್ಕೆ ನಾನು ನಿಶ್ಚಯಮಾಡಿ ಪ್ರವೇಶಿಸುವುದಕ್ಕೆ ಈ ಸಂದರ್ಭ ಮುಖ್ಯ ಕಾರಣವಾಗಿರಬೇಕು ಎಂದು ನಾನು ಅಂದುಕೊಂಡಿದ್ದೇನೆ.

೩. ವಿಮರ್ಶೆಯು ಸಾಹಿತ್ಯ ಕ್ಷೇತ್ರಕ್ಕೆ ಯಾವ ರೀತಿಯ ಕೊಡುಗೆಯಾಗಿದೆ?

ಸೃಜನಶೀಲ ಸಾಹಿತ್ಯದಲ್ಲಿ ಕೂಡ ಸಾಹಿತ್ಯ ಸೃಷ್ಟಿಸುವ ಮನಸ್ಸು ವಿಮರ್ಶನ ಪ್ರಜ್ಞೆಯನ್ನು ಒಳಗೊಂಡೇ ಇರುತ್ತದೆ. ವಿಮರ್ಶನ ಪ್ರಜ್ಞೆಗೆ ಬುದ್ಧಿಯ ಸೂಕ್ಷ್ಮಜ್ಞತೆಯ ಬಲ ಹೆಚ್ಚು. ಸೃಜನಶೀಲ ಪ್ರತಿಭೆಗೆ ಭಾವದ ಉತ್ಕಟತೆ, ಉಕ್ಕಂದ, ತೀವ್ರತೆ ಹೆಚ್ಚು. ಬುದ್ಧಿಭಾವಗಳ ವಿದ್ಯುದಾಲಿಂಗನ ಕಾವ್ಯ ಎಂದು ಕುವೆಂಪು ಹೇಳುವ ಮಾತು ಬಹುಪಾಲು ನಿಜ. ಸೃಜನಶೀಲ ಕೃತಿ ಕಾವ್ಯವಾಗಲಿ, ಕಥೆಯಾಗಲಿ, ಕಾದಂಬರಿಯಾಗಲಿ, ನಾಟಕವಾಗಲಿ ಇನ್ನಾವುದೇ ಆಗಲಿ ಸಾಂಸ್ಕೃತಿಕವಾಗಿಯೂ ಮಹತ್ವದ್ದಾಗಬೇಕಾದರೆ ಪ್ರಬುದ್ಧವಾದ ಅರಿವಿನ ನೆಲೆಗೆ ಮಾಗಬೇಕಾಗುತ್ತದೆ. ಪಾಕಗೊಳ್ಳಬೇಕಾಗುತ್ತದೆ. ಭಾವಾತಿರೇಕದ ಬರವಣಿಗೆಯಾಗಲಿ, ಕೇವಲ ಬುದ್ಧಿಶಕ್ತಿಯ ಮೇಲೆ ಬರೆದ ಕೃತಿಯಾಗಲಿ, ಪಾಂಡಿತ್ಯದ ದರ್ಪದಿಂದ ಬರೆದ ಕೃತಿಯಾಗಲಿ ಶ್ರೇಷ್ಠವಾಗಲು ಸಾಧ್ಯವಿಲ್ಲ. ವಿವೇಕದ, ಅರಿವಿನ ಪ್ರಬುದ್ಧಸ್ಪರ್ಶ ಮತ್ತು ಪ್ರಭಾವಳಿ ಇಲ್ಲದೆ ಇರುವ ಯಾವ ಕೃತಿಯೂ ಶ್ರೇಷ್ಠವಾಗುವುದಿಲ್ಲ. ಈ ಎಚ್ಚರ ಅಥವಾ ಸಂಸ್ಕಾರ ಸೃಜನಶೀಲಕೃತಿಯನ್ನು ರಚಿಸುವವರಿಗೆ ಅಂದರೆ ಕವಿ–ಸಾಹಿತಿಗಳಿಗೆ ಅಗತ್ಯವಾಗಿ ಇರಬೇಕಾಗುತ್ತದೆ. ಓದುಗನಿಗೂ ಸೃಜನಶೀಲ ಕೃತಿಗೂ ತನ್ನ ಆಸ್ವಾದನೆಯ, ಅರಿವಿನ ಭಾಗವಾಗಿ ಮಾಡಿಕೊಳ್ಳುವ ಈ ತಿಳಿವಳಿಕೆ ಎಷ್ಟಿದ್ದರೂ ಅಷ್ಟು ಒಳ್ಳೆಯದು; ಅಪೇಕ್ಷಣೀಯವೂ ಹೌದು. ವಿಮರ್ಶಕನೂ ಓದುಗನೇ. ವಿಮರ್ಶಕ ಅತ್ಯುತ್ತಮ ಓದುಗ. ಅತ್ಯುತ್ತಮ ಓದುಗನು ತಾನು ಪಡೆದ ಅನುಭವವನ್ನು ವಿವರಿಸುವ, ವಿಶ್ಲೇಷಿಸುವ, ವ್ಯಾಖ್ಯಾನಿಸುವ ಕಾರ್ಯವನ್ನು ವಿಮರ್ಶೆ ಎಂದು

ಹೇಳಬಹುದು. ಅಂಥ ವಿಮರ್ಶೆ ಸಾಹಿತ್ಯ ಕೃತಿಗಳ ಮೌಲ್ಯಮಾಪನ ಮಾಡುವುದರ ಜೊತೆಜೊತೆಗೇ ಸಂಸ್ಕೃತಿಯ ಫಲವಾದ ಸಾಹಿತ್ಯ ಸಾಂಸ್ಕೃತಿಕವಾಗಿ ಕೂಡ ಹೆಚ್ಚು ಪ್ರಯೋಜನಕಾರಿ ಆಗುವಂತೆ ಮಾಡುವುದಕ್ಕೆ ನೆರವು ನೀಡಬಲ್ಲ ಶಕ್ತಿಯನ್ನೂ ಪಡೆದಿರುತ್ತದೆ. ಎಲ್ಲಾ ಸಾಹಿತ್ಯ ಪ್ರಕಾರದ ಬರವಣಿಗೆಯೂ ಮಾಡಬೇಕಾದ ಕಾರ್ಯ ಸಂಸ್ಕೃತಿಯನ್ನು ಕಟ್ಟುವುದೇ ಆಗಿದೆ. ಸಂಸ್ಕೃತಿಯ ಆರೋಗ್ಯಕರ ಕಟ್ಟುವಿಕೆಗೆ, ಸ್ವರೂಪದಲ್ಲಿ ವ್ಯತ್ಯಾಸವಿದ್ದರೂ, ಉದ್ದೇಶದಲ್ಲಿ ಮತ್ತು ಪರಿಣಾಮದಲ್ಲಿ ಸೃಜನಶೀಲಕೃತಿಗೂ ಸಾಹಿತ್ಯ ವಿಮರ್ಶೆಗೂ ಮೂಲಭೂತ ವ್ಯತ್ಯಾಸವಿಲ್ಲ.

ಮೌಲ್ಯಗಳನ್ನು ಶಾಸ್ತ್ರಗಳು, ಧರ್ಮಶಾಸ್ತ್ರಗಳು ನಿಗದಿಮಾಡುತ್ತಿದ್ದ ಸಾಮಾಜಿಕ ವ್ಯವಸ್ಥೆ ಇದ್ದ ಕಾಲದಲ್ಲಿ ಕಾವ್ಯ, ಕಥೆ, ನಾಟಕ ಇಂಥವು ಕಾಂತಾಸಂಮಿತಗಳು ಮಾತ್ರ ಎಂದು ಕಾವ್ಯಮೀಮಾಂಸಾಕಾರರು, ಕವಿ-ಸಾಹಿತಿಗಳು ತಿಳಿದದ್ದಿತ್ತು. ಮೌಲ್ಯದ ಮಟ್ಟಿಗೆ ಅದರ ಒಳಿತು ಕೆಡುಕುಗಳನ್ನು ಚರ್ಚಿಸುವ, ಕೊರತೆಗಳನ್ನು ಗುರುತಿಸಿ ಪ್ರಶ್ನಿಸುವ, ಪರಿಶೋಧಿಸುವ 'ಅಧಿಕಾರ'ವನ್ನು ಕವಿ ಸಾಹಿತಿಗಳಿಗೆ ಆ ಕಾಲದ ರಾಜಪ್ರಭುತ್ವವು ಹಾಗೂ ಧಾರ್ಮಿಕ ಪ್ರಭುತ್ವವು-ನೀಡಿರಲಿಲ್ಲ. ಹಾಗಾಗಿ 'ಸಾಮಾಜಿಕ'ರು ಆ ಕಾರ್ಯವನ್ನು ಕವಿ-ಸಾಹಿತಿಗಳಿಂದ ನಿರೀಕ್ಷಿಸುವಂತಿರಲಿಲ್ಲ. ಅದರಿಂದಾಗಿ ಕಾವ್ಯದ ಪರಮ ಪ್ರಯೋಜನ ಆನಂದ, ರಸಾನಂದ ಎಂಬ ತಿಳಿವಳಿಕೆ ಇತ್ತು. ಪ್ರತಿಭಾವಂತರು ಒಪ್ಪಿತ ಮೌಲ್ಯಗಳನ್ನು ಪ್ರಶ್ನಿಸುವ ಅವಕಾಶ 'ಅಧಿಕಾರ' ಪಡೆದಿರಲಿಲ್ಲವಾದ್ದರಿಂದ ಸಮಾಜ ಜಡಗಟ್ಟಿ ಪರಿವರ್ತನೆಗೆ ತೆರೆದಿರದೆ ಇರುವಂಥ ಸ್ಥಿತಿ ಇರುತ್ತಿತ್ತು. ಆದ್ದರಿಂದ ಆ ಕಾಲದಲ್ಲಿ ಸಾಹಿತ್ಯವಿಮರ್ಶೆ ಒಂದು ಸಾಹಿತ್ಯಪ್ರಕಾರವಾಗಿ ಬೆಳೆಯಬೇಕಾದ ಅಗತ್ಯ ಅವರಿಗೆ ಕಂಡಿರಲಿಲ್ಲ. ವಿಮರ್ಶೆ ಮೂಲತಃ ಪ್ರಜಾಸತ್ತಾತ್ಮಕವಾದ ಸಂಸ್ಕೃತಿಯ ತಿಳಿವಳಿಕೆಯ ನೆಲೆಯಲ್ಲಿ ಜನ್ಮಪಡೆದದ್ದು. ವಿಮರ್ಶೆಯು ಯಾವುದನ್ನೂ, ಯಾರನ್ನೂ ಪ್ರಶ್ನಿಸುವ, ಬೆಲೆಕಟ್ಟುವ 'ಅಧಿಕಾರ' ಮತ್ತು ಹೊಣೆಗಾರಿಕೆಯನ್ನು ಹೊತ್ತುಕೊಂಡಿರುವ ಕ್ರಿಯೆಯಾಗಿದೆ.

೪. ಕವಿ ಮನೋಧರ್ಮ ವಿಮರ್ಶಕನಿಗೆ ಬೇಕೆ ?

ಕವಿಮನೋಧರ್ಮ ಎಂದರೇನು ಎಂದು ಸುಲಭವಾಗಿ ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಕವಿಯ ಪ್ರತಿಭೆ ಕಾರಯತ್ರೀ ಪ್ರತಿಭೆ. ಓದುಗನದು ಅಥವಾ ಸಹೃದಯನದು ಭಾವಯತ್ರೀ ಪ್ರತಿಭೆ. ಕವಿಯದು ಸೃಷ್ಟಿ ಕಾರ್ಯವಾದರೆ ಸಹೃದಯನದು ಅಥವಾ ಓದುಗನದು ಅನುಸೃಷ್ಟಿ ಕಾರ್ಯ. ಕಾವ್ಯಸೃಷ್ಟಿಯ ಸಂದರ್ಭದಲ್ಲಿ ಕವಿ ಅನುಭವಿಸುವ ಆನಂದವೇ ಅವನು ಪಡೆಯುವ ಪರಮ ಪ್ರಯೋಜನ. ಕಾವ್ಯವನ್ನು ಓದುವ ಅಥವಾ ಅನುಭವಿಸುವ ಸಂದರ್ಭದಲ್ಲಿ ಓದುಗ ಅಥವಾ ಸಹೃದಯ ಪಡೆಯುವ ರಸಾನಂದವೇ ಅವನು ಪಡೆಯುವ ಪರಮಪ್ರಯೋಜನ ಎಂಬುದು ವಿಮರ್ಶೆಯ ಸಾಮಾನ್ಯತತ್ವ, ಸಿದ್ಧಾಂತ. ಕವಿ ಪಡೆದ ಆನಂದವನ್ನು ಸಹೃದಯನೂ ಪಡೆಯುತ್ತಾನೆ ಅಥವಾ ಪಡೆಯಬೇಕು ಎಂಬುದಾದರೆ ಕವಿಯ ಕೃತಿಯನ್ನು ಸಹೃದಯನ ಮನಸ್ಸು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳಬೇಕಲ್ಲವೆ? ಕವಿಗೆ ಸಮಾನವಾದ ಮನಸ್ಸಿನ ಸಂಸ್ಕಾರ, ಸಿದ್ಧತೆ ಇಲ್ಲದವರು ಸಹೃದಯರಲ್ಲ; ನಿಜವಾದ ಓದುಗರಲ್ಲ. ಸಹೃದಯನಿಗೆ ಕವಿಹೃದಯ ಇರಬೇಕು ಎಂಬುದೇ ಅದರ ನಿಜವಾದ ಅರ್ಥ. ವಿಮರ್ಶಕನಿಗೆ ಇನ್ನೊಂದು ಅಥವಾ ವಿಮರ್ಶನ ಪ್ರಜ್ಞೆಗೆ ಇನ್ನೊಂದು ಆಯಾಮ ಇದೆ. ಕೃತಿಯ ಓದಿನಿಂದ ಪಡೆದ ಅನುಭವವನ್ನು, ಅರಿವನ್ನು, ವಿವೇಕವನ್ನು ಭಾಷೆಯ ಮೂಲಕ ವಿವರಿಸುವ, ವಿಶ್ಲೇಷಿಸುವ ಹೊಣೆಗಾರಿಕೆ ವಿಮರ್ಶಕನಿಗಿರುತ್ತದೆ. ಆ ಕಾರಣದಿಂದಾಗಿ ವಿಮರ್ಶಕನ ಮನೋಧರ್ಮ ಸೃಜನಶೀಲ ಸಾಹಿತಿಯ ಮನೋಧರ್ಮಕ್ಕಿಂತ ಸ್ವರೂಪದಲ್ಲಿ ಮತ್ತು ಪ್ರಕ್ರಿಯಾ ವಿವರದಲ್ಲಿ ಭಿನ್ನ ಎಂದು ಮೇಲುನೋಟಕ್ಕೆ ತೋರುವುದಾದರೂ ಮೂಲತಃ ಭಿನ್ನವಾಗಬೇಕಾಗಿಲ್ಲ.

೫. ಒಂದು ಕೃತಿಯ ಬೆಲೆ ನಿರ್ಣಯ ಮಾಡುವವರು ಓದುಗರೊ ಅಥವಾ ವಿಮರ್ಶಕರೊ ?

ಕೃತಿಯ ಓದುಗರಲ್ಲಿ ಅದನ್ನು ಅರ್ಥವಿಸಿಕೊಂಡು ಆಸ್ವಾದಿಸುವುದಕ್ಕೆ ಅಥವಾ ಅರಿವಿಗೆ ತಂದು ಕೊಳ್ಳುವುದಕ್ಕೆ ಸಂಬಂಧಿಸಿದಂತೆ ತರತಮ ವ್ಯತ್ಯಾಸವಿದೆ. ಎಲ್ಲಾ ಓದುಗರೂ ಒಂದೇ ರೀತಿಯಲ್ಲಿ ಕೃತಿಯ ಅನುಭವವನ್ನು ಪಡೆಯಲಾರರು. ಒಬ್ಬನೇ ಓದುಗ ಎಲ್ಲಾ ಸಂರ್ಭದ ಓದಿನಲ್ಲಿಯೂ, ಕೃತಿ ಒಂದೇ ಆದರೂ, ಒಂದೇ ರೀತಿಯ ಅನುಭವವನ್ನು ಪಡೆಯಲಾರ. ಪ್ರತಿ ಓದಿನ ಅನುಭವದಲ್ಲಿ ಅಷ್ಟೊ ಇಷ್ಟೊ

ವ್ಯತ್ಯಾಸ ಆಗಿಯೇ ಆಗುತ್ತದೆ. ಹಾಗೆಯೇ ವಿಮರ್ಶಕರೂ ಕೂಡ. ಓದುಗರಲ್ಲಿ ಆಗಲಿ ವಿಮರ್ಶಕರಲ್ಲಿ ಆಗಲಿ ತರತಮ ವ್ಯತ್ಯಾಸ ಇದ್ದೇ ಇರುತ್ತದೆ. ಸಾಹಿತ್ಯ ಒಂದು ಕಲೆ. ಅದನ್ನು ಸಂಗೀತ, ಶಿಲ್ಪ, ನೃತ್ಯ ಮುಂತಾದ ಲಲಿತಕಲೆಗಳ ಜೊತೆಗೆ ಸೇರಿಸುವುದುಂಟು. ಪರಂಪರೆಯಿಂದ ಆ ಬಗೆಯ ದೃಷ್ಟಿ ಬೆಳೆದು ಬಂದಿದೆ. ಶಿಲ್ಪಕ್ಕೆ ಶಿಲೆ, ಸಂಗೀತಕ್ಕೆ ನಾದ, ನೃತ್ಯಕ್ಕೆ ದೇಹ ಮಾಧ್ಯಮವಾಗಿರುವಂತೆ ಸಾಹಿತ್ಯಕ್ಕೆ ಭಾಷೆ ಮಾಧ್ಯಮ. ಈ ಭಾಷೆ ಯಾವುದೊ ಕವಿ ಅಥವಾ ವ್ಯಕ್ತಿ ಸೃಷ್ಟಿಸಿದ್ದಲ್ಲ. ಅದು ಸಮೂಹದ, ಸಮಾಜದ ಸೃಷ್ಟಿ. ಯಾವುದೇ ಪದಕ್ಕೆ ಇಂಥದೇ ಅರ್ಥ ಎಂಬುದು ಇಲ್ಲ. ಇಂಥದೇ ಅರ್ಥ ಅಥವಾ ಅರ್ಥಗಳು ಎಂದು ಒಂದು ಸಮೂಹದ ಒಂದು ಭಾಷೆಯನ್ನಾಡುವ ಜನ ಗ್ರಹಿಸುತ್ತಾರೆ. ಆದರೆ ಬೇರೆ ಭಾಷೆಯ ಜನ ಹಾಗೇ ಗ್ರಹಿಸಲಾರರು. ಏಕೆಂದರೆ ಆ ಪದಕ್ಕೆ ಅರ್ಥ ಎಂಬುದು ಇಲ್ಲವೇ ಇಲ್ಲ. ಆ ಅರ್ಥ ಒಂದು ನಿರ್ದಿಷ್ಟ ಸಮಾಜ, ನಿರ್ದಿಷ್ಟ ಭಾಷೆಯನ್ನು ಆಡುವ ಜನ ಕೊಟ್ಟುಕೊಂಡ ಅರ್ಥ. ಆದ್ದರಿಂದ ಸಾಹಿತ್ಯದ ಮಾಧ್ಯಮವಾದ ಭಾಷೆ ಬೇರೆ ಲಲಿತಕಲೆಗಳ ಮಾಧ್ಯಮಗಳ ಸ್ವರೂಪಕ್ಕಿಂತ ಭಿನ್ನವಾದದ್ದು, ಸೂಕ್ಷ್ಮವಾದದ್ದು.

ಕವಿಯ ಅನುಭವ ವಿಶಿಷ್ಟವಾದದ್ದು. ಅವನದೇ ಅಥವಾ ಅವಳದೇ ಆದದ್ದು. ಅವನ ಅಥವಾ ಅವಳ ಅನುಭವದಲ್ಲಿಯೂ ಅವನು ಅಥವಾ ಅವಳು ಪಡೆದ ಪರಂಪರೆಯ, ಸಂಸ್ಕೃತಿಯ ಪ್ರಭಾವದ ಪ್ರಮಾಣ ಇದ್ದೇ ಇರುತ್ತದೆ. ಇತರ ಹತ್ತು ಹಲವು ಪ್ರಭಾವದ ಎಳೆಗಳೂ ಸೇರಿಕೊಂಡಿರುತ್ತವೆ. ಆದರೂ, ಅವನ ಅಥವಾ ಅವಳ ಸಂವೇದನಾ ವಿಶಿಷ್ಟಾಂಶವು ಕೂಡ ಒಂದು ಪ್ರಮಾಣದಲ್ಲಿ ಇದ್ದೇ ಇರುತ್ತದೆ. ಕವಿಗೆ ಅಂಥ ವಿಶಿಷ್ಟಾಂಶ ಇರುವಂತೆ ಪ್ರತಿಯೊಬ್ಬ ಓದುಗನಿಗೂ ಅಂಥ ವಿಶಿಷ್ಟಾಂಶ ಇರುತ್ತದೆ. ಆದ್ದರಿಂದ ಒಬ್ಬ ಓದುಗ ಕೃತಿಯನ್ನು ಅರ್ಥವಮಾಡಿಕೊಳ್ಳುವುದಕ್ಕೂ ಇನ್ನೊಬ್ಬ ಓದುಗ ಕೃತಿಯನ್ನು ಅರ್ಥಮಾಡಿಕೊಳ್ಳುವುದಕ್ಕೂ ವ್ಯತ್ಯಾಸ ಇದ್ದೇ ಇರುತ್ತದೆ. ಒಬ್ಬನೇ ಓದುಗ ಒಂದು ಕಾಲ ಸಂದರ್ಭದ ಮನಃಸ್ಥಿತಿಯಲ್ಲಿ ಅರ್ಥ ಮಾಡಿಕೊಳ್ಳುವುದಕ್ಕೂ ಇನ್ನೊಂದು ಕಾಲಸಂದರ್ಭದಲ್ಲಿ ಅರ್ಥಮಾಡಿಕೊಳ್ಳುವುದಕ್ಕೂ ವ್ಯತ್ಯಾಸ ಇರುತ್ತದೆ. ಯಾವ ಕಲೆಯನ್ನು ಅರ್ಥಮಾಡಿಕೊಳ್ಳುವುದಕ್ಕೂ ಒಂದು ಪ್ರಮಾಣದ ಸಿದ್ಧತೆ ಅಗತ್ಯವಾಗುತ್ತದೆ. ಆ ಸಿದ್ಧತೆಯ ವ್ಯತ್ಯಾಸದಿಂದಲೂ ಕೃತಿಯಿಂದ ಓದುಗ ಪಡೆಯುವ ಅನುಭವದಲ್ಲಿ ವ್ಯತ್ಯಾಸ ಆಗುತ್ತದೆ. ವಿಮರ್ಶಕ ಈ ಸಿದ್ಧತೆಗೆ ಸಂಬಂಧಿಸಿದಂತೆ ಹೆಚ್ಚಿನ ಪರಿಣತಿ ಮತ್ತು ಪ್ರಬುದ್ಧತೆಯನ್ನು ಪಡೆದವನಾಗಿರುತ್ತಾನೆ. ಜೀವನದಲ್ಲಿ ಪರಿಣತವಲ್ಲದ ಅಭಿಪ್ರಾಯಕ್ಕೆ ಹಾಗೂ ಪ್ರಬುದ್ಧ ಅಭಿಪ್ರಾಯಕ್ಕೆ ಇರುವ ವ್ಯತ್ಯಾಸದಂತೆ ಓದುಗ, ವಿಮರ್ಶಕರ ಅಭಿಪ್ರಾಯದಲ್ಲೂ ವ್ಯತ್ಯಾಸ ಇರುತ್ತದೆ. ವಿಮರ್ಶಕರಲ್ಲಿಯೇ ಪರಿಣತಿ ವ್ಯತ್ಯಾಸ ಮತ್ತು ಸಂವೇದನ ಸೂಕ್ಷ್ಮದ ವ್ಯತ್ಯಾಸಗಳಿಂದ ಬೇರೆ ಬೇರೆ ಅಭಿಪ್ರಾಯ ಒಂದೇ ಕೃತಿಯ ಬಗ್ಗೆ ಮೂಡುವುದೂ ಉಂಟು. ಒಂದೇ ಕಾಲದಲ್ಲಿ ಬದುಕುತ್ತಿರುವ ಬೇರೆ ಬೇರೆ ವಿಮರ್ಶಕರಲ್ಲಿ ಒಂದೇ ಕೃತಿಯ ಬಗ್ಗೆ ಅಭಿಪ್ರಾಯ ವ್ಯತ್ಯಾಸ ಉಂಟಾಗಬಹುದಾದಂತೆ ಬೇರೆ ಬೇರೆ ಕಾಲದಲ್ಲಿ ಬದುಕುತ್ತಿರುವ ವಿಮರ್ಶಕರಲ್ಲಿಯೂ ಅದೇ ಕೃತಿಯ ಬಗ್ಗೆ ಬೇರೆ ಬೇರೆ ಅಭಿಪ್ರಾಯ ಬರುವುದು ಸಾಧ್ಯ.

೬. ಕವಿಯ ಪ್ರತಿಭಾ ಶಕ್ತಿಯನ್ನು ಅಳೆಯುವ ಮಾನದಂಡಗಳಾವುವು ?

ಪ್ಲೇಟೋ, ಅರಿಸ್ಟಾಟಲ್‌ನ ಕಾಲದಿಂದಲೂ, ಭರತನ ಕಾಲದಿಂದಲೂ ಸಾಹಿತ್ಯ ಕೃತಿಯ, ಕವಿ ಪ್ರತಿಭೆಯ ಸ್ವರೂಪವನ್ನು ಅಳೆಯುವುದಕ್ಕೆ ಅಥವಾ ಅರ್ಥಮಾಡಿಕೊಳ್ಳುವುದಕ್ಕೆ ಅಗತ್ಯವಾದ ಪರಿಕಲ್ಪನೆಗಳನ್ನು ಮಾನದಂಡಗಳನ್ನು ಕಂಡುಕೊಳ್ಳುವ ನಿರೂಪಿಸುವ ಪ್ರಯತ್ನ ನಡೆಯುತ್ತಲೇ ಬಂದಿದೆ. ಆ ಪ್ರಯತ್ನ ಮುಂದುವರೆಯುತ್ತಲೇ ಇದೆ. ಸಾಹಿತ್ಯ ಇರುವವರೆಗೆ, ಸಾಹಿತಿಗಳು ಇರುವವರೆಗೆ ಈ ಮಾನದಂಡಗಳ ಸ್ವರೂಪ ಚರ್ಚೆ ಇದ್ದೇ ಇರುವಂಥದು. ಅದೆಂದೂ ನಿಂತಲ್ಲೇ ನಿಂತು ಜಡಗಟ್ಟುವಂಥದಲ್ಲ. ಸಾಹಿತ್ಯ ಕೃತಿಯಾಗಲಿ, ಸಾಹಿತ್ಯ ಕುರಿತ ಪರಿಕಲ್ಪನೆಗಳಾಗಲಿ, ಮಾನದಂಡಗಳಾಗಲಿ ಮಾನವ ಸಂಸ್ಕೃತಿಯ ಚಲನೆಯ ಜೊತೆಯಲ್ಲಿಯೆ ಮರುಪರಿಶೀಲನೆಗೆ, ಪುನಾರಚನೆಗೆ ಒಳಗಾಗುತ್ತವೆ. ಈ ಎಲ್ಲಾ ಮಾನದಂಡಗಳೂ, ಪರಿಕಲ್ಪನೆಗಳೂ ವಿಮರ್ಶಕ ವ್ಯುತ್ಪತ್ತಿ ಅಂದರೆ ವಿದ್ವತ್ತು, 'ಉಚಿತಾನುಚಿತ ವಿವೇಕ'ಗಳ ಮೂಲಕ ಬಳಸಿಕೊಳ್ಳಬಹುದಾದ ಉಪಕರಣಗಳು. ಅವುಗಳ ಜೊತೆಗೆ ವಿಮರ್ಶಕನಿಗೆ ವಿಶಿಷ್ಟವಾದ ಸಂವೇದನಾ ಸೂಕ್ಷ್ಮವೊಂದು ಇದ್ದೇ ಇರುತ್ತದೆ. ಅದರ ನಿರ್ದೇಶನವೂ, ತುಡಿತದ ಎಳೆತವೂ ಹೇಗೋ ವಿವರಿಸಲಾಗದ ಸೂಕ್ಷ್ಮದಲ್ಲಿ ಸೇರಿಕೊಂಡಿರುತ್ತವೆ. ಅದೇ ವಿಮರ್ಶಕನಲ್ಲಿಯೇ ಬೇರೆ ಬೇರೆ ಕಾಲ, ಸಂದರ್ಭಗಳಲ್ಲಿ

ತನ್ನತನದ ಸೂಕ್ಷ್ಮತೆ ಒಂದೇ ರೀತಿ ಇರುತ್ತದೆ ಎಂದಾಗಲಿ, ಇರಬೇಕು ಎಂದಾಗಲಿ ಹೇಳುವಂತಿಲ್ಲ. ಅದೊಂದು ನಿತ್ಯ ತೆರೆದಿರುವ ಅಂದರೆ ವಿಮರ್ಶಕ ಇರುವವರೆಗೂ ತೆರೆದಿರುವ ಅಂಶ.

೭. ವಿಮರ್ಶೆಯಲ್ಲಿ ಪ್ರಾಮಾಣಿಕತೆಯ ಸ್ಥಾನವೇನು ?

ಉತ್ತಮ ಅಥವಾ ಆರೋಗ್ಯಕರ ಸಮಾಜದ ಕಲ್ಪನೆಯನ್ನು ಕಟ್ಟಿಕೊಳ್ಳುವಾಗ ಆ ಸಮಾಜದಲ್ಲಿರುವ ಎಲ್ಲರೂ ಪ್ರಾಮಾಣಿಕರಾಗಿರಬೇಕು ಎಂದು ನಿರೀಕ್ಷಿಸುವುದು ಸಹಜ. ಆದರ್ಶ ಸಮಾಜ ಹಾಗೇ ಇರಬೇಕಾದದ್ದು. ಆದರೆ ಎಂದೂ, ಯಾವ ಕಾಲದಲ್ಲಿಯೂ ಅಂಥ ಸಮಾಜ ನಿರ್ಮಾಣವಾದ ಉದಾಹರಣೆ ಇಲ್ಲ. ಅಂದರೆ ಎಲ್ಲರೂ ಪ್ರಾಮಾಣಿಕರಾಗಿ ಇದ್ದ ಸಮಾಜ ಎಂದೂ ಇದ್ದದ್ದಿಲ್ಲ. ಈ ವಾಸ್ತವ ಸತ್ಯದ ಅರಿವು ನಮಗೆ ನಿಮಗೆ ಎಲ್ಲರಿಗೂ ಇರಬೇಕಾದದ್ದು. ಸಾಹಿತ್ಯ ವಿಮರ್ಶಕನು ಯಾವ ಕಾಲದವನೇ ಆಗಲಿ ಸಮಾಜ ಜೀವಿ. ಎಲ್ಲ ವಿಮರ್ಶಕರೂ ಪ್ರಾಮಾಣಿಕರಾಗಿಯೇ ಎಲ್ಲಾ ಸಂದರ್ಭಗಳಲ್ಲಿಯೂ ಇದ್ದೇ ಇರುತ್ತಾರೆಂದು ಹೇಳುವಂತಿಲ್ಲ. ಹಾಗೆಂದು ಪ್ರಾಮಾಣಿಕ ವಿಮರ್ಶಕರೇ ಇಲ್ಲ ಎಂಬ ದುಡುಕಿನ ತೀರ್ಮಾನಕ್ಕೂ ಬರಬೇಕಾದದ್ದಿಲ್ಲ. ಶ್ರೇಷ್ಠರು, ಶ್ರೇಷ್ಠವಾದದ್ದು ಯಾವ ಕಾಲದಲ್ಲಿಯೆ ಆಗಲಿ, ಯಾವ ಕ್ಷೇತ್ರದಲ್ಲಿಯೇ ಆಗಲಿ ಅಪರೂಪವಾದದ್ದು. ಆದರೆ ಅಂಥ ಅಪರೂಪದ ವ್ಯಕ್ತಿ ಮತ್ತು ಸಂಗತಿಗಳಿಂದಲೇ ಮಾನವ ನಾಗರಿಕತೆ ಹೆಚ್ಚುಹೆಚ್ಚು ಮಾನವೀಯವಾಗಿ ಬದುಕುವುದಕ್ಕೆ ಅರ್ಹವಾದ ಸಂಸ್ಕೃತಿ ಸಂದರ್ಭವನ್ನು ಕಟ್ಟಿಕೊಳ್ಳುತ್ತ ಬರುವುದು ಸಾಧ್ಯವಾಗಿದೆ. ಶ್ರೇಷ್ಠ ಸೃಜನಶೀಲ ಸಾಹಿತಿಗಳೂ ಹೇಗೆ ಅಪರೂಪವೋ ಹಾಗೆಯೆ ಶ್ರೇಷ್ಠ ವಿಮರ್ಶಕರೂ ಅಪರೂಪವೆ.

ವಿಮರ್ಶಕ ಪ್ರಾಮಾಣಿಕ ಆಗಿರುವುದೇ ಶ್ರೇಷ್ಠ ವಿಮರ್ಶೆಗೆ ಕಾರಣವಾಗುವುದಿಲ್ಲ. ಪ್ರಾಮಾಣಿಕರೆಲ್ಲ ವಿಮರ್ಶಕರಲ್ಲ. ಪ್ರಾಮಾಣಿಕತೆಯೊಂದೇ ಉತ್ತಮ ವಿಮರ್ಶೆಗೆ ಮಾನದಂಡವಲ್ಲ. ವಿಮರ್ಶೆಯಲ್ಲಿ ಪ್ರಾಮಾಣಿಕತೆ ಇರಬೇಕಾದದ್ದು; ಇರಲೇಬೇಕಾದದ್ದು. ಆದರೆ ಅದೊಂದೇ ವಿಮರ್ಶಕನ ವಿಮರ್ಶೆಯ ಗುಣವನ್ನು ನಿರ್ದೇಶಿಸುವ, ನಿರ್ಧರಿಸುವ ಪ್ರಮಾಣವಲ್ಲ. ವಿಮರ್ಶಕ ಪ್ರಾಮಾಣಿಕನಾಗಿದ್ದೂ ದಡ್ಡನಾಗಿರಬಹುದು. ಎದುರಿಗಿರುವ ಕೃತಿ ವಿಮರ್ಶೆಗೆ ಅಗತ್ಯವಾದ ಸಂವೇದನ ಸಂಸ್ಕಾರ, ವ್ಯುತ್ಪತ್ತಿ ಬಲ ವಿಮರ್ಶಕನಲ್ಲಿ ಇಲ್ಲದೆ ಇದ್ದಾಗ ಅವನ ಪ್ರಾಮಾಣಿಕತೆ ಎಂಬುದು ಹೆಚ್ಚಿನ ಪ್ರಯೋಜನಕ್ಕೆ ಬರಲಾರದು. ಹಾಗೆಯೆ ಸಂವೇದನಶೀಲತೆ, ವ್ಯುತ್ಪತ್ತಿಬಲ ಸಮೃದ್ಧ ಮತ್ತು ಸೂಕ್ಷ್ಮವಾಗಿದ್ದರೂ ಪ್ರಾಮಾಣಿಕತೆ ಇಲ್ಲದೆ ಇದ್ದರೆ ವಿಮರ್ಶೆ ಒಂದು ಮೋಸದ ವ್ಯವಹಾರವೂ ಆಗಿಬಿಡುವ ಸಂಭವವೂ ಇದೆ, ಅಪಾಯವೂ ಇದೆ. ಸಂಸ್ಕೃತಿಯನ್ನು ಕಟ್ಟುವ ಹೊಣೆಗಾರಿಕೆಯಲ್ಲಿ ಸೃಜನಶೀಲ ಸಾಹಿತಿಯಂತೆಯೇ ಪಾಲುದಾರನಾಗಿರುವ ವಿಮರ್ಶಕನಲ್ಲಿ ಪ್ರಾಮಾಣಿಕತೆ ಇಲ್ಲದೆ ಇದ್ದರೆ ಸಂಸ್ಕೃತಿದ್ರೋಹ ಮಾಡುವಲ್ಲಿ ಅವನು ಪಾಲುದಾರನಾದಂತೆ ಆಗುತ್ತದೆ.

೮. "ನೀನೇರಬಲ್ಲೆಯಾ ನಾನೇರುವೆತ್ತರಕೆ? ನೀ ಹಾರಬಲ್ಲೆಯಾ ನಾ ಹಾರುವಗಲಕ್ಕೆ? ನೀಮುಳುಗ ಬಲ್ಲೆಯಾ ನಾ ಮುಳುಗುವಾಳಕ್ಕೆ?" ಎಂದು ಕುವೆಂಪು ಅವರು ವಿಮರ್ಶಕರಿಗೆ ಸವಾಲುಹಾಕುತ್ತಾರಲ್ಲಾ, ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಸಾಹಿತ್ಯ ವಿಮರ್ಶೆಯ ಪರಂಪರೆ ಬೆಳೆದದ್ದು ನಮ್ಮಲ್ಲಿ ತೀರಾ ಇತ್ತೀಚಿನ ಕಾಲದಲ್ಲಿ; ಸರಿಯಾಗಿ ಒಂದು ಶತಮಾನ ಕೂಡ ಆಗಿಲ್ಲ. ಪಾಶ್ಚಾತ್ಯದೇಶಗಳಲ್ಲಿ ಮುಖ್ಯವಾಗಿ ಗ್ರೀಸ್, ಗ್ರೇಟ್‌ಬ್ರಿಟನ್, ಫ್ರಾನ್ಸ್ ಇಂಥ ದೇಶಗಳಲ್ಲಿ ನಮಗಿಂತ ಬಹಳ ಹಿಂದಿನಿಂದಲೂ ಸಾಹಿತ್ಯ ವಿಮರ್ಶೆ ಬೆಳೆದು ಬಂದಿದೆ. ನಮ್ಮಲ್ಲಿ ಸೃಜನಶೀಲ ಸಾಹಿತ್ಯ ಹಾಗೂ ಕಾವ್ಯಮೀಮಾಂಸೆಯ ಪರಂಪರೆ ಬಹಳ ಹಿಂದಿನಿಂದಲೂ ಬೆಳೆದುಬಂದಿದೆ ಯಾದರೂ ಅಂಥ ಪ್ರಾಚೀನತೆ ಕೃತಿವಿಮರ್ಶೆಯ ಪರಂಪರೆಗೆ ಇಲ್ಲ. ಕಾವ್ಯ ಮೀಮಾಂಸೆಯನ್ನು ಪರಿಕಲ್ಪನೆ, ಸಿದ್ಧಾಂತ ರೂಪಗಳಲ್ಲಿ ಹೇಳುವ ಮಾತುಗಳು ಸಾರ್ವತ್ರಿಕವಾಗಿರುತ್ತವೆ; ನಿರ್ದಿಷ್ಟ ಕೃತಿ ಅಥವಾ ಕವಿಕುರಿತು ಹೇಳಿದ್ದಾಗಿರುವುದಿಲ್ಲ. ಆದ್ದರಿಂದ ಕವಿಗಳ 'ಅಹಂ'ಕಾರಕ್ಕೆ ಸೂಜಿಮೊನೆ ತಾಗಿಸುವ ಪ್ರಶ್ನೆ ಅಲ್ಲಿ ಏಳುವುದೇ ಇಲ್ಲ. ಕೃತಿ ವಿಮರ್ಶೆ ಕೃತಿಯ ಬೆಲೆ ಕಟ್ಟುವ ಕೆಲಸವನ್ನು ಮಾಡುವಂಥದು. ಕೃತಿಯ ಅಭಿವ್ಯಕ್ತಿ ಸಮರ್ಪಕತೆ ಮತ್ತು ಕೃತಿಯ ಮೂಲಕ ಪರಿಣಾಮಗೊಳ್ಳುವ ಮೌಲ್ಯದೃಷ್ಟಿ ಕುರಿತ ವಿವೇಚನೆ,

ಮೌಲ್ಯಮಾಪನ ವಿಮರ್ಶೆಯಲ್ಲಿ ನಡೆಯುವುದರಿಂದ ಕೃತಿಯ ಶಕ್ತಿ, ದೌರ್ಬಲ್ಯ ಎರಡರ ಬಗೆಗಿನ ಚರ್ಚೆಯೂ ವಿಮರ್ಶೆಯಲ್ಲಿ ನಡೆಯುವಂತಾಗುತ್ತದೆ. ತನ್ನ ಕೃತಿ ಶ್ರೇಷ್ಠವಾಗಿದೆ, ಸರ್ವಾಂಗ ಸುಂದರವಾಗಿದೆ ಎಂದು ನಂಬಿರುವ ಅಥವಾ ಇತರರು ಹಾಗೆ ಅಂದುಕೊಳ್ಳಬೇಕು ಎಂದು ನಿರೀಕ್ಷಿಸುವ ಕವಿಗೆ ಅವನ / ಅವಳ ಕೃತಿಯ ಕೊರತೆಯನ್ನು ಕುರಿತು ಏಳಬಹುದಾದ ವಿಮರ್ಶೆಯ ಬಗೆಗೆ ಅಗತ್ಯವಾದ ಸಹಿಸುವ ಸಂಸ್ಕೃತಿಯ ಕೊರತೆ ಕಾಣುತ್ತದೆ. ಈ ಕೊರತೆ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಬಹುಪಾಲು ಕವಿ, ಸೃಜನಶೀಲ ಸಾಹಿತಿಗಳಲ್ಲಿ ಉಳಿದುಕೊಂಡು ಬಂದಿದೆ. ಸಾಹಿತ್ಯ ಕ್ಷೇತ್ರದಲ್ಲಿ ಸೃಜನಶೀಲ ಸಾಹಿತಿಗಳು, ಸಾಹಿತ್ಯಕ್ಷೇತ್ರದ ಪ್ರಥಮ ದರ್ಜೆಯ ಪ್ರಜೆಗಳೆಂತಲೂ ಅಥವಾ ಔರಸಪುತ್ರರೆಂತಲೂ ವಿಮರ್ಶಕರು ಸಾಕುಮಕ್ಕಳೆಂತಲೂ ಪರಿಭಾವಿಸುವ ಪರಿಪಾಠ ಬೆಳೆದುಬಂದಿದೆ. ಅದರ ಪರಿಣಾಮವೇ ಕುವೆಂಪು ಅಂಥವರೂ ಕೂಡ 'ನಾನೇರುವೆತ್ತರಕೆ ನೀನೇರಬಲ್ಲೆಯಾ....'' ಎಂಬಂಥ ಮಾತುಗಳನ್ನು ಆಡುವುದಕ್ಕೆ ಕಾರಣ. ಆದರೆ ಅದು ಸರಿಯಾದ ದೃಷ್ಟಿ ಅಲ್ಲ.

ಸೃಜನಶೀಲ ಕೃತಿರಚನೆಯ ಸಂದರ್ಭದಲ್ಲಿ ಎದುರಿಸುವ ಮೊದಲ ಸವಾಲು ಭಾಷೆಗೆ ಸಂಬಂಧಿಸಿದ್ದು. ಕವಿ ಎಷ್ಟೇ ಸಮರ್ಥನಾಗಿದ್ದರೂ ಆತ ಬಳಸುವ ಭಾಷೆಗೆ ಸಂಬಂಧಿಸಿದಂತೆ ಸರ್ವ ಸಮರ್ಪಕವಾದ ರೀತಿಯಲ್ಲಿ ಬಳಸಬಲ್ಲನೆಂಬುದು ಸಾಧ್ಯವಿಲ್ಲ. ಪಂಪ, ಕುಮಾರವ್ಯಾಸ, ಕುವೆಂಪು, ಬೇಂದ್ರೆ, ಅಡಿಗ ಇಂಥವರು ಕನ್ನಡ ಭಾಷೆಯನ್ನು ಅತ್ಯಂತ ಸೃಜನಶೀಲವಾಗಿ, ಉಜ್ವಲ ಪ್ರತಿಭಾಶಕ್ತಿಯಿಂದ ಬಳಸಿದವರು. ಆದರೆ ಅವರೂ ಕೂಡ ಕನ್ನಡ ಭಾಷೆಗೆ ಸಾಧ್ಯವಾಗುವಂಥ ಅಭಿವ್ಯಕ್ತಿ ಶಕ್ತಿಯನ್ನು ಅದರೆಲ್ಲಾ ಸಾಧ್ಯತೆಗಳಲ್ಲಿ ಬಳಸಿದ್ದಾರೆಂದು ಹೇಳುವಂತಿಲ್ಲ. ಆದ್ದರಿಂದ ಮಾಧ್ಯಮದ ಬಳಕೆಯಲ್ಲಿ ಪರಿಪೂರ್ಣತೆಯೆಂಬುದಿಲ್ಲ. ಪರಿಪೂರ್ಣ ಯಶಸ್ಸು ಎಂಬುದು ಇಲ್ಲ. ಯಶಸ್ಸಿನಲ್ಲಿ ತರತಮಗಳಿರುತ್ತವೆ; ಅಷ್ಟೆ.

ಅನುಭವದಲ್ಲಿ ಕೂಡ ಪ್ರಜ್ಞಾಪೂರ್ವಕ ನೆಲೆಯಲ್ಲಿ ಗ್ರಹಿಸಿದ ಅನುಭವ ಮಾತ್ರವೇ ಕಾವ್ಯದಲ್ಲಿ, ಸೃಜನಶೀಲ ಕೃತಿಯಲ್ಲಿ ಕ್ರಿಯಾಶೀಲವಾಗಿರುವುದಿಲ್ಲ. ಪ್ರಜ್ಞಾಪೂರ್ವಕ ಅನುಭವದ ಜೊತೆಗೆ ಅಪ್ರಜ್ಞಾಪೂರ್ವಕ ಅನುಭವದ ನೆಲೆಯಿಂದಲೂ ಬಂದು ಸೃಜನಶೀಲ ಕ್ರಿಯೆ ನಡೆಯುತ್ತಿರುವಾಗ ಅಚಾನಕ್ಕಾಗಿ ಕೂಡಿಕೊಳ್ಳುವ ಅನುಭವಾಂಶಗಳು ಅನುಭವ ಸಾಮಗ್ರಿಗಳು ಇದ್ದೇ ಇರುತ್ತವೆ. ಕೃತಿ ರಚನೆಗೆ ತೊಡಗುವ ಸಂದರ್ಭದಲ್ಲಿ ಪಡೆದ ಅನುಭವವು ಕೃತಿ ರಚನೆಯ ಪ್ರಕ್ರಿಯೆಯಲ್ಲಿ ಪುನಾರಚಿತವಾಗುತ್ತ ಇರುವುದರಿಂದಾಗಿ ಉಂಟಾಗುವ ಅನುಭವದ ಹೊಸ ಸ್ವರೂಪದ ಬಗ್ಗೆ, ಪರಿಣಾಮಗೊಳ್ಳುವ ಪಾಕದ ಬಗ್ಗೆ ಸ್ವತಃ ಕವಿಗೇ ಪರಿಪೂರ್ಣವಾದ ಅರಿವು ಪ್ರಜ್ಞಾನೆಲೆಯಲ್ಲಿ ಇರುವುದು ಸಾಧ್ಯವಿಲ್ಲ. ಕೃತಿರಚನೆಯಾದ ಮೇಲೆಯೂ ಕವಿಗೇ ಸ್ವತಃ ಗೋಚರವಾಗದೆ ಇರುವಂಥ, ಅವನ/ಅವಳ ಜಾಗೃತ ಪ್ರಜ್ಞೆಗೆ ಪ್ರವೇಶಗೊಂಡಿರದೇ ಇರುವಂಥ ಅರ್ಥಸೂಕ್ಷ್ಮಗಳು, ಅನುಭವ ಸೂಕ್ಷ್ಮಗಳು ಅವನ/ಅವಳ ಕೃತಿಯಲ್ಲಿಯೇ ಇರುವುದು ಸಾಧ್ಯ. ಆದ್ದರಿಂದ ಕವಿಗೇ ಅವನ ಕಾವ್ಯ ಸಂಪೂರ್ಣವಾಗಿ ಅರ್ಥವಾಗದೆ, ಸ್ವಾಧೀನವಾಗದೆ ಇರುವಾಗ, ಅವನಿಗೇ ಸಂಪೂರ್ಣವಾಗಿ ಅರ್ಥವಾಗದೇ ಇರಬಹುದಾದ ಅವನ ಕಾವ್ಯದ ಬಗೆಗೆ ಅಷ್ಟರಮಟ್ಟಿಗೆ ಆತ ಅವಿಮರ್ಶಕನಾಗಿರುತ್ತಾನೆ. "ತನ್ನ ಕಾವ್ಯಕೆ ತಾಂ ಮಹಾಕವಿ ಮಣಿಯುವಂತೆ" ಎಂಬ ಮಾತು ಕುಡ ಕುವೆಂಪು ಅವರದೆ. ಕವಿಗೆ ತನ್ನ ಕಾವ್ಯಕ್ಕೇ ಮಣಿಯುವಂಥ ಭಾವ ಪ್ರೇರಣೆ ಉಂಟುಮಾಡುವ ಅಂಶ ಅಥವಾ ಸಂದರ್ಭ ಇರುತ್ತದೆ ಎಂದಾದಾಗ, ಕವಿಯೇ ವಿಸ್ಮಿತನಾಗುವಂತೆ ಕೃತಿಗೆ ಹೊಸಹೊಸ ಅರ್ಥಗಳನ್ನು ಸ್ಫುರಿಸುವ ಶಕ್ತಿ ಇರುತ್ತದೆ. ಓದುಗರೂ ಅಂಥ ಪ್ರತಿಭಾಸಂಪನ್ನರಾಗಿದ್ದರೆ ಅಂಥ ಹೊಸ ಹೊಸ ಅರ್ಥ ಪರಂಪರೆಗಳು ಅವರಿಗೂ ಗೋಚರವಾಗಬಹುದು, ಅವರಲ್ಲಿಯೂ ಸ್ಫುರಿಸಬಹುದು ಎಂಬ ತಿಳಿವಳಿಕೆ ಕವಿಗಿರಬೇಕಾಗುತ್ತದೆ. ವಿಮರ್ಶಕ ಅಂಥ ಓದುಗನಾಗಿರಲಾರ ಎಂದು ಭಾವಿಸುವುದು ಸರಿಯಾದ ತಿಳಿವಳಿಕೆಯಲ್ಲ.

೯. ನಿಮ್ಮ ದೃಷ್ಟಿಯಲ್ಲಿ ಜೀವನ ಎಂದರೇನು?

ಹುಟ್ಟಿದಂದಿನಿಂದ ಚಟ್ಟ ಏರುವವರೆಗಿನ ಅನುಭವದ ಮೊತ್ತ.

೦೧-೫-೨೦೦೧ರಂದು ಎಂ. ಮಹೇಶ ಕುಮಾರ್ ಎಂಬ ಬಿ.ಇಡಿ. ವಿದ್ಯಾರ್ಥಿ ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರ.

❑

೮೪೭೭, ಪ್ರೀತಿ, ಕಾಮಾಕ್ಷಿ ಆಸ್ಪತ್ರೆ ಹಿಂದೆ, ಕುವೆಂಪುನಗರ, ಮೈಸೂರು ೫೭೦ ೦೦೯

೩

ನಾನು ಮತ್ತು ಸಂಶೋಧನೆ

ಎಂ.ಎಂ. ಕಲಬುರ್ಗಿ

ಸರ್ವಜ್ಞಂ ತದಹಂ ವಂದೇ । ಪರಂಜ್ಯೋತಿಸ್ತಮೋಪಹಂ ।
ಪ್ರವೃತ್ತಾ ಯನ್ಮುಖಾದ್ದೇವೀ । ಸರ್ವಭಾಷಾಸರಸ್ವತೀ ॥
(ನಾಗವರ್ಮನ ಕರ್ಣಾಟ ಭಾಷಾಭೂಷಣಂ ೧-೧)

ಸರ್ವ ಭಾಷಾ ಸರಸ್ವತಿ ಪರಿವಾರದವರಾದ ನಿಮಗೆ ನಮಸ್ಕಾರ.

ಸ್ನೇಹಿತರೇ, ನಾನು ಕನ್ನಡ ಭಾಷಾಸರಸ್ವತಿಯನ್ನು ಇಲ್ಲಿ ಪ್ರತಿನಿಧಿಸುತ್ತಿದ್ದೇನೆ. ನನ್ನ ಕನ್ನಡ ಸರಸ್ವತಿಯ ದೇಶ ವಿಸ್ತಾರವಾದುದು, ಭಾಷೆ ಪ್ರಾಚೀನವಾದುದು, ಸಾಹಿತ್ಯ ಸಮೃದ್ಧವಾದುದು. ಇನ್ನಷ್ಟು ಸ್ಪಷ್ಟ ಪಡಿಸುವುದಾದರೆ, ಸಂಸ್ಕೃತ-ಪ್ರಾಕೃತಗಳನ್ನು ಬಿಟ್ಟರೆ ಸಮಗ್ರ ಭಾರತದಲ್ಲಿಯೇ ಭಾಷೆಯ ಪ್ರಾಚೀನತೆ, ಸಾಹಿತ್ಯದ ಅನನ್ಯತೆ ದೃಷ್ಟಿಯಿಂದ ನನ್ನ ಕನ್ನಡದ ಸ್ಥಾನ ಪ್ರಥಮಪಂಕ್ತಿಯದಾಗಿದೆ.

ಎಲ್ಲ ರಾಜ್ಯಗಳಂತೆ ಕನ್ನಡದ ಮೇಲೆಯೂ ಪ್ರಾಚೀನ ಕಾಲದಲ್ಲಿ ಸಂಸ್ಕೃತಿ, ಆಧುನಿಕ ಕಾಲದಲ್ಲಿ ಇಂಗ್ಲಿಷ್ ಭಾಷೆ - ಸಾಹಿತ್ಯಗಳು ತಮ್ಮತಮ್ಮ ಪ್ರಭಾವ ಬೀರಿವೆ. ಹೀಗಿದ್ದೂ ಕನ್ನಡ ಈ ಪ್ರಭಾವಗಳನ್ನು ಜೀರ್ಣಿಸಿಕೊಳ್ಳುತ್ತ, ಕೆಲವೊಮ್ಮೆ ಪ್ರತಿಭಟಿಸುತ್ತ, ಉದ್ದಕ್ಕೂ ತನ್ನತನವನ್ನು ಮೆರೆದಿದೆ. ಈ 'ತನ್ನತನ'ದಿಂದಾಗಿಯೇ ಸಾಮಾನ್ಯವಾಗಿ ಪ್ರತಿವರ್ಷವೂ ಕನ್ನಡ ಸಾಹಿತಿಗಳು ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಗೌರವ ಗಳಿಸುತ್ತ ಬಂದಿದ್ದಾರೆ. ಈ ವರ್ಷ ಸಂಶೋಧನ ಸಾಹಿತ್ಯ ಪ್ರಕಾರದ ಮೂಲಕ ಈ ಗೌರವವನ್ನು ಮುಂದುವರಿಸಿದ ಭಾಗ್ಯ ನನ್ನದಾಗಿದೆ.

ಭಾರತದ ಆತ್ಮ ಹಳ್ಳಿಗಳಲ್ಲಿದೆ. ನಾನು ಅಂಥ ಹಳ್ಳಿ ಮೂಲದ ವ್ಯಕ್ತಿ. ನನ್ನ ತಂದೆ ತಾಯಿಗಳು ಬುದ್ಧಿವಂತರಲ್ಲ, ಶ್ರದ್ಧಾವಂತರು. ೨೦ ಜನ ಸದಸ್ಯರನ್ನೊಳಗೊಂಡ ನನ್ನ ಕುಟುಂಬದ ಮುಖ್ಯ ಲಕ್ಷಣ ಅವಿಭಕ್ತ ಪ್ರಜ್ಞೆ ಮತ್ತು ಶ್ರಮಸಂಸ್ಕೃತಿ. ಇವುಗಳನ್ನು ಮೈಗೂಡಿಸಿಕೊಂಡು ಬೆಳೆದ ನಾನು ವೈಯಕ್ತಿಕವಾಗಿ ಪ್ರೀತಿಸುತ್ತ ಬಂದ ವಿಷಯಗಳು ಎರಡು - ಕನ್ನಡ ಮತ್ತು ಬಸವೇಶ್ವರ. ಇವೆಲ್ಲ ನನ್ನ ವ್ಯಕ್ತಿತ್ವವನ್ನು, ನನ್ನ ಸಾಹಿತ್ಯ ವ್ಯಕ್ತಿತ್ವವನ್ನು ರೂಪಿಸಿವೆ.

ಅವಿಭಕ್ತ ಕುಟುಂಬದ ವ್ಯಕ್ತಿಗೆ ಪರಿವಾರ ಮತ್ತು ಪರಂಪರೆಗಳ ಬಗೆಗೆ ಅಗಾಧ ಪ್ರೀತಿ, ಕೌಟುಂಬಿಕ ಪ್ರತಿಷ್ಠೆಯ ಬಗೆಗೆ ಸದಾ ಎಚ್ಚರ ಇವು ಕಾರಣವಾಗಿಯೇ ನನ್ನ ದೇಶವನ್ನು ಪ್ರೀತಿಸುವ, ನನ್ನ ಪರಂಪರೆಯನ್ನು ಹುಡುಕುವ ಸಂಶೋಧಕನಾಗಿ ನಾನು ರೂಪಗೊಂಡೆನೆಂದು ತೋರುತ್ತದೆ.

ನನ್ನ ಪ್ರಾಥಮಿಕ ಶಿಕ್ಷಣ ಜರುಗಿದುದು ಹಳ್ಳಿಯಲ್ಲಿ, ಪ್ರೌಢಶಿಕ್ಷಣ ಜರುಗಿದುದು ಹಳ್ಳಿ ಮನಸ್ಸಿನ ನಗರದಲ್ಲಿ. ಹೀಗಾಗಿ ನಾನು ನಗರ ಭಾಷೆಗಳಿಗೆ ವಿಸ್ತರಿಸಿಕೊಳ್ಳದೆ ನನ್ನ ಕನ್ನಡಕ್ಕೆ ಸೀಮಿತಗೊಂಡೆನು. ಇದು ನನ್ನನ್ನು ಕುಬ್ಜನನ್ನಾಗಿಸಲಿಲ್ಲ, ನನ್ನ ಮೂಲಕ ನನ್ನನ್ನು ನೋಡುವ ದೃಷ್ಟಿಕೋನವನ್ನು ದಯಪಾಲಿಸಿತು. ಇದರಿಂದಾಗಿಯೇ ನಾನು ಕೇವಲ ಚರಿತ್ರೆಯ ಸಂಶೋಧಕನಾಗಿ ಉಳಿಯದೆ, ಸಂಸ್ಕೃತಿ ಚಿಂತಕನಾಗಿಯೂ ಬೆಳೆಯಲು ಸಾಧ್ಯವಾಗಿರಬಹುದು.

ಸಂಶೋಧನ ಬರೆವಣಿಗೆ ಸಂದರ್ಭದಲ್ಲಿ ನನಗೆ ಯಾವತ್ತೂ ಮಾರ್ಗದರ್ಶಿಯಾದುದು "ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ" ಎಂಬ ಬಸವಣ್ಣನ ಮಾತು. ಸಾಮಾಜಿಕ ನ್ಯಾಯಕ್ಕೆ, ಅದೇ ವೇಳೆಗೆ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಚ್ಯುತಿ ಬರದಂತೆ ಬರೆಯಬೇಕೆಂಬುದು ಇದರ ಅರ್ಥ. ಹೀಗಾಗಿ ಸಮಾಜವನ್ನು ನಾಶಮಾಡಲು ಅನೇಕ ಸಾಧನಗಳಿರುವಾಗ, ಹೆಚ್ಚಿನದಾಗಿ ಸಾಹಿತ್ಯವೂ ಇನ್ನೊಂದು ಸಾಧನವಾಗಬಾರದೆಂದು ನಾನು ಎಚ್ಚರವಹಿಸುತ್ತ ಬಂದಿದ್ದೇನೆ.

ನನ್ನದು ಮೂಲತಃ ಸೃಜನಶೀಲ ಮನಸ್ಸು. ಕವಿಯಾಗಬೇಕಿದ್ದವನು ಸಂದರ್ಭದ ಒತ್ತಡದಿಂದಾಗಿ ಸಂಶೋಧಕನಾದೆನೆಂದು ತೋರುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ ನನ್ನ ಸಂಶೋಧನೆಯ ಸಂಗೀತದಲ್ಲಿ ಸೃಜನಶೀಲತೆಯ ಶ್ರುತಿ ಆಗಾಗ ಕೇಳಿಸುತ್ತದೆ.

ಮೂಲತಃ ನಾನು ಶಿಕ್ಷಕ, ಆಮೇಲೆ ಸಂಶೋಧಕ. ನನ್ನ ಸಂಶೋಧನೆಗೆ ಸುಮಾರು ೪೦ ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ನಾನು ಸಾಮಾನ್ಯವಾಗಿ ಬರೆಯಬಹುದಾದಕ್ಕಿಂತ ಸ್ವಲ್ಪ ಹೆಚ್ಚು ಬರೆದೆನೆಂದು ತೋರುತ್ತದೆ. ಇದಕ್ಕೆ ಕಾರಣ, ನನಗೆ ಉದ್ದಕ್ಕೂ ಒದಗಿ ಬಂದ ಸಾಂಸ್ಥಿಕ ಮತ್ತು ಸಾಮಾಜಿಕ ಕಿರಿಕಿರಿಗಳು. ನಾನು ಸಂಸ್ಥೆಗಳನ್ನು, ಸಮಾಜವನ್ನು ಪ್ರಾಮಾಣಿಕವಾಗಿ ಪ್ರೀತಿಸಿದ್ದೇ ಇದಕ್ಕೆ ಕಾರಣ. ದಿನನಿತ್ಯದ ಈ ಕಿರಿಕಿರಿಗಳನ್ನು ಮರೆಯಲು ನನಗೆ ಬರವಣಿಗೆಯೇ ಅನಿವಾರ್ಯ ದಾರಿಯಾಗಿ ಪರಿಣಮಿಸಿತು. ಇದಲ್ಲದೆ, ಹೊತ್ತು ಕಳೆಯಲು ನನಗೆ ಬೇರೆ ಹವ್ಯಾಸಗಳಿಲ್ಲವಾಗಿ, ಈ ಬರವಣಿಗೆಯಲ್ಲಿಯೇ ವಿಷಯ ವೈವಿಧ್ಯದ ಇನ್ನೊಂದು ದಾರಿಯನ್ನು ಹುಡುಕಿಕೊಂಡೆನು. ಇದರ ಫಲವಾಗಿ ವ್ಯಾಕರಣ, ಅಲಂಕಾರ, ಛಂದಸ್ಸು, ನಿಘಂಟು, ಹಸ್ತಪ್ರತಿ, ಗ್ರಂಥಸಂಪಾದನೆ, ಜಾನಪದ, ನಾಮವಿಜ್ಞಾನ ಇತ್ಯಾದಿ ಕ್ಷೇತ್ರಗಳು ನನ್ನ ತೆಕ್ಕೆಗೆ ಬಂದವು. ಇವುಗಳಿಗಿಂದ ಭಾಷೆ–ಸಾಹಿತ್ಯ–ಸಮಾಜ–ಧರ್ಮ ಇತಿಹಾಸ ಕ್ಷೇತ್ರಗಳ ಅಂತರಶಿಸ್ತೀಯದಲ್ಲಿ ರೂಪಗೊಳ್ಳುವ 'ಸಂಸ್ಕೃತಿಯ ಶೋಧ'ದಲ್ಲಿ ಹೆಚ್ಚು ಆಸಕ್ತಿ ಬೆಳೆಸಿಕೊಂಡೆನು.

* * *

ಎಂ.ಎ. ಮುಗಿಯುತ್ತಲೇ (೧೯೬೭) ನಾನು ಸಂಶೋಧನೆ ಆರಂಭ ಮಾಡಿದ್ದು, ಪಿಎಚ್.ಡಿ. ಅಧ್ಯಯನಕ್ಕೆ ತೊಡಗುವ ಮೂಲಕ (೧೯೬೩). ಈ ಅಧ್ಯಯನದ ವಿಷಯ, ಕನ್ನಡ ಸಾಹಿತ್ಯದ ಮೊದಲ ಘಟ್ಟವಾಗಿದೆ. ಕಳೆದುಹೋದ ಈ ಘಟ್ಟದಲ್ಲಿ ಉಳಿದುನಿಂತ ಏಕೈಕ ಅನರ್ಘ್ಯರತ್ನವಾಗಿದೆ, ೯ನೆಯ ಶತಮಾನದ 'ಕವಿರಾಜಮಾರ್ಗ'. ಅಮೇರಿಕೆಯ ಚಿಕ್ಯಾಗೋ ವಿಶ್ವವಿದ್ಯಾಲಯದ ಸಂಸ್ಕೃತಿ ಮತ್ತು ಭಾರತ ಅಧ್ಯಯನದ ಪ್ರಾಧ್ಯಾಪಕ ಡಾ॥ ಷೆಲ್ಡನ್ ಪೊಲಾಕ್ ಹೇಳುವಂತೆ "ಪ್ರಾಯಶಃ ಜಗತ್ತಿನ ಸಂಸ್ಕೃತಿಗಳಲ್ಲಿಯೇ ದೇಶಭಾಷಾ ಮೀಮಾಂಸೆಯನ್ನು ಸಿದ್ಧಾಂತೀಕರಿಸಿದ ಮೊದಲ ಪಠ್ಯ"ವೆಂಬ ಖ್ಯಾತಿ ಈ ಕೃತಿಗಿದೆ. ಇದನ್ನು ಒಳಗುಮಾಡಿಗೊಂಡು ಈ ಪೂರ್ವದಲ್ಲಿದ್ದ, ಇರಬಹುದಾದ ಕನ್ನಡ ಸಾಹಿತ್ಯದ ಆಶಯ - ಆಕೃತಿಗಳನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಇಲ್ಲಿಂದ ಮುಂದೆ ನನ್ನ ಸಂಶೋಧನ ವ್ಯವಸಾಯ ವೇಗ ಮತ್ತು ಗುಣಮಟ್ಟಗಳನ್ನು ಗುರಿಯಿಟ್ಟು ನಡೆದು ಬಂದಿದೆ.

* * *

ಸಂಶೋಧನೆಗೆ ಮೂಲ ಮತ್ತು ಮುಖ್ಯದ್ರವ್ಯ ಆಕರಸಾಮಗ್ರಿ. ಹೀಗಾಗಿ ಮೊದಲ ಹಂತದಲ್ಲಿ ಕರ್ನಲ್ ಮೆಕೆಂಝಿ ಮೊದಲಾದವರಿಂದ "ಆಕರಮುಖಿ" ಶೋಧ ಇಲ್ಲಿ ಜರುಗಿತು. ಬಳಿಕ ಇಂಥ ಆಕರಗಳ ಮೂಲಕ "ವಿಶ್ಲೇಷಣಮುಖಿ" ಶೋಧ ನಡೆಸಿ, ಚರಿತ್ರೆ ಬರೆಯುವುದು ಆರಂಭವಾಯಿತು. ಇತ್ತೀಚೆ ಈ ಚರಿತ್ರೆಯನ್ನು "ವ್ಯಾಖ್ಯಾನಮುಖಿ" ಶೋಧಕ್ಕೆ ಗುರಿಪಡಿಸಿ, ಆ ಚರಿತ್ರೆಯ ಒಳದನಿಗಳನ್ನು ಅರ್ಥಮಾಡಿಕೊಳ್ಳುವ ಕೆಲಸ ಮುನ್ನಡೆದಿದೆ. ಇದರಿಂದಾಗಿ ಸಂಶೊಧನೆಯು ಕೇವಲ ಪಠ್ಯಕೇಂದ್ರಿತವಾಗಿ ಉಳಿಯದೆ ಪರಿಸರ ಕೇಂದ್ರಿತವಾಗಿ ಬೆಳೆಯುತ್ತಲಿದೆ. ಈ ಪರಿಸರ ಶೋಧವು ಸಹಜವಾಗಿಯೇ ಸಂಸ್ಕೃತಿ ಅಧ್ಯಯನಕ್ಕೆ ಹೊರಳಿ, ಅಂತರಶಿಸ್ತೀಯತೆಯನ್ನು ಅಳವಡಿಸಿಕೊಳ್ಳತೊಡಗಿದೆ. ಇದರ ಪರಿಣಾಮವಾಗಿ ಉಪೇಕ್ಷಿತ ವಿಷಯಗಳು ಇಲ್ಲಿ ಮಹತ್ವ ಪಡೆಯುತ್ತಲಿವೆ.

ವಿಶ್ಲೇಷಣಮುಖಿ ಸಂಶೋಧನೆಯ ಮೂಲಕ ಚರಿತ್ರೆಯ ಶೋಧ (Fact finding) ಪೂರೈಸಿದ ಬಳಿಕ, ಅದನ್ನು ವ್ಯಾಖ್ಯಾನಮುಖಿ ಸಂಶೋಧನೆಗೆ ಗುರಿಪಡಿಸಿ, ಅದರ ಹಿಂದಿನ ಸತ್ಯಶೋಧ (Truth finding) ಕೆಲಸ ಮಾಡುವಲ್ಲಿ ಸಂಶೋಧನೆಯು ವಿಮರ್ಶೆಯ ಹಾದಿ ಹಿಡಿಯುತ್ತದೆ. ಅದಕ್ಕಾಗಿಯೇ "ಸಂಶೋಧನೆಯೆನ್ನುವುದು ವಿಶ್ಲೇಷಣಾತ್ಮಕ ವಿಮರ್ಶೆ, ವಿಮರ್ಶೆಯೆನ್ನುವುದು ವ್ಯಾಖ್ಯಾನಾತ್ಮಕ ಸಂಶೋಧನೆ"ಯೆನ್ನುವುದು. ಅಂದರೆ ಇವರಡೂ ಒಂದೇ ಮೂಲದಲ್ಲಿ ಹುಟ್ಟುತ್ತಿದ್ದರೂ ಸಂಶೋಧನೆಯು ಒಂದು ಹಂತದಲ್ಲಿ ನಿಂತುಬಿಟ್ಟರೆ, ವಿಮರ್ಶೆಯು ನಿಲ್ಲದೆ ಮುನ್ನಡೆಯುತ್ತದೆ. ಏಕೆಂದರೆ ವಿಮರ್ಶಕರ ವಿಭಿನ್ನ ಅಭ್ಯಾಸ, ಧೋರಣೆಗಳಿಗೆ ತಕ್ಕಂತೆ ಅದು ಹೊಸಹೊಸ ನೆಲೆಗಳಲ್ಲಿ ಬಿಚ್ಚುತ್ತಲೇ ಹೋಗುತ್ತದೆ.

ನನ್ನ ಅನೇಕ ಲೇಖನಗಳು ಸಂಶೋಧನೆಯಾಗುತ್ತಲೇ ವಿಮರ್ಶೆಯಾಗಿ ಬೆಳೆದುದನ್ನು ಇಲ್ಲಿ ನೆನೆಯಬಹುದಾಗಿದೆ.

ಶೋಧವೆನ್ನುವುದು ಆಕರಮುಖಿಯೇ ಇರಲಿ, ವಿಶ್ಲೇಷಣಮುಖಿಯೇ ಇರಲಿ, ವ್ಯಾಖ್ಯಾನಮುಖಿಯೇ ಇರಲಿ, ಭೂತಕಾಲಕ್ಕೆ ಸ್ಥಗಿತಗೊಳ್ಳದೆ ವರ್ತಮಾನವನ್ನು ಪ್ರಭಾವಿಸುವಲ್ಲಿ ಅದರ ಸಾರ್ಥಕತೆಯಿದೆ. ಇದನ್ನು "ಸಮಾಜಮುಖಿ" ಸಂಶೋಧನೆಯೆಂದು ಕರೆಯಬಹುದು. ಈ ಪ್ರಭಾವಿಸುವಿಕೆಯನ್ನು ಸೃಜನ ಸಾಹಿತಿ "ಕಲ್ಪಿತ ಮಾದರಿ"ಗಳಿಂದ ಪೂರೈಸುತ್ತಿದ್ದರೆ, ಸಂಶೋಧನ ಸಾಹಿತಿ "ಘಟಿತ ಮಾದರಿ"ಗಳಿಂದ ಪೂರೈಸ ಬೇಕಾಗುತ್ತದೆ. ಈ ಪೂರೈಕೆಗಾಗಿ, ತನ್ನ ಪರಿಸರದ ಅನ್ಯಾಯಗಳನ್ನು ಗುರುತಿಸಿ, ಅವುಗಳನ್ನು ಸಂಶೋಧನೆ ಯಿಂದ ನಿವಾರಿಸಲು ಪ್ರಯತ್ನಿಸುವ ಸಂಶೋಧಕನು ಮಾತ್ರ ಪರಿಸರಕ್ಕೆ ಪ್ರಸ್ತುತನಾಗುತ್ತಾನೆ. ಇಲ್ಲದಿದ್ದರೆ ಕೇವಲ ಪುಸ್ತಕದ ಪಂಡಿತನಾಗಿ ಉಳಿಯುತ್ತಾನೆ. ಇತ್ತೀಚೆ ಕನ್ನಡದಲ್ಲಿ ಸಂಶೋಧನೆ ಪುಸ್ತಕದ ಪಾಂಡಿತ್ಯದಿಂದ ಪರಿಸರದ ವಿಮರ್ಶೆಯತ್ತ ಹೊರಳುತ್ತಲಿರುವುದು, ಕೇವಲ ವಿದ್ವಾಂಸರ ವಾದವಾಗಿ ಉಳಿಯದೆ ಸಾಮಾಜಿಕ ಸಂವಾದವಾಗಿಯೂ ಬೆಳೆಯುತ್ತಲಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ.

ಸಾಹಿತ್ಯದಲ್ಲಿಯಂತೆ ಸಂಶೋಧನೆಯಲ್ಲಿಯೂ ಕಾಲಕಾಲಕ್ಕೆ ಹೊಸಹೊಸ ಒಲವುಗಳು ಕಾಣಿಸಿಕೊಳ್ಳುವುದು ಸಹಜ. ಕನ್ನಡ ಸಂಶೋಧನೆಯೆನ್ನುವುದು ನವೋದಯ ಕಾಲದಲ್ಲಿ ಅಂಕುರಿಸಿದ ಜ್ಞಾನಶಿಸ್ತು. ರಾಷ್ಟ್ರೀಯ ಆಂದೋಲನದ ಆ ಸಂದರ್ಭದಲ್ಲಿ ಪರಂಪರೆಯನ್ನು ವೈಭವೀಕರಿಸುವುದು ಮತ್ತು ಲಿಖಿತ ಸಾಮಗ್ರಿಗೆ ಮಾತ್ರ ಒತ್ತು ಕೊಡುವುದು ಮುಖ್ಯವಾಗಿದ್ದವು. ಮೇಲಾಗಿ ಈ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯಲ್ಲಿದ್ದ ಬ್ರಾಹ್ಮಣ ವಿದ್ವಾಂಸರು ಅಂದು ಸಹಜವಾಗಿಯೇ ವೈದಿಕ ದೃಷ್ಟಿಕೋನದಿಂದ ಇತಿಹಾಸ ಬರೆದರು. ಇಂದು ವೈಭವೀಕರಣಕ್ಕೆ ಬದಲು ಸಾಮಾಜಿಕ ನ್ಯಾಯವನ್ನು ಹುಡುಕುವ, ಲಿಖಿತದಂತೆ ಮೌಖಿಕ ಸಾಮಗ್ರಿಯನ್ನೂ ಬಳಸುವ ಪ್ರವೃತ್ತಿ ಬೆಳೆದಿದೆ. ಬ್ರಾಹ್ಮಣೇತರ ವಿದ್ವಾಂಸರೂ ಈ ಕ್ಷೇತ್ರವನ್ನು ಪ್ರವೇಶಿಸಿದ್ದಾರೆ. ಹೀಗಾಗಿ ಈವರೆಗಿನ ಸಂಶೋಧನೆಯ ಮರುಪರಿಶೀಲನೆ ಇಂದು ನಡೆಯಬೇಕಾಗಿದೆ. ನಡೆದಿದೆ.

* * *

ಆಕರಗಳನ್ನು ಬಳಸಿಕೊಂಡು ವಿಶ್ಲೇಷಣಾತ್ಮಕ ಸಂಶೋಧನೆಯನ್ನೋ, ವ್ಯಾಖ್ಯಾನಾತ್ಮಕ ಸಂಶೋಧನೆಯನ್ನೋ ಕೈಕೊಳ್ಳುವ ಸಂಶೋಧಕ ಕೆಲವೊಮ್ಮೆ ವಿದ್ವಾಂಸರ ಪ್ರತಿಕ್ರಿಯೆ ಇಲ್ಲವೆ ಸಮಾಜದ ಪ್ರತಿಭಟನೆ ಎದುರಿಸಬೇಕಾಗುತ್ತದೆ. ಏಕೆಂದರೆ ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ಶೋಷಿಸುವವರಿಗೆ ಸಂಶೋಧಕ ಮಂಡಿಸುವ ನಿಜ ಇತಿಹಾಸದಿಂದ ಕಿರಿಕಿರಿಯಾಗಿ, ಅವರು ಪ್ರತಿಭಟನೆಯ ದಾರಿ ಹಿಡಿಯುತ್ತಾರೆ. ಅಂಥ ಸಂದರ್ಭದಲ್ಲಿ ಸಂಶೋಧನೆಯು ಸಾಮಾಜಿಕ ಹೋರಾಟವಾಗಿ ಪರಿಣಮಿಸುತ್ತದೆ. ಈ ಬಗೆಯ ಪಂಡಿತರ ಪ್ರತಿಕ್ರಿಯೆ, ಸಮಾಜದ ಪ್ರತಿಭಟನೆಗಳನ್ನು ಎದುರಿಸಿದ ಕಹಿ ಅನುಭವ ನನ್ನದಾಗಿದೆ.

* * *

ಸಾಮಾನ್ಯವಾಗಿ ಸಂಶೋಧಕರು ಇನ್ನೊಬ್ಬರು ಪ್ರಕಟಿಸಿದ ಆಕರಗಳನ್ನು ಬಳಸಿಕೊಂಡು ಸಂಶೋಧನೆಯನ್ನು ಪೂರೈಸುತ್ತಾರೆ. ಹೀಗೆ ಮಾಡುವುದರೊಂದಿಗೆ ನಾನು ಹೆಚ್ಚಿನದಾಗಿ ಆಕರಗಳ ಶೋಧ-ಪ್ರಕಟನ ಕಾರ್ಯವನ್ನೂ ಮಾಡಿದ್ದೇನೆ. ಇವುಗಳಲ್ಲಿ ಪ್ರಾಚೀನ-ಆಧುನಿಕ ಹಸ್ತಪ್ರತಿಗಳ ಶೋಧ-ಸಂಪಾದನೆ-ಪ್ರಕಟನೆ ಮುಖ್ಯವಾದುವು. ಪ್ರಾಚೀನ ಹಸ್ತಪ್ರತಿಗಳನ್ನೇ ಕುರಿತು ಹೇಳುವುದಾದರೆ ಕರ್ನಾಟಕದಲ್ಲಿ ಈವರೆಗೆ ಸಂಗ್ರಹವಾಗಿರುವ ಸುಮಾರ ೨೫ ಸಾವಿರ ಕಟ್ಟುಗಳಲ್ಲಿ ಹಂಪಿ, ಧಾರವಾಡ ವಿಶ್ವವಿದ್ಯಾಲಯಗಳು ಸೇರಿ ಸುಮಾರು ೫ ಸಾವಿರ ಕಟ್ಟುಗಳ ಸಂಗ್ರಹ ನನ್ನ ಪ್ರತ್ಯಕ್ಷ-ಪರೋಕ್ಷ ಪ್ರಯತ್ನದ ಫಲವೆನಿಸಿದೆ. ಇದಲ್ಲದೆ ಸಮಗ್ರ ವಚನಸಾಹಿತ್ಯ, ಸಮಗ್ರ ಹಳಕಟ್ಟಿ ಸಾಹಿತ್ಯ ಪ್ರಕಟನ ಯೋಜನೆಗಳು ನನ್ನ ಪ್ರಧಾನ ಸಂಪಾದಕತ್ವದಲ್ಲಿ ಪೂರ್ಣಗೊಂಡಿವೆ. ಸಮಗ್ರ ಕೀರ್ತನಸಾಹಿತ್ಯ, ಸಮಗ್ರ ತೋಂಟದಾರ್ಯ ಸಾಹಿತ್ಯ ಪ್ರಕಟನ ಯೋಜನೆಗಳ ರೂವಾರಿ-ಯೋಜಕನಾಗಿದ್ದೇನೆ. ಹೆಚ್ಚಿನದಾಗಿ ಅನೇಕ ಹಸ್ತಪ್ರತಿ ಸೂಚಿಗಳೂ ನನ್ನ ನೇತೃತ್ವದಲ್ಲಿ ಬೆಳಕು ಕಂಡಿವೆ.

ಸಾಹಿತ್ಯದ ವಿದ್ಯಾರ್ಥಿಯಾಗಿರುವ ನನಗೆ, ಇತಿಹಾಸದ ಬಗೆಗೂ ವಿಶೇಷ ಒಲವು. ಆದುದರಿಂದ

ಪ್ರಾಚೀನ ಇತಿಹಾಸ ಕೃತಿಗಳಾದ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನಿಂಬಸಾಮಂತ ಚರಿತೆ, ಸಿದ್ಧಮಂಕ ಚರಿತೆ, ತಗರ ಪವಾಡ, ಸಿರುಮಭೂಪಾಲನನ್ನು ಕುರಿತ ೩ ಕೃತಿಗಳು, ಕುಮಾರರಾಮನನ್ನು ಕುರಿತ ೪ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದೇನೆ. ದಾಖಲೆಗೆ ಸಂಬಂಧಿಸಿದಂತೆ 'ಕರ್ನಾಟಕ ಕೈಫಿಯತ್ತುಗಳು' ನನ್ನ ವಿಶೇಷ ಪ್ರಕಟನೆಯೆನಿಸಿದೆ. ವಿಜಾಪುರ ಜಿಲ್ಲೆ, ಧಾರವಾಡ ಜಿಲ್ಲೆಗಳ ಶಾಸನಸೂಚಿ, ಧಾರವಾಡ ತಾಲೂಕಿನ ಶಾಸನಗಳು ನನ್ನ ಶ್ರಮದಲ್ಲಿ ಮೂಡಿಬಂದಿವೆ. ಒಟ್ಟಾರೆ, ಸಾಹಿತ್ಯ–ಇತಿಹಾಸ ಕ್ಷೇತ್ರಗಳಿಗೆ ಸಂಬಂಧಿಸಿದ ಆಕರಗಳ ಶೋಧ–ಪ್ರಕಟನ ಕೆಲಸ ನನ್ನ ಸಮಕಾಲೀನ ಸಂಶೋಧಕರಿಗಿಂತ ಒಂದಿಷ್ಟು ಅಧಿಕ ಪ್ರಮಾಣದಲ್ಲಿ ನನ್ನಿಂದ ಜರುಗಿದೆಯೆಂದೇ ಹೇಳಬೇಕು.

ನಮ್ಮ ಸಂಶೋಧಕರು ಆಕರಗಳನ್ನು ಬಳಸಿಕೊಂಡು ವಿಶ್ಲೇಷಣಾತ್ಮಕ ಸಂಶೋಧನೆಯ ಮೂಲಕ ಚರಿತ್ರೆಯನ್ನು ಸ್ಪಷ್ಟಪಡಿಸಿದುದೇ ಹೆಚ್ಚು. ಇದಕ್ಕೆ ಕಾರಣ, ನಮ್ಮ ಪೂರ್ವಜರು ಚರಿತ್ರೆ ಬರೆಯಲಿಲ್ಲವಾಗಿ ಪ್ರಾಚೀನ ಕೆಲವು ಮುಖ್ಯ ಘಟನೆಗಳು ಕಳೆದುಹೋಗಿದ್ದವು, ಕೆಲವು ಹಿಂದುಮುಂದಾಗಿದ್ದವು. ಹೀಗಾಗಿ ಸಹಜವಾಗಿಯೇ ನಮ್ಮ ಓರಿಯಂಟಾಲಿಷ್ಟರು ಇವುಗಳನ್ನು ಶೋಧಿಸುವ, ಜೋಡಿಸುವ ಕೆಲಸಕ್ಕೆ ಆದ್ಯಗಮನ ಕೊಡುತ್ತ ಬಂದರು. ಈ ದಿಸೆಯಲ್ಲಿ ನಾನೂ ದುಡಿದು, ಕಳೆದುಹೋದ ಘಟನೆ, ಆಚರಣೆಗಳನ್ನು ಸ್ಪಷ್ಟಪಡಿಸುವ ಕೆಲಸ ಮಾಡಿದ್ದೇನೆ. ಶಾಸನಗಳಲ್ಲಿ ಶಿವಶರಣರು, ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ಮಹಾರಾಷ್ಟ್ರದ ಕನ್ನಡ ಶಾಸನಗಳು ಈ ಕ್ಷೇತ್ರದ ನನ್ನ ಮಹತ್ವದ ಕೃತಿಗಳೆನಿಸಿವೆ.

ನನ್ನ ಸಂಶೋಧನ ಕೃಷಿಯನ್ನು ಗ್ರಂಥ ಮತ್ತು ಪ್ರಬಂಧಗಳೆಂದು ವರ್ಗೀಕರಿಸಬಹುದಾಗಿದ್ದು, ಗ್ರಂಥಗಳನ್ನು ಸಂಪಾದನ ಸಾಹಿತ್ಯ, ಸಂಶೋಧನ ಸಾಹಿತ್ಯ, ಶಾಸ್ತ್ರ ಸಾಹಿತ್ಯವೆಂದು ವಿಂಗಡಿಸಬಹುದಾಗಿದೆ. ಸಂಪಾದನ ಸಾಹಿತ್ಯದಲ್ಲಿ 'ಹರಿಹರನ ರಗಳೆ'ಗಳಂಥ ಸಾಹಿತ್ಯಕೃತಿಗಳೂ, 'ಕಿತ್ತೂರು ಸಂಸ್ಥಾನ ಸಾಹಿತ್ಯ'ದಂಥ ಚಾರಿತ್ರಿಕ ಕೃತಿಗಳೂ, 'ಬಸವಣ್ಣನವರು ಟೀಕಿನ ವಚನ'ಗಳಂಥ ವಚನಕೃತಿಗಳೂ, 'ಕರ್ನಾಟಕದ ಕೈಫಿಯತ್ತು'ಗಳಂಥ ದಾಖಲು ಸಾಹಿತ್ಯಕೃತಿಗಳೂ, 'ಅರಟಾಳ ರುದ್ರಗೌಡರ ಚರಿತ್ರೆ'ಯಂಥ ಜೀವನಚರಿತ್ರೆಗಳೂ, 'ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ'ದಂಥ ಸಂಕಲನಗ್ರಂಥಗಳೂ, 'ಸಾರಂಗಶ್ರೀ'ಯಂಥ ವಿಚಾರಸಂಕಿರಣ ಸಂಪುಟಗಳೂ ಮುಖ್ಯವೆನಿಸಿವೆ. ಸಂಶೋಧನಗ್ರಂಥಗಳಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ'ದಂಥ ಕೃತಿಗಳು ಸಮಾವೇಶಗೊಳ್ಳುತ್ತವೆ. ಶಾಸ್ತ್ರಸಾಹಿತ್ಯದಲ್ಲಿ 'ಹಸ್ತಪ್ರತಿಶಾಸ್ತ್ರ', 'ಗ್ರಂಥಸಂಪಾದನಶಾಸ್ತ್ರ', 'ಸಂಶೋಧನಶಾಸ್ತ್ರ', 'ನಾಮವಿಜ್ಞಾನ' ಕೃತಿಗಳನ್ನು ಹೆಸರಿಸಬಹುದಾಗಿದೆ.

ಗ್ರಂಥಗಳಿಗಿಂತ ಪ್ರಬಂಧ ರಚನೆ ನನಗೆ ತುಂಬ ಇಷ್ಟ. ಸಣ್ಣಕೀಲಿಗಳಂತಿರುವ ಇವು ದೊಡ್ಡ ಬಾಗಿಲನ್ನು ತೆರೆಯುತ್ತಿರುವುದರಿಂದ, ಈವರೆಗೆ ನಾನು ಸುಮಾರ ೪೦೦ ಪ್ರಬಂಧಗಳನ್ನು ಬರೆದಿದ್ದು, ಅವು 'ಮಾರ್ಗ' ಹೆಸರಿನ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿವೆ. ನನ್ನನ್ನು ಸಂಶೋಧನಕ್ಷೇತ್ರದಲ್ಲಿ ಗಟ್ಟಿಯಾಗಿ ನಿಲ್ಲಿಸಿದ ಇವುಗಳಲ್ಲಿ ೨ನೆಯ ಸಂಪುಟಕ್ಕೆ ರಾಜ್ಯ ಸಾಹಿತ್ಯ ಅಕಾದಮಿಯ ಪ್ರಶಸ್ತಿ ಪ್ರಾಪ್ತವಾಗಿದ್ದರೆ, ಈಗ ೪ನೆ ಸಂಪುಟಕ್ಕೆ ರಾಷ್ಟ್ರ ಸಾಹಿತ್ಯ ಅಕಾದಮಿಯ ಪ್ರಶಸ್ತಿ ಲಭಿಸಿದೆ.

ಕನ್ನಡ ಸಂಶೋಧನಕ್ಷೇತ್ರದಲ್ಲಿ ಮೊದಮೊದಲು ಧಾರವಾಡದ ಸಾಂಸ್ಕೃತಿಕ ಮಾದರಿ, ಮೈಸೂರಿನ ಚಾರಿತ್ರಿಕ ಮಾದರಿಯೆಂಬ ಎರಡು ಕವಲುಗಳು ಕಾಣಿಸಿಕೊಂಡವು. ಈಗ ಎರಡೂ ಮಾದರಿಗಳು ಎರಡೂ ಪ್ರದೇಶಗಳಲ್ಲಿ ಪ್ರಚಾರಕ್ಕೆ ಬರುತ್ತಲಿವೆ. ಪ್ರಸ್ತುತ 'ಮಾರ್ಗ–೪'ರಲ್ಲಿ ಈ ಎರಡೂ ಮಾದರಿಯ ಪ್ರಬಂಧಗಳಿವೆ. ಸಂಶೋಧನೆ ಕೇವಲ ಗತಕಾಲಕ್ಕೆ ಸೀಮಿತವಾಗದೆ ವರ್ತಮಾನವನ್ನೂ ಪ್ರಭಾವಿಸಬೇಕೆಂಬ ನನ್ನ ಇತ್ತೀಚಿನ ತಹತಹಕ್ಕೆ ಅನುಗುಣವಾಗಿ ಇಲ್ಲಿ ಅಂಥ ಬಹಳಷ್ಟು ಲೇಖನಗಳು ಎಡೆಪಡೆದಿವೆ. ಉಪೇಕ್ಷಿತ ವಿಷಯಗಳಿಗೆ ಇಲ್ಲಿ ಅವಕಾಶ ಮಾಡಿಕೊಡಲಾಗಿದೆ. ಪಠ್ಯಕೇಂದ್ರಿತವಾಗುತ್ತಲೇ ಪರಿಸರಕೇಂದ್ರಿತವಾಗುವ ಮೂಲಕ ಇಲ್ಲಿಯ ಬಹಳಷ್ಟು ಲೇಖನಗಳು ಅಂತರಶಿಸ್ತೀಯ ಆಯಾಮವನ್ನೊಳಗೊಂಡಿವೆ. ಹೊಸ ಸಂಶೋಧನದಷ್ಟೇ ಹಳೆಯ ಶೋಧಗಳ ಮರುಪರಿಶೀಲನೆಯೂ ಅವಶ್ಯವೆಂಬ ಭಾವನೆಯಿಂದ ಬರೆದ ಲೇಖನಗಳೂ ಇಲ್ಲವೆ. ಈ ಲಕ್ಷಣಗಳಿಂದಾಗಿ ಪ್ರಸ್ತುತ ಕೃತಿ ನನ್ನ ಮೊದಲಿನ 'ಮಾರ್ಗ' ಸಂಪುಟಗಳಿಗಿಂತ ಹೆಚ್ಚು ಮಹತ್ವದ್ದೆಂದು ಭಾವಿಸುತ್ತೇನೆ ಮತ್ತು ಇದಕ್ಕೆ ರಾಷ್ಟ್ರೀಯ ಗೌರವ ಪ್ರಾಪ್ತವಾಗಲು ಕಾರಣರಾದ ಎಲ್ಲ ಮಾನ್ಯರಿಗೆ ಕೃತಜ್ಞನಾಗಿದ್ದೇನೆ.

ಮಾತು ಮುಗಿಸುವ ಮುನ್ನ ಒಂದೆರಡು ಮಾತು :

೧. ಸ್ಥಿರಸಮಾಜದ ಸೃಷ್ಟಿಯಾಗಿರುವ ಹಳೆಯ 'ಮಾತೃಭಾಷಾ ಪರಿಕಲ್ಪನೆ' ಬದಲಾದ ಚರಸಮಾಜದಲ್ಲಿ ಅರ್ಥ ಕಳೆದುಕೊಳ್ಳತೊಡಗಿರುವುದರಿಂದ, ಅದರ ಮರು ವ್ಯಾಖ್ಯಾನ ಇಂದು ತೀರ ಅಗತ್ಯವೆನಿಸಿದೆ. ಭಾಷಾವಾರು ಪ್ರಾಂತರಚನೆಯಿಂದಾಗಿ ಕೆಲವೆಡೆ ಭಾಷಾ ಸಂಘರ್ಷಗಳು ಹುಟ್ಟಿಕೊಂಡಿವೆ. ಜಾಗತೀಕರಣದಿಂದಾಗಿ ರಾಜ್ಯ ಭಾಷೆಗಳಿಗೆ ಅಳಿಯುವ ಭಯ ಕಾಡುತ್ತಲಿದೆ. ಭಾಷಿಕ ಈ ಮೂರು ಸಮಸ್ಯೆಗಳ ನಿವಾರಣೆಗಾಗಿ ಹೊಸ 'ರಾಷ್ಟ್ರೀಯ ಭಾಷಾನೀತಿ'ಯನ್ನು ಭಾರತದಲ್ಲಿ ಅಸ್ತಿತ್ವಕ್ಕೆ ತರುವುದು ಅವಶ್ಯವಿದೆ. ಈ ಕೆಲಸವನ್ನು ಸಾಹಿತ್ಯ ಅಕಾಡೆಮಿ ಕೈಕೊಳ್ಳಬೇಕು. ಇದು ಕರ್ತವ್ಯವೂ ಆಗಿದೆ.

೨. ಕೇಂದ್ರ ಸಾಹಿತ್ಯ ಅಕಾದಮಿ ರಾಷ್ಟ್ರದ ಸಾರ್ವಭೌಮ ಸಾಹಿತ್ಯ ಸಂಸ್ಥೆ. ಸರಕಾರ ಅಂಥ ಅಧಿಕಾರವನ್ನು ಈ ಸಂಸ್ಥೆಗೆ ನೀಡಿದೆ. ಹೀಗಾಗಿ ಭಾಷೆ–ಸಾಹಿತ್ಯ ವಿಷಯವಾಗಿ ಮಹತ್ವದ ನಿರ್ಣಯ ತೆಗೆದುಕೊಳ್ಳುವಾಗ ಸರಕಾರ ಈ ಸಂಸ್ಥೆಯ ಸಲಹೆ ಪಡೆಯುವುದು. ಸಲಹೆ ಪಡೆಯದೆ ನಿರ್ಣಯ ತೆಗೆದುಕೊಂಡರೆ, ಈ ಸಂಸ್ಥೆ ಸರಕಾರವನ್ನು ಪ್ರಶ್ನಿಸುವುದು ಅಪೇಕ್ಷಣೀಯವೆನಿಸುತ್ತದೆ. ಆದರೆ, ಸರಕಾರ ಇತ್ತೀಚೆ ಶಾಸ್ತ್ರಭಾಷೆಯ (ಕ್ಲಾಸಿಕಲ್ ಲ್ಯಾಂಗ್ವೆಜ್) ವಿಷಯವಾಗಿ ತೆಗೆದುಕೊಂಡ ಏಕಪಕ್ಷೀಯ ನಿರ್ಣಯವನ್ನು ಗಮನಿಸಿದರೆ, ಅದು ಈ ಸಂಸ್ಥೆಯನ್ನು ಉಪೇಕ್ಷಿಸುತ್ತದೆಯೆಂಬ ಸಂದೇಹ ಮೂಡುತ್ತದೆ. ಇಂಥ ಸಂದರ್ಭದಲ್ಲಿ ಎಚ್ಚರವಹಿಸದಿದ್ದರೆ ಅಕಾದಮಿ ಕ್ರಮೇಣ ಹೆಸರಿಗೆ ಮಾತ್ರ ಸಾರ್ವಭೌಮ ಸಂಸ್ಥೆಯಾಗಬಹುದಾಗಿದೆ. ಹಾಗಾಗದಂತೆ ಈ ಸಂಸ್ಥೆ ಎಚ್ಚರವಹಿಸಬೇಕೆಂದೂ, ಇದಕ್ಕೆ ಸರ್ವಭಾಷಾ ಸರಸ್ವತೀ ಪರಿವಾರದವರಾದ ನಾವೆಲ್ಲ ಬೆಂಬಲವಾಗಿ ನಿಲ್ಲಬೇಕೆಂದೂ ಆಶಿಸುತ್ತೇನೆ.

ಸೌಜನ್ಯ, ಕಲ್ಯಾಣನಗರ, ಧಾರವಾಡ ೫೮೦ ೦೦೭ ❑

ಅಪಾಯದ ವೈರಸ್‌ನಿಂದ..... (ಪುಟ ೧ ರಿಂದ)

ಹೀಗಿರುವಾಗ ಉಳಿಸುವುದು ಏನನ್ನು ? ಯಾವುದನ್ನು ? ಪಟ್ಟಭದ್ರರ ಅಟ್ಟಹಾಸದಲ್ಲಿ ಮೂಲೆ ಪಾಲಾಗುತ್ತಿರುವುದು ನಿಜವಾಗಿ ದುಡಿಯುವವರೊ ? ದುಡಿಮೆಯ ಕ್ಷೇತ್ರಗಳೊ ? ನಮ್ಮ ಜ್ಞಾನವಿಜ್ಞಾನಕ್ಕೆ ಹೊರತಾದ ವೈರಸ್‌ಗಳಿಂದ ಅಪಾಯ ತಗುಲಿದೆ. ಜೀವನಕ್ಕೇ ಹಾನಿಯಾಗುತ್ತಿದೆ.

ಹೊಸ ಜನಾಂಗ ಈ ಹೊಲಸಿನಲ್ಲಿಯೇ ಸಿಕ್ಕು ಒದ್ದಾಡದೆ, ಬದುಕಿನ ತಾಜಾತನಕ್ಕಾಗಿ, ತಲೆಎತ್ತಿ ಬಾಳುವ ಜೀವಂತಿಕೆಗಾಗಿ ಸಂಪೂರ್ಣ ಸಿದ್ಧವಾಗಬೇಕಿದೆ. ಆ ಆಸೆ, ಆ ಕನಸಿನಿಂದ ಕಲೆಗಳು, ತತ್ತ್ವಶಾಸ್ತ್ರಗಳು, ಜ್ಞಾನವಿಜ್ಞಾನ ಕ್ಷೇತ್ರಗಳು ಇನ್ನು ಮುಂದೆ ಹದಗೊಳ್ಳಬೇಕಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ದುಡಿಯುವ ಪರಿಶುದ್ಧ ಮನಸ್ಸು, ಹೃದಯ, ಬುದ್ಧಿಗಳು ಪರಸ್ಪರ ಕಾಪಾಡಿಕೊಳ್ಳುವ ಆವಶ್ಯಕತೆ ಈಗಿನದಾಗಿದೆ.

ಈ ದಿಕ್ಕಿನಲ್ಲಿ 'ಪ್ರಜಾಸಾಹಿತ್ಯ' ಇಟ್ಟ ಹೆಜ್ಜೆ ಇದು : ಎಲ್ಲ ಕ್ಷೇತ್ರಕ್ಕೂ ಧಾಳಿಯಿಟ್ಟಿರುವ ಅಪಾಯದ ವೈರಸ್‌ಗಳನ್ನು ಮೊದಲು ಕಿತ್ತು, ಒಗೆದು; ನಮ್ಮ ಮಣ್ಣು, ನೀರು, ಗಾಳಿ, ಬೆಳಕು, ಬೀಜಗಳಿಂದ ಬದುಕಿನ ಆರೋಗ್ಯಕ್ಕೆ ದಾರಿ ಕಂಡುಕೊಳ್ಳಬೇಕಿದೆ. ಇನ್ನಾದರೂ, ಈಗಲಾದರೂ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕಾಗಿದೆ. ಹಿರಿಯರು ದಾರಿ ತೋರಬೇಕು, ಕಿರಿಯರು ದಾರಿ ಹಿಡಿಯಬೇಕು.

> ಮಳೆಯಿಲ್ಲದೆ ಪೊಯ್‌ನೀರಿಂ
> ಬೆಳಗುಮೆ ಧರೆ ಮರುಗಿ ಕುದಿದು ಶಾಸ್ತ್ರದ ಬಲದಿಂ
> ದಳಿಪಿ ಪೇಳ್ದೊಡಮದು ಕೋ
> ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ

ನಯಸೇನ

❑

೪

ದೇಶೀ ಚಿಂತನೆಗೆ ಮಾರ್ಗ ತೋರಿದ ಕಲಬುರ್ಗಿಯವರ 'ಮಾರ್ಗ-೪'

ಎ.ವಿ. ನಾವಡ

'**ಮಾ**ರ್ಗ-೪' ಎಂ.ಎಂ. ಕಲಬುರ್ಗಿಯವರ ಸಂಶೋಧನ ಬರಹಗಳ ನಾಲ್ಕನೆಯ ಕಟ್ಟು. ಸಂಪುಟದ ಹೆಸರು 'ಮಾರ್ಗ', ಅದು ಅವರ ದೇಶೀ ಚಿಂತನಾ ಮಾರ್ಗ ಹರಿದ ಬಗೆಯನ್ನು ಹೇಳುತ್ತದೆ. ಕನ್ನಡದ ಆದಿಕವಿ ಪಂಪ ಹೇಳಿದ 'ದೇಸಿಯೊಳ್‌ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' - ಇದು ಡಾ. ಕಲಬುರ್ಗಿಯವರ ಸಂಶೋಧನ ವಿಧಾನದ ನಿಲುವು.

ಮಾರ್ಗ-೪ ರಾಯಲ್ ಆಕಾರದ ೫೫೦ ಪುಟಗಳ ಗ್ರಂಥ. ಅದರೊಳಗೆ ಒಂದು ನೂರು ಸಂಶೋಧನ ಬರಹಗಳಿವೆ. ಕಲಬುರ್ಗಿ ಅವರಿಗೆ ಸಂಶೋಧನೆ ಎನ್ನುವುದು ಬರಿಯ ಹುಡುಕಾಟ ಅಲ್ಲ. ಈ ತನಕ ಯಾರೂ ಕಂಡರಿಯದ ಕೇಳರಿಯದ ವಸ್ತುವಿನ ಅನಾವರಣವೂ ಅಲ್ಲ. ತನ್ನ ಬರವಣಿಗೆಯ ಬಗೆಗೆ ಪ್ರಸ್ತಾವನೆಯಲ್ಲಿ ಅವರು ಹೀಗೆ ಬರೆಯುತ್ತಾರೆ. "ಇತ್ತೀಚೆಗೆ ಸಮಾಜದಲ್ಲಿ ಸಹಜ ಬದಲಾವಣೆಯ ಜತೆಗೆ ರಾಜಕೀಯ, ಧಾರ್ಮಿಕ ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟು ಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನ ಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ." ಕೃತಿಯ ಒಳಗಿನ ಲೇಖನಗಳ ಆಶಯಗಳನ್ನು ಕಂಡಾಗಿ ಮೇಲಿನ ಉದ್ದೇಶಕ್ಕಾಗಿಯೇ ಅವು ದುಡಿಯುತ್ತಿರುವುದು ಕಂಡುಬರುತ್ತಿರುವುದು ನಿಚ್ಚಳ. ಭೂತವೆನ್ನುವುದು ವರ್ತಮಾನದ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಮೌಲ್ಯಗಳೊಂದಿಗೆ ಅಭಿಮುಖವಾಗುತ್ತಲೇ ಹೊಸಹೊಸ ಆಕೃತಿಗಳನ್ನು ಪಡೆಯುತ್ತಲೇ ಹೋಗುತ್ತವೆ. ಹೀಗಾಗಿ 'ಒಂದು ಸತ್ಯ', 'ಒಂದು ಇತಿಹಾಸ' ಎನ್ನುವಂತಹುದಿಲ್ಲ. ಸಂಶೋಧನೆ ಎನ್ನುವುದು ಆಗಿ ಮುಗಿಯುವಂತಹುದಲ್ಲ. ಅದು ನಿರಂತರ ಪ್ರಕ್ರಿಯೆ.

ಇಲ್ಲಿನ ಬಹುತೇಕ ಬರಹಗಳು ಮಧ್ಯಕಾಲೀನ ಸಾಹಿತ್ಯ-ಸಂಸ್ಕೃತಿಯನ್ನು ಮರುವಿವೇಚನೆಗೆ ಗುರಿಪಡಿಸುವವುಗಳು. ನೆಲೆಸಿದ ಆಲೋಚನೆಗಳನ್ನು ಇನ್ನೊಂದು ಮಗ್ಗುಲಿಂದ ನೋಡುವಂತಹವುಗಳು. ಹಾಗೆ ನೋಡಿದರೆ ಇಲ್ಲಿನ ಬಹುತೇಕ ಲೇಖನಗಳು ಸಾಹಿತ್ಯ ಕೃತಿಗಳ ಮೂಲಕ ಸಾಮಾಜಿಕ ಚರಿತ್ರೆಯನ್ನು ಕಟ್ಟಲು ನಡೆಸಿದ ಪ್ರಯತ್ನಗಳು. 'ಸಿದ್ಧರಾಮ ಚರಿತೆ'ಯಲ್ಲಿ ಜನನ, ದೀಕ್ಷೆ, ಮದುವೆ, ಮರಣ - ಸಂದರ್ಭಗಳ ಚಿತ್ರಣವನ್ನಷ್ಟೇ ಹೇಳದೆ ಆ ಮೂಲಕ ಹನ್ನೆರಡನೆಯ ಶತಮಾನದ ಸಾಮಾಜಿಕ ಚರಿತ್ರೆಯನ್ನು ಕಟ್ಟಲು ಪ್ರಯತ್ನಿಸಿದ್ದಾರೆ. ಚರಿತ್ರೆಯ ಪುನರ್‌ನಿರ್ಮಾಣದಲ್ಲಿ ಸಾಹಿತ್ಯ ಕೃತಿಗಳು ಮಹತ್ವದ ಆಕರಗಳಾಗುತ್ತವೆ ಎನ್ನುವುದಕ್ಕೆ ಇಲ್ಲಿನ ಅನೇಕ ಬರಹಗಳು ಸಾಕ್ಷಿಯಾಗುತ್ತವೆ. ಸಿದ್ಧರಾಮ ಹಾಗೂ ಸಿದ್ಧರಾಮಚರಿತೆಯನ್ನು ಮುಂದಿರಿಸಿಕೊಂಡು ನಾಥಸಂಪ್ರದಾಯ, ವಿಕಾರಿಸಿದ್ಧ ಸಂಪ್ರದಾಯ, ಶಿವಸಿದ್ಧ ಸಂಪ್ರದಾಯಗಳನ್ನು ಪರಿಚಯಿಸುತ್ತಾರೆ. ಈ ಸಂಪ್ರದಾಯಗಳು ಮಧ್ಯಕಾಲೀನ ಚರಿತ್ರೆಯನ್ನು ಅನಾವರಣಗೊಳಿಸುವ ಬಗೆಯನ್ನು ಹೇಳುತ್ತಾರೆ. ಸಿದ್ಧರಾಮನು ವೀರಶೈವನಾಗುವ ಮೊದಲು ಅವನು ಅನುಸರಿಸುತ್ತಿದ್ದುದು ನಾಥಸಿದ್ಧ ಅಂದರೆ ಶಿವಸಿದ್ಧ ಪರಂಪರೆಯವನೆಂದು ಹಲವು ಸಾಕ್ಷ್ಯಾಧಾರಗಳ ಮೂಲಕ ಖಚಿತಗೊಳಿಸುತ್ತಾರೆ. ನಾಥ ಸಂಪ್ರದಾಯವನ್ನು ಸಮಾಜದ ಎಲ್ಲಾ ಜಾತಿಯವರೂ ಅನುಸರಿಸುತ್ತಿದ್ದರೆನ್ನುವುದಕ್ಕೆ ಚೆನ್ನಬಸವಣ್ಣನ ಮಾತನ್ನು ಉದ್ಧರಿಸಿ ಮುಂದೆ ಸಿದ್ಧರಾಮನ ಹುಟ್ಟಿನ ಜಾತಿಯನ್ನು ಕುರಿತು ಹೀಗೆ ಬರೆಯುತ್ತಾರೆ. "....ಕುಡಿಯರ ವೃತ್ತಿಯವನಾಗಿರುವ ಸಿದ್ಧರಾಮ (ಹಂಡೇ) ಕುರುಬನೆಂದು ಕಾಣುತ್ತದೆ. ಸೊಲ್ಲಾಪುರದಲ್ಲಿ

ಸಿದ್ಧರಾಮನ ಸಮಾಧಿಯ ಅರ್ಚಕರು ಇಂದು ಲಿಂಗಾಯತರಾಗಿದ್ದರೂ ಮೂಲತಃ ಹಂಡೇಗುರುಬರೆಂದು ಜನ ಹೇಳುತ್ತಾರೆ. ಬಳ್ಳಾರಿ–ಅನಂತಪುರಗಳಲ್ಲಿ ಆಳಿದ ಹಂಡೇ ಕುರುಬ ಜಾತಿಯ ಮಲಕನಾಯಕನ ಮನೆದೇವರು ಸೊಲ್ಲಾಪುರದ ಸಿದ್ಧರಾಮನಾಗಿರುವುದು ಇಲ್ಲಿ ಲಕ್ಷಿಬೇಕಾದ ಸಂಗತಿಯಾಗಿದೆ. ಸಿದ್ಧರಾಮನ ಜನನಕ್ಕೆ ಆಶೀರ್ವದಿಸಿದ ರೇವಣಸಿದ್ಧನೂ ನಾಥಪಂಥೀಯನಾಗಿದ್ದು, ಜಾತಿಯಿಂದ ಕುರುಬನೇ ಆಗಿರುವಂತಿದೆ. ಕುರುಬ ಸಮಾಜದಲ್ಲಿ ರೇವಣಸಿದ್ಧ ಹೆಸರಿನ ಮಠಗಳಿರುವುದು, ಈ ಹೆಸರನ್ನು ಭಕ್ತಿಯಿಂದ ಅವರು ಸ್ಮರಿಸುವುದು ಈಗಲೂ ಕಂಡುಬರುತ್ತದೆ" ಎನ್ನುವುದು ಹೊಸ ತಿಳಿವಳಿಕೆಯಾಗಿದೆ.

ಶರಣ ಸಂಸ್ಕೃತಿಯನ್ನು ಕುರಿತು ವಿವೇಚಿಸುವ ಬರಹಗಳು ಸ್ಥಾಪಿತ ಆಲೋಚನೆಗಳನ್ನು ಮೀರಿ ಮುಂದೆ ಸಾಗುತ್ತವೆ. ಕಲ್ಯಾಣ : ಶೈವ ಧರ್ಮದಿಂದ ಶರಣ ಧರ್ಮಕ್ಕೆ ತಿರುಗಿದ ವಿವೇಚನೆ, ಹಂಪಿಯ ಗಾಯತ್ರಿ ಪೀಠವು ವೀರಶೈವ ಮಠವೆಂದೂ ಗಾಯತ್ರಿ ದೇವಾಲಯ ಮೂಲತಃ ವೀರಶೈವ ರಾಮಲಿಂಗ ದೇವಾಲಯವೆನ್ನುವ ನಿಲುವು, ವೀರಶೈವ ಎನ್ನುವ ಪದವು ವಚನಗಳ ಕಾಲವಾದ ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕ, ಏಕೆ ಆಂಧ್ರಪ್ರದೇಶದ ಯಾವುದೇ ಕಾವ್ಯಶಾಸ್ತ್ರ–ಶಾಸನಗಳಲ್ಲಿ ದಾಖಲಾಗಿಲ್ಲವಾಗಿ ಅದು ಶರಣ ಚಳುವಳಿ ಸಂದರ್ಭಕ್ಕೆ ಈಚಿನದಾಗಿದೆ ಎನ್ನುವ ಅಭಿಪ್ರಾಯ, ಲಿಂಗಾಯತ ಪದ ಮೂಲೆಗೆ ಬಿದ್ದು, ವೀರಶೈವ ಪದ ಪ್ರಸಿದ್ಧಿ ಪಡೆದ ಹಿಂದಿನ ಇತಿಹಾಸ, 'ದೀಕ್ಷಾಬೋಧೆ'ಯಂತಹ ಧಾರ್ಮಿಕ ಕಾವ್ಯ ಲಿಂಗಾಯತ ಧರ್ಮದ ಸಾಮಾಜಿಕ ಧೋರಣೆಯನ್ನು ಸ್ಪಷ್ಟಪಡಿಸುವ ಪಠ್ಯವೆನ್ನುವ ವಿಚಾರ, ಬಸವಪುರಾಣದಲ್ಲಿ ಬರುವ ಕಪ್ಪಿಲರ ಪ್ರಸಂಗ ಅಂದಿನ ಮತಾಂತರದ ಒಂದು ಚಿತ್ರಣವೆಂದೂ ಈಗಿನ ಪಂಚಾಚಾರ್ಯ ಪರಂಪರೆಯ ಪ್ರಾಚೀನ ಗಣ್ಯವ್ಯಕ್ತಿಗಳು ದೊಡ್ಡ ಸಂಖ್ಯೆಯಲ್ಲಿ ಬಸವ ಚಳುವಳಿಯೊಳಗೆ ಸೇರಿಕೊಂಡರೆಂಬ ಮಹತ್ತ್ವದ ವಿಷಯವನ್ನು ಹೇಳುತ್ತಾರೆ. ಕಲಬುರ್ಗಿಯವರ ಸಂಶೋಧನೆಯ ಇನ್ನೊಂದು ವಿಶಿಷ್ಟತೆ ಎಂದರೆ ತಮ್ಮದು ಅಂತಿಮವೆಂಬ ಹಠ ಅವರಿಗಿಲ್ಲ – ವೀರಶೈವರಲ್ಲಿ ಪಂಚಾಚಾರ್ಯರ ಕಲ್ಪನೆ ಇದೆಯಷ್ಟೆ! ಆದರೆ ಇದನ್ನು ನಿರಾಕರಿಸುವ ಕಲಬುರ್ಗಿಯವರು ಇವರು ಮೂಲತಃ ಪಂಚಾಚಾರ್ಯರಲ್ಲ, ಚತುರಾಚಾರ್ಯರೆಂಬ ಕಲ್ಪನೆಯೇ ಹೆಚ್ಚು ಸಮ್ಮತವೆನಿಸುತ್ತದೆ ಎನ್ನುವ ಅವರು ಈ ನಿಟ್ಟಿನಲ್ಲಿ ಚರ್ಚೆಯನ್ನು ಮುಂದುವರಿಸಬಹುದಾಗಿದೆ ಎನ್ನುವುದು ಸಂಶೋಧಕನ ಸಮಚಿತ್ತತೆಯ ಸಂಕೇತ. ಕರ್ನಾಟಕದಲ್ಲಿ ದೇವಾಲಯ ಸಂಸ್ಕೃತಿಯನ್ನು ಹುಟ್ಟು ಹಾಕಿದವರು ಜೈನರು. ಇವರನ್ನು ಬಿಟ್ಟರೆ ಈ ಸಂಸ್ಕೃತಿಯನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ಬೆಳೆಸಿದವರು ಲಾಕುಳ ಇತ್ಯಾದಿ ಶೈವರು. ಈ ದೇವಾಲಯಗಳಲ್ಲಿ ಯಾವ ಯಾವ ದೇವರನ್ನು ಅರ್ಚಿಸುತ್ತಿದ್ದರು ಮತ್ತು ಇಷ್ಟು ದೊಡ್ಡ ಸಂಖ್ಯೆಯಲ್ಲಿ ದೇವಾಲಯಗಳು ಬೆಳೆಯಲು ಅನುಸರಿಸಿದ ವಿಧಾನಗಳ ವಿವರ ಮೊದಲ ಬಾರಿಗೆ 'ಲಾಕುಳ ಇತ್ಯಾದಿ ಶೈವರ ದೇವಾಲಯಗಳು' ಲೇಖನದಲ್ಲಿ ದೊರೆಯುತ್ತದೆ. ಈ ದೇವಾಲಯ ನಿರ್ಮಾಣ ಹಾಗೂ ಸಂಪೋಷಣೆಯಲ್ಲಿ ಪುರೋಹಿತಸತ್ತೆಯ ಪಾತ್ರ ದೊಡ್ಡದು ಎನ್ನುವ ಫಲಿತವನ್ನು ನೀಡುತ್ತಾರೆ. 'ಪಂಚಮಸಾಲಿ : ಹಾಗೆಂದರೇನು?' ಲೇಖನ ಈ ತನಕದ ಅಭಿಪ್ರಾಯವನ್ನು ಸ್ಫೋಟಿಸುತ್ತದೆ. ವೀರಶೈವ ಪಂಚಾಚಾರ್ಯರಿಗೂ ಪಂಚಮ ಸಾಲಿಗೂ ಸಂಬಂಧ ಕಲ್ಪಿಸಲಾಗುತ್ತಿತ್ತು. ಅದು ಅಲ್ಲವೆಂದೂ ಶಿವೋಪಾಸಕ ಮೂಲದ ಉತ್ಪಾದನೆ – ಮಾರಾಟ ಜನಸಮುದಾಯವೊಂದು ವೃತ್ತಿಭೇದದಿಂದ ಐದು ಕವಲಾಯಿತೆಂದೂ ಇವುಗಳಲ್ಲಿ ಐದನೆಯ ಕವಲಿನ ಸೆಟ್ಟಿಗಳೇ ಪಂಚಮ ಸಾಲಿಗಳೆಂದೂ ಸ್ಪಷ್ಟವಾಗುತ್ತದೆ. ಪ್ರಾಸವನ್ನು ಬಿಟ್ಟರೆ ಈ ಪಂಚಮ ಸಾಲಿಗಳಿಗೂ ಪಂಚಾಚಾರ್ಯರಿಗೂ ನೇರ ಸಂಬಂಧವಿಲ್ಲ ಎನ್ನುತ್ತಾರೆ. ಬೇಡನಾದ ಕನಕದಾಸನನ್ನು ಕುರುಬನನ್ನಾಗಿಸಿದ, ರಾಮಾನುಜ ಸಂಪ್ರದಾಯದ ದಾಸನಾಗಿರುವ ಕನಕದಾಸನನ್ನು ಮಾಧ್ವ ಸಂಪ್ರದಾಯದ ದಾಸನನ್ನಾಗಿಸಿದ, ರಾಮಾನುಜ ಸಂಪ್ರದಾಯದ ದಾಸನಾದ ಕನಕದಾಸನ ಹೆಸರಲ್ಲಿ ಶಂಕರ ಸಂಪ್ರದಾಯದ "ಪುರಿ" ಪೀಠ ಸ್ಥಾಪಿಸಿರುವ ಬಗೆಗೆ ಒಂದು ಲೇಖನದಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಕನಕದಾಸನ ಮೇಲೆ ರಚಿತವಾದ ಕಲ್ಪಿತಚರಿತ್ರೆ 'ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಗಂಭೀರ ಪ್ರಮಾದ' ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. 'ನಾವು ಕುರುಬರು ನಮ್ಮ ದೇವರು ಬೀರಯ್ಯ' ಎನ್ನುವ ಕೀರ್ತನೆಯನ್ನು ಆಧಾರವಾಗಿರಿಸಿಕೊಂಡು ಅನೇಕರು ಕನಕದಾಸನ ಮತ ನಿರ್ಧಾರಕ್ಕೆ ಬಂದರು. ಆದರೆ ಕಲಬುರ್ಗಿಯವರು ಈ ಕೀರ್ತನೆ ಕೂಡೇಕಲ್ಲ ಬಸವಣ್ಣನ ಮಗ ರಾಚಪ್ಪಯ್ಯನದಾಗಿದೆ ಎಂದಿದ್ದಾರೆ (ಪುಟ ೩೬೫). ಕೂಡೇಕಲ್ಲ ಸಂಪ್ರದಾಯದ ಅಧ್ಯಯನ ಕನಕದಾಸನ ಮತ ನಿರ್ಣಯದಲ್ಲಿ ಹೆಚ್ಚಿನ ನೆರವಿಗೆ ಬರಬಹುದು.

ಶಾಸನಗಳು ರಾಜಕೀಯ, ಸಾಂಸ್ಕೃತಿಕ ಚರಿತ್ರೆಗೆ ಪ್ರಬಲ ಆಕರಗಳು. ಶಾಸನಗಳು ಬಳಸಿ ಚರಿತ್ರೆಯ ಅನೇಕ ವಿಸಂಗತಿಗಳಿಗೆ ಪರಿಹಾರ ಹೇಳುವಲ್ಲಿ ಕಲಬುರ್ಗಿಯವರು ಯಶಸ್ವಿಯಾಗಿದ್ದಾರೆ.

'ನಿಂಬಣದಂಡನಾಥ: ಇನ್ನಷ್ಟು ಶಾಸನಗಳು', 'ಶಾಸನಗಳಿಂದ ಬಸವಣ್ಣನ ಬಗ್ಗೆ ಇನ್ನಷ್ಟು ಸಂಗತಿಗಳು', 'ಮೊಲ್ಲೆ ಬೊಮ್ಮಯ್ಯಗಳ ಕಾವ್ಯ ಮತ್ತು ಶಾಸನಗಳು', 'ಅಮೃತಮಥನ ಪುರಾಣ', 'ಶಾಸನೋಕ್ತ ಷಟ್ಪದ ಕಾವ್ಯ', 'ಶಾಸನಗಳಲ್ಲಿ ಇನ್ನಷ್ಟು ಅಂಶ ವೃತ್ತ-ಮಾತ್ರಾ ವೃತ್ತಗಳು' ಶಾಸನಕ್ಕೆ ಸಂಬಂಧಿಸಿದ ಲೇಖನಗಳು. ಇವು 'ಕೃಷ್ಣದೇವರಾಯ : ತೆಲುಗು ಸಂಸ್ಕೃತಿಯ ಆಕ್ರಮಣ' ಒಂದು ಕುತೂಹಲದಾಯಕ ಲೇಖನ. ಕರ್ನಾಟಕ ರಾಜ್ಯ ರಮಾರಮಣ ಕೃಷ್ಣದೇವರಾಯನ ತೆಲುಗು ಪ್ರೀತಿಯನ್ನು ಆಧಾರಪೂರ್ವಕ ನಿರೂಪಿಸುತ್ತಾರೆ. ವಿಜಯನಗರ ಸಂಸ್ಥಾನದ ನಾಶದ ಹಿಂದೆ ನಡೆದ ಕಾರಸ್ಥಾನ ಏನು ಎನ್ನುವುದಕ್ಕೆ ಕಲಬುರ್ಗಿಯವರು ಹೊಸ ಊಹೆಯನ್ನು ಮುಂದಿಟ್ಟಿದ್ದಾರೆ. "ಈಗ ತೆಲುಗರ ಕೈಯಲ್ಲಿ ಬಾಳುವುದಕ್ಕಿಂತ ಮುಸಲ್ಮಾನರ ಕೈಯಲ್ಲಿ ಸಾಯುವುದು ಸುಖ-ಅನಿವಾರ್ಯತೆಗೆ ಬಹುಶಃ ಕನ್ನಡಿಗರು ತಲುಪಿದರು. ತೆಲುಗರನ್ನು ಕರ್ನಾಟಕ ಸಿಂಹಾಸನದಿಂದ ಕೆಳಗಿಳಿಸುವ, ವೈಷ್ಣವ ಸಂಸ್ಕೃತಿಯ ಆಕ್ರಮಣದಿಂದ ಶೈವ ಸಂಸ್ಕೃತಿಯನ್ನು ಸಂರಕ್ಷಿಸುವ ಏಕೈಕ ದಾರಿ ಕಂಡುಕೊಳ್ಳುವ ಸಲುವಾಗಿ ಕನ್ನಡಿಗರು ಆದಿಲ್‌ಶಾಹಿಗಳೊಂದಿಗೆ ಕೈ ಕೂಡಿಸಿದರು. ಇದರ ಫಲವಾಗಿ ತಾಳಿಕೋಟೆಯುದ್ಧವೇರ್ಪಟ್ಟಿತು. ಈ ಹಿಂದೆ ತೆಲುಗರು ಮುಸಲ್ಮಾನರೊಂದಿಗೆ ಕೈಗೂಡಿಸಿ ಕನ್ನಡಿಗ ಕುಮಾರರಾಮನ ರುಂಡ ಹಾರುವಂತೆ ಮಾಡಿದ್ದರು. ಈಗ ಕನ್ನಡಿಗರು ಅದೇ ಮುಸಲ್ಮಾನರೊಂದಿಗೆ ಕೈಕೂಡಿಸಿ ತಾಳಿಕೋಟೆ ಯುದ್ಧದಲ್ಲಿ ತೆಲುಗು ರಾಮರಾಯನ ರುಂಡ ಹಾರುವಂತೆ ಮಾಡಿದರು. ಇದರಿಂದಾಗಿ ಕರ್ನಾಟಕ ಸಿಂಹಾಸನ ತೆಲುಗರಿಂದ ಮುಕ್ತಾಯವಾಯಿತು. ಸುತ್ತಲೂ ಬೆಳೆದಿದ್ದ ಕರ್ನಾಟಕ ತುಳು ಕೃಷ್ಣ ಸಂಸ್ಕೃತಿಗಿಂತ ಆಂಧ್ರದ ವೆಂಕಟೇಶ ಸಂಸ್ಕೃತಿ ನಾಶವಾಗಿ, ಕನ್ನಡ ವಿರೂಪಾಕ್ಷ ಸಂಸ್ಕೃತಿ ಸಂರಕ್ಷಿಸಲ್ಪಟ್ಟಿತು. ಅಂದರೆ ವಿಜಯವಿಠ್ಠಲ, ಲಕ್ಷ್ಮೀನರಸಿಂಹ (ಉಗ್ರನರಸಿಂಹ) ಮೊದಲಾದವು ಭಗ್ನಗೊಂಡು ವಿರೂಪಾಕ್ಷ, ಉದ್ದಾನವೀರಭದ್ರ, ಹಜಾರಿರಾಮ ಸಂರಕ್ಷಿಸಲ್ಪಟ್ಟವು". ಈ ತನಕ ವಿಜಯನಗರದ ಇತಿಹಾಸ ಬರೆದವರೆಲ್ಲರೂ ಕೃಷ್ಣದೇವರಾಯನಿಂದ ಕರ್ನಾಟಕಕ್ಕೆ ಆಗಿದ್ದ ಅನ್ಯಾಯವನ್ನು ಕೈಬಿಟ್ಟು (ಉದ್ದೇಶಪೂರ್ವಕ ಮರೆತು) ಅವನನ್ನು ಕರ್ನಾಟಕದ ಹಿತವಂದಿಗನೆಂದೂ, ತಾಳಿಕೋಟೆ ಕದನವು ಹಿಂದೂ-ಮುಸಲ್ಮಾನರ ನಡುವೆ ನಡೆದುದೆಂದೂ ಹೇಳುತ್ತಾ ಬರಲಾಯಿತು. ವಾಸ್ತವಿಕವಾಗಿ ಕೃಷ್ಣದೇವರಾಯ ಕರ್ನಾಟಕ ಸಂಸ್ಕೃತಿಗೆ ಬಹಳಷ್ಟು ಹಾನಿ ಮಾಡಿದನೆಂದೂ, ತಾಳಿಕೋಟೆ ಕದನವು ನಿಜ ಅರ್ಥದಲ್ಲಿ ಕನ್ನಡಿಗ-ತೆಲುಗರೊಂದಿಗೆ ನಡೆದ ಕಾಳಗವೆಂದೂ ಈಗ ಸತ್ಯವನ್ನು ದಾಖಲಿಸಬೇಕಾಗಿದೆ ಎಂದು ಕಲಬುರ್ಗಿಯವರು ಅಭಿಪ್ರಾಯ ಪಡುತ್ತಾರೆ.

ವಚನ ಸಾಹಿತ್ಯದ ಪರಿಷ್ಕರಣ - ಸಂಪಾದನಕ್ಕೆ ಸಂಬಂಧಿಸಿದಂತೆ ಎರಡು ಲೇಖನಗಳು ಈ ಸಂಪುಟದಲ್ಲಿವೆ. ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿಯವರಿಂದ ನಡೆದುಹೋದ 'ವಚನ ಮಿಶ್ರಣ' ಹಾಗೂ ಡಾ. ಆರ್.ಸಿ. ಹಿರೇಮಠರಿಂದ ಆದ 'ವಚನ ಪಾಠ ಮಿಶ್ರಣ'ದ ಬಗೆಗೆ ಬೆಳಕು ಚೆಲ್ಲಿದ್ದಾರೆ. ವಚನ ಸಾಹಿತ್ಯವೇ ಮೊದಲಾದ ದೇಸೀ ಸಾಹಿತ್ಯ ಸಂಪಾದನೆಗೆ ಪಾರಂಪರಿಕ ಗ್ರಂಥಸಂಪಾದನ ವಿಧಾನದಲ್ಲಿ ಬದಲಾವಣೆಯನ್ನು ತರಬೇಕೆನ್ನುವ ಅವರ ಧೋರಣೆ ಅತ್ಯಂತ ಮೌಲಿಕವಾದುದು. ಮಾರ್ಗ ಸಾಹಿತ್ಯ ಸಂಪಾದನೆಯ ವಿಧಿವಿಧಾನಗಳನ್ನು ದೇಸೀ ಸಾಹಿತ್ಯಕ್ಕೂ ಅನ್ವಯಿಸಿದ ಕಾರಣ ದೇಸೀ ಕಾವ್ಯಗಳ ಸಂಪಾದನೆಯಲ್ಲಿ ದೊಡ್ಡ ದೋಷ ಸಂಭವಿಸಿತು ಎನ್ನುವ ಮಾತು ಸತ್ಯವಾದುದು. ದೇಸೀ ಕಾವ್ಯ ಸಂಪಾದನೆಗೆ ಭಿನ್ನವಾದ ವೈಧಾನಿಕತೆಯನ್ನು ರೂಪಿಸಬೇಕೆನ್ನುವ ಮಾತನ್ನು ೧೯೭೦ರಷ್ಟು ಹಿಂದೆಯೇ ಅವರು ಬರೆದಿದ್ದರು. ಸಾಹಿತ್ಯಿಕ ಆಕರಗಳನ್ನು ಮಾತ್ರ ನೆಮ್ಮಿಕೊಂಡಿದ್ದ ಕಾಲ ಹೋಗಿ ಪುರಾತತ್ವ, ಜಾನಪದ ಆಕರಗಳ ಬೆಳಕಿನಲ್ಲಿ ಗ್ರಂಥಸಂಪಾದನೆ ಮಾಡುವ ಕಾಲ ಸನ್ನಿಹಿತವಾಗಿದೆ. ಇವುಗಳನ್ನೆಲ್ಲ ಆಧರಿಸಿ ಬಹುಶಿಸ್ತೀಯ ನೆಲೆಗಳಲ್ಲಿ ಗ್ರಂಥಸಂಪಾದನೆ ಮಾಡುವ ಹಿನ್ನೆಲೆಯಲ್ಲಿ, ಲಿಖಿತ ಪರಂಪರೆಯು ಆಧುನಿಕ ಮಾಧ್ಯಮಗಳ ಫಲವಾಗಿ ನವಮೌಕ್ತಿಕತೆಯನ್ನು ಹೊಂದುವ ಸನ್ನಿವೇಶಗಳಲ್ಲಿ ಸಾಂಪ್ರದಾಯಿಕ ಗ್ರಂಥಸಂಪಾದನೆಗೆ ಹೊಸ ಆಯಾಮ ಒದಗಬೇಕಾದುದು ಅನಿವಾರ್ಯ. ಅದಕ್ಕಾಗಿಯೇ ಕಲಬುರ್ಗಿಯವರು ಶಾಬ್ದಿಕ ಸಂಪಾದನೆಯ ನೆಲೆಯಿಂದ 'ಸಾಂಸ್ಕೃತಿಕ ಸಂಪಾದನೆ'ಯ ನೆಲೆಗೆ ಸಾಗಬೇಕಾಗಿದೆ ಎನ್ನುವ ಮೂಲಕ ಗ್ರಂಥಸಂಪಾದನೆಗೆ ಹೊಸ ಕವಲು ಜೋಡಿಸಿದ್ದಾರೆ.

ಕಲಬುರ್ಗಿಯವರ 'ಮಾರ್ಗ : ಸಂಪುಟ-ನಾಲ್ಕು' ಕರ್ನಾಟಕದ ಮಧ್ಯಕಾಲೀನ ಸಾಹಿತ್ಯ-ಸಂಸ್ಕೃತಿ ವಿಶೇಷವಾಗಿ ಸಮಾಜೋ ಸಾಂಸ್ಕೃತಿಕ ಅಧ್ಯಯನಕ್ಕೆ ಬೆಲೆ ಬಾಳುವ ಕೊಡುಗೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬ ❑

೫

ಕನ್ನಡ ಭಾಷಾವಿಜ್ಞಾನಕ್ಕೆ ಎ. ಕೆ. ರಾಮಾನುಜನ್ ಕೊಡುಗೆ

ಬಿ. ಬಿ. ರಾಜಪುರೋಹಿತ

ಡಾ. ಎ. ಕೆ. ರಾಮಾನುಜನ್ ಅವರನ್ನು ನಾನು ೧೯೫೭ರಿಂದ ಬಲ್ಲವನಾಗಿದ್ದೆ. ಧಾರವಾಡದ ಕರ್ನಾಟಕ ಕಾಲೇಜನಿಂದ ಕನ್ನಡ (ಮುಖ್ಯ) ಮತ್ತು ಸಂಸ್ಕೃತ (ಉಪಮುಖ್ಯ) ವಿಷಯಗಳನ್ನು ತೆಗೆದುಕೊಂಡು ಬಿ. ಎ. (ಆನರ್ಸ್) ಮುಗಿಸಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜ್ಯೂನಿಯರ್ ಎಂ.ಎ. ಗೆ ಸೇರಿದಾಗ ಕೀರ್ತಿನಾಥ ಕುರ್ತಕೋಟಿ ಇಂಗ್ಲೀಷ್ (ಮುಖ್ಯ) ಮತ್ತು ಸಂಸ್ಕೃತ (ಉಪಮುಖ್ಯ) ವಿಷಯಗಳನ್ನು ತೆಗೆದುಕೊಂಡು ಸೀನಿಯರ್ ಎಂ. ಎ. ದಲ್ಲಿದ್ದರು. ಜ್ಯೂನಿಯರ್ ಸೀನಿಯರ್ ಕ್ಲಾಸುಗಳು ಒಟ್ಟಿಗೇ ನಡೆಯುತ್ತಿದ್ದುದರಿಂದ ನಾವಿಬ್ಬರೂ ಸಂಸ್ಕೃತಕ್ಕೆ ಡಾ. ಶಿ. ಚೆ. ನಂದೀಮಠ ಮತ್ತು ಡಾ. ಕೆ. ಕೃಷ್ಣಮೂರ್ತಿ ಅವರ ವಿದ್ಯಾರ್ಥಿಗಳಾಗಿದ್ದೆವು. ವಯಸ್ಸಿನಲ್ಲಿ ಕೀರ್ತಿ ಅವರು ನನಗಿಂತ ಏಳು ವರ್ಷಗಳಿಗೆ ಹಿರಿಯರಾಗಿದ್ದರೂ ಬಿ. ಎ. ಆದ ಮೇಲೆ ಐದು ವರ್ಷ ಗದುಗಿನ ಸಮಿತಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಕೆಲಸ ಮಾಡಿ ಎಂ.ಎ. ಗೆ ಬಂದಿದ್ದರು. ಜಿ. ಬಿ. ಜೋಶಿ ಅವರ ಮನೆಯಲ್ಲೇ ಕೀರ್ತಿ ಇರುತ್ತಿದ್ದುದರಿಂದ ಅವರ ಮನೆಯಲ್ಲಾಗಲಿ ಮನೋಹರ ಗ್ರಂಥ ಮಾಲೆಯ ಅಟ್ಟದ ಮೇಲಾಗಲಿ ಏಕಾಗ್ರತೆಯಿಂದ ಓದಲು ಅವಕಾಶವಾಗುತ್ತಿದ್ದಿಲ್ಲ. ಹೀಗಾಗಿ ಕೋರ್ಟ್ ಇದಿರಿನ ದೇಶಪಾಂಡೆ ಚಾಳಿನಲ್ಲಿಯ ನನ್ನ ಕೋಣೆಯಲ್ಲಿ ಇಬ್ಬರೂ ಸಂಸ್ಕೃತ ಅಭ್ಯಾಸ ಮಾಡುತ್ತಿದ್ದೆವು. ರಾಮಾನುಜನ್ ಬಗ್ಗೆ ಬರೆಯುವಾಗ ಕೀರ್ತಿನಾಥರ ಬಗೆಗೆ ಏಕೆ ಬರೆಯುತ್ತಿದ್ದೇನೆಂದರೆ ರಾಮಾನುಜನ್ ಅವರನ್ನು ನನಗೆ ಪರಿಚಯಿಸಿದವರೇ ಕೀರ್ತಿ. ಆಗ ರಾಮಾನುಜನ್‌ರು ಬೆಳಗಾವಿಯ ಆರ್.ಪಿ.ಡಿ. ಕಾಲೇಜಿನಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿದ್ದರು. ಇದು ೧೯೫೬-೫೭ರ ಕಾಲ. ಆ ಪೂರ್ವದಲ್ಲಿ ಅವರು ಕೊಯ್ಲೋನ್, ಮದುರೈ, ಬರೋಡಾಗಳಲ್ಲಿಯೂ ಕೆಲಸ ಮಾಡಿದ್ದರು. ರಜೆ ಸಿಕ್ಕಾಗ ಬೆಳಗಾವಿಯಿಂದ ಧಾರವಾಡಕ್ಕೆ ಬಂದು ಜಿ. ಬಿ. ಅಟ್ಟದ ಮೇಲೆ ಬೈಠಕ್ ಮಾಡುತ್ತಿದ್ದರು. ಒಮ್ಮೆ ಬಂದಾಗ ಅವರು ಶೇಕ್ಸ್‌ಪಿಯರನ 'ಒಥೆಲೋ' ನಾಟಕದ ಕೆಲ ಭಾಗ ಓದಿ ತೋರಿಸಿದ್ದರು. ಕರವಸ್ತ್ರದ ಆ ಪ್ರಸಂಗವನ್ನು ರಾಮಾನುಜನ್ ಓದಿದ್ದುದು ಇನ್ನೂ ಕಣ್ಣೆದುರಿಗೇ ಇದೆ. ಹೆಂಗಸರ ತರಹ ಸ್ವಲ್ಪ ಕೀರಲು ಧ್ವನಿ. ಆದರೂ ಅವರ ಮಾತು, ಶೈಲಿಯಲ್ಲಿ ಸೆಳೆತ, ಮಾದಕತೆ ಇತ್ತು. ಒಮ್ಮೆ ನೋಡಿದರೆ ಎಂದೂ ಮರೆಯಲಾರದಂಥ ವ್ಯಕ್ತಿತ್ವ. ನನ್ನ ಬಗೆಗೂ ಅವರಿಗೆ ಪ್ರೀತಿ ಅಭಿಮಾನಗಳು ಇದ್ದವು. ಅವರು ೧೯೫೯ರಲ್ಲಿ ಅಮೇರಿಕೆಗೆ ಹೋದ ಮೇಲೆ ಅವರ ಸಂಪರ್ಕ ತಪ್ಪಿತು.

೧೬ನೇ ಮಾರ್ಚ್ ೧೯೨೯ರಂದು ಮೈಸೂರಲ್ಲಿ ಜನಿಸಿದ ಅತ್ತಿಪಾಟ್ ಕೃಷ್ಣಸ್ವಾಮಿ ರಾಮಾನುಜನ್ ಮನೆಯಲ್ಲಿ ತಮಿಳು ಮಾತಾಡುವ ಅಯ್ಯಂಗಾರರು. ಅವರ ಪ್ರಾಥಮಿಕ ಶಿಕ್ಷಣ ಕನ್ನಡದಲ್ಲೇ ಆಗಿತ್ತು. ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲೀಷ್ ವಿಷಯದಲ್ಲಿ ಬಿ. ಎ. ಮತ್ತು ಎಂ. ಎ. ಮಾಡಿ ೧೯೫೮ರಲ್ಲಿ ಪುಣೆಯ ಡೆಕ್ಕನ್ ಕಾಲೇಜನಿಂದ ಡಿಪ್ಲೋಮಾ ಇನ್ ಲಿಂಗ್ವಿಸ್ಟಿಕ್ಸ್ ಮಾಡಿ ಅಮೇರಿಕೆಯ ಇಂಡಿಯಾನಾ ವಿಶ್ವವಿದ್ಯಾಲಯದಿಂದ ಭಾಷಾವಿಜ್ಞಾನದಲ್ಲಿ ೧೯೬೩ರಲ್ಲಿ ಪಿಎಚ್. ಡಿ. ಪಡೆದರು. ಆ ಪೂರ್ವದಲ್ಲಿಯೇ ಅಂದರೆ ೧೯೬೨ರಲ್ಲಿ ಶಿಕ್ಯಾಗೋ ವಿಶ್ವವಿದ್ಯಾಲಯದಲ್ಲಿ ಅಸಿಸ್ಟಂಟ್ ಪ್ರೊಫೆಸರ್ ಆಗಿ ಸೇರಿಕೊಂಡಿದ್ದರು.

೧೯೬೭ರಲ್ಲಿ ನಾನು ಕೇರಳ ವಿಶ್ವವಿದ್ಯಾಲಯದ ಭಾಷಾವಿಜ್ಞಾನ ವಿಭಾಗದಲ್ಲಿ ಅಧ್ಯಾಪಕನಾಗಿ ಸೇರಿ ಇನ್ನೂ ಒಂದು ವರ್ಷವೂ ಆಗಿದ್ದಿಲ್ಲ. ಒಂದು ದಿನ ಅವರಿಂದ ಪತ್ರವೊಂದು ಬಂದಿತು. ಶಿಕ್ಯಾಗೋ ವಿಶ್ವವಿದ್ಯಾಲಯದಲ್ಲಿ ಕನ್ನಡ ಕಲಿಸಲು ಒಂದು ವರ್ಷದ ಮಟ್ಟಿಗೆ ನನಗೆ ಬರಲು ಸಾಧ್ಯವೇ ಎಂದು ಕೇಳಿದ್ದರು. ನನ್ನ ಪ್ರೊಬೇಶನ್ ಅವಧಿ ಕೂಡ ಮುಗಿದಿಲ್ಲವಾದ್ದರಿಂದ ರಜೆ ಸಿಗುವದಿಲ್ಲ; ಬರಲು

ಸಾಧ್ಯವಾಗುವದಿಲ್ಲ ಎಂದು ಉತ್ತರಿಸಿದೆ. 'ಸರಿ' ಎಂದು ಬೇರೆಯವರನ್ನು ಕರೆಸಿಕೊಂಡಿರಬೇಕು. ಆದರೆ ಅವರು ನನ್ನ ಭಾಷಾವಿಜ್ಞಾನದ ಪರಿಣತಿಯನ್ನು ಗುರುತಿಸುತ್ತ ನನ್ನನ್ನು ಬೆನ್ನಟ್ಟುತ್ತಿದ್ದರು.

ಅನೇಕ ವರ್ಷಗಳ ನಂತರ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ನಾನು ೧೯೭೧ರಲ್ಲಿ ಕೆಲಸಕ್ಕೆ ಸೇರಿದ ಮೇಲೆ, ೧೯೭೩-೭೪ ರಲ್ಲಿರಬೇಕು, ಅವರು ಬಂದರು. 'ಏನಪ್ಪ, ಚೆನ್ನಾಗಿದ್ದೀಯಾ' ಎಂದು ಪ್ರೀತಿಯಿಂದ ಏಕವಚನದಲ್ಲಿ ಮಾತಾಡಿಸಿದರು. ಆಗಲೂ ಅವರಿಗೆ ನನ್ನ ನೆನಪು ಧಾರವಾಡದ ಹಿನ್ನೆಲೆಯದೇ. ರಾಮಾನುಜನ್ ಅಸಾಧ್ಯ ಬುದ್ಧಿವಂತರು. ಅವರ ಮಾತನ್ನು ಕೇಳಿದ ಯಾರಿಗೂ ಇದು ಮನದಟ್ಟಾಗಲು ಬಹಳ ಕಾಲ ಬೇಕಾಗುತ್ತಿದ್ದಿಲ್ಲ. ಭಾ.ಭಾ.ಸಂ.ದಲ್ಲಿ ಭಾಷಣ ಮಾಡುತ್ತ 'ತಮಿಳು ಮಾತೃಭಾಷೆಯ ಎಂ. ಎಸ್. ಸುಬ್ಬುಲಕ್ಷ್ಮಿಯ ಸಂಸ್ಕೃತ ಉಚ್ಚಾರ ಚೆನ್ನಾಗಿದೆಯಾದರೂ ಮಹಾಪ್ರಾಣಗಳನ್ನು ಮಾತ್ರ ಪ್ರಮಾಣಕ್ಕಿಂತ ಹೆಚ್ಚು ಒತ್ತಿ ಉಚ್ಚರಿಸುತ್ತಾರೆ' ಎಂದು ಅವರು ಟಿಪ್ಪಣಿಸಿದ್ದರು. ಸುಬ್ಬುಲಕ್ಷ್ಮಿಯ ಸುಪ್ರಭಾತ ಮೊದಲಾದವನ್ನು ಸಾಕಷ್ಟು ಸಲ ಕೇಳಿದ್ದರೂ ಆ ವರೆಗೆ ನಾವು ಲಕ್ಷಿಸದೇ ಇದ್ದ ವಿಷಯವನ್ನು ಅವರು ಹೇಳಿದ್ದರಿಂದ ಅದು ಇಂದಿಗೂ ನೆನಪುಳಿದಿದೆ.

ರಾಮಾನುಜನ್ ಅವರ ಲೇಖನ ಕಾರ್ಯ ವೈವಿಧ್ಯಪೂರ್ಣವಾಗಿದೆ. ಭಾಷಾವಿಜ್ಞಾನ, ಸಾಮಾಜಿಕ ಭಾಷಾವಿಜ್ಞಾನ, ಜಾನಪದ ಸಾಹಿತ್ಯ ಸೃಜನಶೀಲ ಸಾಹಿತ್ಯ ಮೊದಲಾದ ಅನೇಕ ಪ್ರಕಾರಗಳಲ್ಲಿ ಮಹತ್ತ್ವದ ಕೃತಿಗಳನ್ನು ರಚನೆ ಮಾಡಿದ್ದಾರೆ. ಇಂಗ್ಲೀಷ್ ಸಾಹಿತ್ಯಾಭ್ಯಾಸದ ನಂತರ ಸಂಶೋಧನೆಯಲ್ಲಿ ಭಾಷಾವಿಜ್ಞಾನ ಅವರ ಪ್ರಾರಂಭಿಕ ಕ್ಷೇತ್ರ, ಆದರೆ ಮುಂದೆ ಅವರು ಬೆಳೆದ ರೀತಿ ಅವರನ್ನು ಜಾನಪದ ಸಾಹಿತ್ಯ ಮತ್ತು ಸೃಜನಶೀಲ ಸಾಹಿತ್ಯದಲ್ಲಿ ಅಮರರನ್ನಾಗಿ ಮಾಡಿತು. ಇಂದು ರಾಮಾನುಜನ್‌ರ ಖ್ಯಾತಿ ಭಾಷಾವಿಜ್ಞಾನಕ್ಕಿಂತ ಇತರ ಕ್ಷೇತ್ರಗಳಲ್ಲಿಯೇ ಹೆಚ್ಚು ಪ್ರಖರವಾಗಿ ಕಂಡುಬರುತ್ತಿದೆ. ಈ ಎಲ್ಲ ಕ್ಷೇತ್ರಗಳಲ್ಲಿ ಅವರ ಕೊಡುಗೆಯನ್ನು ಕುರಿತು ಹೇಳುವದಕ್ಕೆ ಒಂದು ಗ್ರಂಥವನ್ನೇ ಬರೆಯಬೇಕಾದೀತು. ಪ್ರಸ್ತುತದಲ್ಲಿ ಭಾಷಾವಿಜ್ಞಾನಿಯಾಗಿ ಅವರ ಕೊಡುಗೆಯನ್ನು ಮಾತ್ರ ಅವಲೋಕಿಸಬೇಕೆಂದಿದ್ದೇನೆ.

ರಾಮಾನುಜನ್‌ರ ಇಂಡಿಯಾನಾ ವಿಶ್ವವಿದ್ಯಾಲಯದ ೧೯೬೩ರ ಸಂಪ್ರಬಂಧ A Generative Grammar of Kannada. ಅವರು ಈ ಸಂಶೋಧನೆ ನಡೆಸುವ ಕಾಲಕ್ಕೆ ಸ್ವಲ್ಪ ಮೊದಲು ಅಂದರೆ ೧೯೫೭ರಲ್ಲಿ, ನೋಅಮ್ ಚೋಮ್‌ಸ್ಕಿ Syntactic Structures ಎಂಬ ಕೃತಿಯನ್ನು ರಚಿಸಿ ಭಾಷಾವಿಜ್ಞಾನದ ತಿಳುವಳಿಕೆಗೆ ಒಂದು ಹೊಸ ಆಯಾಮ ತಂದುಕೊಟ್ಟು ಮಹತ್ತರ ಸಾಧನೆ ಮಾಡಿದ್ದ. ಅಲ್ಲಿಯ ವರೆಗೆ ಲಿಯೊನಾರ್ಡ್ ಬ್ಲೂಮ್‌ಫೀಲ್ಡ್‌ನಿಂದ ಆರಂಭಿಸಲ್ಪಟ್ಟಿದ್ದ ವರ್ಣನಾತ್ಮಕ ವ್ಯಾಕರಣ ಸಾಕಷ್ಟು ಪ್ರಚಾರ ಪಡೆದು ಕೆನೆಥ್ ಪೈಕ್ ಮತ್ತು ಯುಜೀನ್ ನೈಡ, ಝೆಲಿಗ್ ಹ್ಯಾರಿಸ್, ಚಾರ್ಲ್ಸ್ ಹಾಕೆಟ್ ಮೊದಲಾದ ಪ್ರಭೃತಿಗಳು ನಿರೂಪಿಸಿದ ವಿಶ್ಲೇಷಣೆಯ ತಂತ್ರಗಳಿಂದ ಒಂದು ಮಹತ್ತ್ವದ ಘಟ್ಟ ತಲುಪಿತ್ತು. ಇದುವರೆಗೆ ಯಾವ ಸಂಸ್ಕರಣವೂ ಆಗಿರದ ಒಂದು ಅಪರಿಚಿತ ಭಾಷೆಯನ್ನು ಲಿಪಿಗಿಳಿಸಿ ಎಲ್ಲರಿಗೂ ತಿಳಿಯುವಂತೆ ಅದನ್ನು ವರ್ಣಿಸಿ ಅದರ ವ್ಯಾಕರಣವನ್ನು ರಚಿಸುವ ವರ್ಣನಾತ್ಮಕ ಭಾಷಾವಿಜ್ಞಾನದ ತಂತ್ರಗಳು ಮಾನವೇತಿಹಾಸದಲ್ಲಿ ಮಹತ್ತ್ವದ ಹೊಸ ಹೆಜ್ಜೆಯಾಗಿದ್ದವು. ಆ ಪ್ರಕಾರ ಆಫ್ರಿಕೆಯ ಮತ್ತು ಉತ್ತರ ಅಮೇರಿಕೆಯ ಅನೇಕ ಭಾಷೆಗಳು ಸಂಸ್ಕಾರ ಪಡೆದು ಸುಸಂಸ್ಕೃತ ಭಾಷೆಗಳ ಪಟ್ಟಿಗೆ ಸೇರಿಕೊಂಡವು. ಈ ಭಾಷಾಶಾಸ್ತ್ರಿಗಳು 'ಭಾಷೆಯನ್ನು ಮಂಗಳ ಲೋಕದಿಂದ ಬಂದವರಂತೆ ವಿಶ್ಲೇಷಿಸಬೇಕು' ಎನ್ನುತ್ತಾರೆ. ಆದರೆ ಝೆಲಿಗ್ ಹ್ಯಾರಿಸ್‌ನ ಶಿಷ್ಯರಲ್ಲೊಬ್ಬನಾದ ನೋಅಮ್ ಚೋಮ್‌ಸ್ಕಿ ಎಂಬ ಅಮೇರಿಕಾವಾಸಿ ಯಹೂದಿ ಈ ತಿಳುವಳಿಕೆಗೆ ಹೊಸ ಆಯಾಮವನ್ನು ತಂದುಕೊಟ್ಟ. ಅದು Transformational Generative Grammar (TG) ಎಂಬ ಹೆಸರಿನಿಂದ ಪ್ರಚುರವಾಯಿತು. ಅವನು 'ಯಾವುದೇ ವ್ಯಾಕರಣವು ಭಾಷೆಯನ್ನು ವರ್ಣಿಸಿದರಷ್ಟೇ ಸಾಲದು; ಅಷ್ಟಕ್ಕೇ ಅದರ ಕೆಲಸ ಮುಗಿಯುವದಿಲ್ಲ. ಆಯಾ ಭಾಷೆಯಲ್ಲಿ ಹೊಸ ಹೊಸ ವಾಕ್ಯಗಳನ್ನು ಉತ್ಪಾದಿಸುವ ಸಾಮರ್ಥ್ಯವುಳ್ಳದ್ದಾಗಿರಬೇಕು, ಆ ವ್ಯಾಕರಣ.' ಎಂದ. ಆ ಹೇಳಿಕೆಯ ಪ್ರಕಾರ ಅವನ ಪಂಥದವರು ಯಾವುದೇ ಭಾಷೆಯಲ್ಲಿ ಮೂಲಭೂತವಾದ ಕೆಲವು ವಾಕ್ಯಗಳಿಂದ (Kernel sentences) ಎಲ್ಲ ತರಹದ ವಾಕ್ಯಗಳನ್ನು 'ಉತ್ಪಾದಿಸಲು' ಸಾಧ್ಯ ಎಂದು ಹೇಳತೊಡಗಿದರು. ಒಂದು

ಘಟ್ಟದಲ್ಲಿ ಇಂಗ್ಲೀಷಿಗೆ ಎಂಟು (ಎಂಟನೆಯದು ವಾದಗ್ರಸ್ತವಿದೆ) ಮೂಲವಾಕ್ಯಗಳನ್ನು ಕಂಡುಹಿಡಿದರು. ಅವುಗಳ ಪರಿವರ್ತನ (Transformation)ದಿಂದ ಇಂಗ್ಲೀಷಿನ ಎಲ್ಲ ವಾಕ್ಯಗಳು ಸಿದ್ಧಿಸುತ್ತವೆ ಎಂದರು. (ನೋಡಿ: Robert P. Stockwlell, 1963, in *Natural Language and Computer*, Ed. Paul L. Garvin: 'The task of the grammarian, is therefore, to construct a model which will generate sentences in such a way as to characterise certain linguistic abilities and limitations of the speaker of a given natural language' p.25.) ಈ ವಾದ ಬಹಳ ದಿನ ನಿಲ್ಲಲಿಲ್ಲ. ನೋಅಮ್ ಚೋಮ್‌ಸ್ಕಿಯೇ ೧೯೬೫ರಲ್ಲಿ Aspects of the Theory of Syntax ಪ್ರಕಟಿಸಿದ ನಂತರ ತಾನೇ ತನ್ನ ತಿಳುವಳಿಕೆಯನ್ನು ಸಾಕಷ್ಟು ಬದಲಿಸಿದ. ಅಲ್ಲದೇ ಕೆನೆಥ್ ಪೈಕ್‌ನ Tagmemics ಎಂಬ ಪ್ರಣಾಲಿಯೂ ಸಾಕಷ್ಟು ಪ್ರಚಾರ ಪಡೆಯಿತು. ಇರಲಿ, ಆ ಚರ್ಚೆ ಇಲ್ಲಿ ವಿಷಯಬಾಹಿರವಾಗುತ್ತದೆ. ಆದರೆ ರಾಮಾನುಜನ್ ತಮ್ಮ ೨೬೮ ಪುಟಗಳ A Generative Grammar of Kannada ದಲ್ಲಿ ನೋಅಮ್ ಚೋಮ್‌ಸ್ಕಿಯ ಮೊದಲಿನ TG ತತ್ತ್ವಗಳನ್ನು ಅನುಸರಿಸಿ ಕನ್ನಡದ ವ್ಯಾಕರಣವನ್ನು ರಚಿಸಿದರು. ಹೀಗೆ ಕನ್ನಡದ ವಾಕ್ಯಗಳಿಗೂ ವಾಕ್ಯಾಂಗಗಳಿಗೂ ೨೨ Kernel ಗಳನ್ನು ಕಂಡು ಹಿಡಿದು ಚರ್ಚಿಸಿದರು. ಅವರು ಕನ್ನಡದ ಆಡುಮಾತನ್ನೇ (ಗ್ರಂಥಸ್ಥ ಭಾಷೆಯನ್ನಲ್ಲ) ತಮ್ಮ ಸಾಮಗ್ರಿಯನ್ನಾಗಿ ಬಳಸಿದರು. ಮುಂದೆ TG ತತ್ತ್ವಗಳೇ Kernel ವಿಚಾರವನ್ನು ತ್ಯಜಿಸಿ ಭಿನ್ನವಾದ ರೀತಿಯಲ್ಲಿ ಬೆಳೆದು ಬಂದುದರಿಂದ ರಾಮಾನುಜನ್ ಅವರೂ ತಮ್ಮ ಕನ್ನಡ ವ್ಯಾಕರಣ ವಿಚಾರಗಳನ್ನು ಮುಂದುವರಿಸಿಕೊಂಡು ಬರಲಿಲ್ಲ.

೭೦ರ ದಶಕದಲ್ಲಿ ವಿಲಿಯಂ ಲ್ಯಾಬೋವ್, ಜಾನ್ ಗಂಪರ್ಜ್ ಮೊದಲಾದ ಪ್ರಭೃತಿಗಳು ಬೆಳೆಸಿದ ಸಾಮಾಜಿಕ ಭಾಷಾವಿಜ್ಞಾನ ಬಹಳ ಪ್ರಚಲಿತವಾಯಿತು. ಭಾಷೆ ಸಾಮಾಜಿಕ ವ್ಯವಹಾರದ ಮುಖ್ಯ ಅಂಗವಾದುದರಿಂದ ಅದರ ಸಾಮಾಜಿಕ ವಿಸ್ತಾರವನ್ನು ಎತ್ತಿ ತೋರಿಸುವ ಕಾರ್ಯ Sociolinguistics ನದಾಗಿತ್ತು. ಈ ದಿಶೆಯಲ್ಲಿ ರಾಮಾನುಜನ್ ತಮ್ಮನ್ನು ಸಮರ್ಥವಾಗಿ ತೊಡಗಿಸಿಕೊಂಡರು. ಅವರು ವಿಲಿಯಂ ಬ್ರೈಟ್ ಅವರೊಡನೆ ಮಹತ್ತ್ವದ ಕೊಡುಗೆಯನ್ನು ನೀಡಿದರು. ಅವರು ೧೯೬೪ರಲ್ಲಿ ಬರೆದ Sociolinguistic Variation and Language Change ಎಂಬ ಲೇಖನ (ನೋಡಿ: *Socio-linguistics: Selected Readings*, Eds: J.B. Pride and J. Holmes, Penguin, 1964) ಮೌಲಿಕವಾಗಿದೆ. ಭಾಷೆಯ ಬದಲಾವಣೆ ಮತ್ತು ಭಾಷೆಯ ಸೃಜನಶೀಲತೆಯನ್ನು ಕುರಿತು ಭಾರತೀಯ ಸಾಮಾಜಿಕ ಭಾಷಾವಿಜ್ಞಾನಕ್ಕೆ ಈ ಲೇಖನ ಅಪೂರ್ವ ಕಾಣಿಕೆಯಾಗಿದೆ.

ಮಲಯಾಳಿ ಸ್ತ್ರೀಯನ್ನು ಹೆಂಡತಿಯಾಗಿ ಸ್ವೀಕರಿಸಿದ ರಾಮಾನುಜನ್ ತಮ್ಮ ಪತ್ನಿಯ ಸೃಜನಶೀಲತೆಯನ್ನು ಗುರುತಿಸಿ 'ಹಳದಿ ಮೀನು' (ಮನೋಹರ ಗ್ರಂಥ ಮಾಲೆ) ಎಂಬ ಅವರ ಕಲ್ಪನೆಯನ್ನು ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದನ್ನಾಗಿಸಿದ್ದರು. ಕೊನೆಕೊನೆಗೆ ದಾಂಪತ್ಯದ ವಿರಸದಲ್ಲಿ ನೊಂದಿದ್ದರು. ಅವರ ಹೆಂಡತಿ ಅವರನ್ನು ತೊರೆದು ದಿಲ್ಲಿಯಲ್ಲಿ ನೆಲೆಸಿದ್ದರೆಂದು ಕೇಳಿದ್ದೆ. ೧೩ನೇ ಜುಲೈ ೧೯೯೩ರಂದು ೬೪ನೆಯ ವಯಸ್ಸಿನಲ್ಲಿ ಶಿಕ್ಯಾಗೋದಲ್ಲಿ ಮರಣಹೊಂದಿದರು. ಕನ್ನಡಕ್ಕೆ ಅಪಾರ ನಷ್ಟವಾಯಿತು.

ಒಟ್ಟಿನಲ್ಲಿ ರಾಮಾನುಜನ್ ಅವರು ಪರಿವರ್ತನಾ-ಉತ್ಪಾದನಾ ವ್ಯಾಕರಣದಲ್ಲಿ ಸಂಶೋಧನ ಕಾರ್ಯವನ್ನು ಪ್ರಾರಂಭಿಸಿದರೂ ಭಾಷಾವಿಜ್ಞಾನದಲ್ಲಿ ಅವರ ಹೆಸರು ಸಾಮಾಜಿಕ ಭಾಷಾವಿಜ್ಞಾನ ಮತ್ತು ಜಾನಪದ ಸಾಹಿತ್ಯದಲ್ಲಿ ಹೆಚ್ಚು ಪ್ರಸಿದ್ಧವಾಗಿದೆ. ಅವರಿಗೆ ೧೯೭೬ರಲ್ಲಿ ಪದ್ಮಶ್ರೀ ಪ್ರಶಸ್ತಿಯೂ ೮೩ರಲ್ಲಿ ಮೆಕಾರ್ಥರ್ ಬಹುಮಾನಗಳೂ ಬಂದಿದ್ದವು. ಅವರು ಕನ್ನಡದಲ್ಲಿ ಮತ್ತು ಕನ್ನಡದ ಬಗ್ಗೆ ಸಾಕಷ್ಟು ಕೆಲಸ ಮಾಡಿದ್ದರೂ ತಮಿಳು ಪಂಡಿತರಲ್ಲಿ ಅವರ ಹೆಸರು ಹೆಚ್ಚು ಕೇಳಿ ಬರುತ್ತದೆ. ಅವರ ಸೃಜನಾತ್ಮಕ ಸಾಹಿತ್ಯವನ್ನು ಕುರಿತೂ ಚಿಂತನೆ ಆಗಬೇಕಾದುದು ಅಗತ್ಯವಿದೆ.

೭೧೬, ೧೬ನೇ ಮುಖ್ಯರಸ್ತೆ, ಸರಸ್ವತೀಪುರ, ಮೈಸೂರು ೫೭೦ ೦೦೯

❑

೬

ವೀಣಾ ಶಾಂತೇಶ್ವರ – ಹೊಸತನದ ಪ್ರತಿಭೆ

ಎಸ್.ವಿ. ಪ್ರಭಾವತಿ

ಒಂದು ಸಾವಿರ ವರ್ಷಗಳ ಇತಿಹಾಸದಲ್ಲಿ ಅಕ್ಕ ಮತ್ತು ಹೊನ್ನಮ್ಮನನ್ನು ಹೊರತು ಪಡಿಸಿದರೆ ಕನ್ನಡ ಸಾಹಿತ್ಯದ ವಿಶಿಷ್ಟ ಮಹಿಳಾ ಪ್ರತಿಭೆಗಳನ್ನು ಕಾಣಲು ನಾವು ಹೊಸಗನ್ನಡ ಸಾಹಿತ್ಯಕ್ಕೇ ಬರಬೇಕು. ನವೋದಯ ಸಾಹಿತ್ಯದ ಲೇಖಕಿಯರಾದ ನಂಜನಗೂಡು ತಿರುಮಲಾಂಬಾ ಅವರಿಂದ ಪ್ರಾರಂಭವಾದ ಹೊಸಗಾಳಿ ತಿರುಮಲೆರಾಜಮ್ಮ, ಕಲ್ಯಾಣಮ್ಮ, ಹೆಚ್.ವಿ. ಸಾವಿತ್ರಮ್ಮ, ಕೊಡಗಿನ ಗೌರಮ್ಮ, ಮೂಕಾಂಬಿಕಮ್ಮ, ಸೀತಾದೇವಿ ಪಡುಕೋಣೆ, ಶ್ಯಾಮಲಾದೇವಿ ಬೆಳಗಾವಕರ್, ಹೆಚ್.ಎಸ್. ಕಾತ್ಯಾಯಿನಿ–ಹೀಗೆ ಕುಡಿವರಿದರೂ, ಅಪ್ಪಟ ಹೊಸತನಕ್ಕೆ "ನವ್ಯ"ದವರೆಗೂ ಕಾಯಬೇಕಾಯಿತು. ಏಕೆಂದರೆ ಹೊಸ ಗಾಳಿಗೆ ತುಡಿಯುತ್ತಿದ್ದ ನವೋದಯದ ಈ ಲೇಖಕಿಯರು ಅತ್ತ ಸಂಪ್ರದಾಯವನ್ನೂ ಬಿಡಲಾರದೆ ಇತ್ತ ಪ್ರಗತಿಗೆ ಬೆನ್ನು ತೋರಿಸಲೂ ಆಗದೇ ದಂದ್ವ ಮನೋಭಾವದಿಂದ ನರಳಿರುವುದನ್ನು ಅವರ ಸಾಹಿತ್ಯ ಕುರಿತ ಪ್ರತ್ಯೇಕ ಅಧ್ಯಯನಗಳಿಂದ ಸಮೀಕ್ಷಿಸಲಾಗಿದೆ.೧

ಒಂದೇ ಒಂದು ಉದಾಹರಣೆ ಕೊಡಬಹುದಾದರೆ ರಾಜಾರಾಂ ಮೋಹನರಾಯ್ ಪ್ರತಿಪಾದಿಸಿದ ಪ್ರಗತಿಪರ ಧೋರಣೆಗೆ ಸ್ಪಂದಿಸಿದ ಬ್ರಿಟಿಷ್ ಸರ್ಕಾರವು ಬಾಲ್ಯ ವಿವಾಹವನ್ನೂ ಸತೀ ಪದ್ಧತಿಯನ್ನೂ ನಿಷೇಧಿಸುವುದರೊಂದಿಗೆ ವಿಧವಾ ವಿವಾಹವನ್ನು ಪ್ರೋತ್ಸಾಹಿಸಿತು. ಈ ಸುಧಾರಣೆಯ ಅರಿವಿದ್ದ ಈ ಲೇಖಕಿಯರು ವಿಧವಾವಿವಾಹವನ್ನು ವಸ್ತುವಾಗಿ ಎತ್ತಿಕೊಂಡರೂ ಸಕಾರಾತ್ಮಕ ಪರಿಣಾಮ ಮೂಡಿಸುವಲ್ಲಿ ಸೋಲುತ್ತಾರೆ. 'ನಭಾ' ಎಂಬ ತಮ್ಮ ಕಾದಂಬರಿಯಲ್ಲಿ ವಿಧವೆಗೆ ಮದು ವಿವಾಹ ಬೇಕೆಂದು ಉದ್ದಕ್ಕೂ ಪ್ರತಿಪಾದಿಸುವ ತಿರುಮಲಾಂಬಾ ಕೊನೆಗೆ 'ಬೇಡ' ಎಂದು ಬಿಡುತ್ತಾರೆ. ಇದೇ ವಸ್ತುವನ್ನು ಕೈಗೆತ್ತಿಕೊಳ್ಳುವ ಕಲ್ಯಾಣಮ್ಮ ತಮ್ಮ 'ನಿರ್ಭಾಗ್ಯ ವನಿತೆ' ಎಂಬ ಕತೆಯಲ್ಲಿ ವಿಧವೆಗೆ ಮರುವಿವಾಹ ಮಾಡಿಸಿಬಿಡುತ್ತಾರೆ. ಅಂದರೆ ಅದಕ್ಕೆ ಮೊದಲೊಮ್ಮೆ ಅಂದಿನ ಸುಧಾರಣಾವಾದಿಗಳೊಂದಿಗೆ ಕಥಾನಾಯಕನ ಚರ್ಚೆಯನ್ನೇರ್ಪಡಿಸುತ್ತಾರೆ. ನಂತರದ ತಲೆಮಾರಿನಲ್ಲಿ ಬರುವ ತ್ರಿವೇಣಿ ಮತ್ತು ಉಷಾನವರತ್ನರಾಂ ಕೂಡಾ ವಿಧವಾ ವಿವಾಹವನ್ನು ಸುಲಲಿತವಾಗಿ ಆಗಗೊಡಿಸುವುದಿಲ್ಲ. ಅವರ "ದೂರದಬೆಟ್ಟ" ಮತ್ತು "ಆಂದೋಲನ", "ಆಶ್ವಾಸನ"ಗಳಿಗಿಂತ "ಫಣಿಯಮ್ಮ"ನಲ್ಲಿ ಎಂ.ಕೆ. ಇಂದಿರಾ ತರುವ ದಾಕ್ಷಾಯಣಿಯ ಪಾತ್ರ ಹೆಚ್ಚು ಪ್ರಗತಿಪರವಾಗಿದೆ.

ಹೀಗೆ ತಲೆಮಾರಿನಿಂದ ತಲೆಮಾರಿಗೆ ದಶಕದಿಂದ ದಶಕಕ್ಕೆ ಪ್ರಗತಿಪರತೆಯ ಕಡೆಗೆ ಹೆಜ್ಜೆ ಹಾಕುತ್ತಾ ಬಂದ ಈ ಧೋರಣೆಯು 'ನವೋದಯ'ವನ್ನು ತಿರಸ್ಕರಿಸುತ್ತಾ ಬಂದ 'ನವ್ಯ'ದ ವೇಳೆಗೆ ಒಮ್ಮೆಲೇ ಸ್ಫೋಟಗೊಂಡಿದ್ದು ವೀಣಾ ಎಲಬುರ್ಗಿ ಅವರ "ಮುಳ್ಳುಗಳು" ಕತೆಯಲ್ಲಿ. "ಸಂಕ್ರಮಣ"ದಲ್ಲಿ ಪ್ರಕಟವಾದ ಈ ಕತೆಯು ತನ್ನ ಹೊಸತನದಿಂದಾಗಿಯೇ ಎಲ್ಲರ ಗಮನ ಸೆಳೆದು ಕನ್ನಡ ಕಥಾಲೋಕದಲ್ಲೊಂದು ಛಾಪು ಮೂಡಿಸಿತು. "ನವೋದಯದ"ದಲ್ಲಿ ಕಥೆ, ಕಾವ್ಯಗಳಿಗೆ ಸೀಮಿತಗೊಂಡಿದ್ದ ಕನ್ನಡ ಸಾಹಿತ್ಯ 'ನವ್ಯ'ದಲ್ಲಿ ನಾಟಕಕ್ಕೂ ಕೈ ಚಾಚಿತು. ಅದು ಭಾಷೆಗೆ ನೀಡಿದ ಕಾಯಕಲ್ಪ ಚಿಕಿತ್ಸೆ, ಛಂದಸ್ಸು ಲಯಗಳನ್ನು ನಿರಾಕರಿಸಿದ ರೀತಿ, ಸಮಾಜವನ್ನು ದೂರಸರಿಸಿದ ವ್ಯಕ್ತಿ ಕೇಂದ್ರಿತ ಪ್ರಜ್ಞೆ ಮತ್ತು ವಿಕ್ಷಿಪ್ತತೆ–ಇವು ಸುಮಾರು ಎರಡು ದಶಕಗಳ ಕಾಲ ಕನ್ನಡ ಸಾಹಿತ್ಯವನ್ನು ಆಳಿದ್ದು ಮತ್ತು ಅಭಿವ್ಯಕ್ತಿಯನ್ನು ಅಭಿರುಚಿಯನ್ನು ರೂಪಿಸಿದ್ದು ಸುಳ್ಳಲ್ಲ. ದಲಿತ–ಬಂಡಾಯ ಚಳವಳಿ ಪ್ರಾರಂಭವಾಗಿ 'ನವ್ಯ'ದ ಕಾಲ ಮುಗಿದರೂ ಅದು ಮೂಡಿಸಿದ ಅಂತಸ್ಸತ್ವ, ರೂಪಿಸಿದ ಲೇಖಕ ವರ್ಗದ ಸಾಲು, ಕನ್ನಡ ಸಾಹಿತ್ಯದಲ್ಲಿ ಹಾಸು ಹೊಕ್ಕಾಗಿ ಇಂದಿಗೂ ನವ್ಯ ಪ್ರಜ್ಞೆಯಾಗಿ ಉಳಿದಿದೆ. ಲೇಖಕಿಯಾಗಿ ಈ ಪ್ರಜ್ಞೆಯ ಅತ್ಯುತ್ತಮ ಪ್ರತಿನಿಧಿಯಾಗಿ ವೀಣಾ ಕಾಣಿಸುತ್ತಾರೆ. 'ನವ್ಯ'ದ ಬಗ್ಗೆ ಮಾತನಾಡುವಾಗ ವೀಣಾ ಮತ್ತು ರಾಜಲಕ್ಷ್ಮಿ ಎನ್.ರಾವ್ ಇವರಿಬ್ಬರ ಹೆಸರು ಹೇಳದೇ ಹೋದರೆ ತಪ್ಪಾಗಿ ಬಿಡುತ್ತದೇನೋ ಎಂಬ ಭಯವನ್ನು ಉಂಟು ಮಾಡುವಂತಹ ಒಂದು ಪರಿಸ್ಥಿತಿ ವಿಮರ್ಶಕರಲ್ಲಿ ಉಂಟಾಯಿತು ಎಂದು ಡಾ. ವಿಜಯಾ ಹೇಳುವುದು ಈ ಅರ್ಥದಲ್ಲಿಯೇ....

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕಿಯಾಗಿ, ಪ್ರಾಂಶುಪಾಲರಾಗಿ ನಿವೃತ್ತರಾದ ವೀಣಾ ಶಾಂತೇಶ್ವರ ಅವರು "ಮುಳ್ಳುಗಳು", "ಕೊನೆಯ ದಾರಿ", "ಕವಲು", "ಹಸಿವು", "ಬಿಡುಗಡೆ" ಎಂಬ ಐದು ಕಥಾ ಸಂಕಲನಗಳ ಮೂಲಕ ಇಡೀ ಕರ್ನಾಟಕದಲ್ಲಿ ಹೆಸರಾದ ವೀಣಾ ಅವರ ಮೊದಲ ಒಲವು ಸಣ್ಣ ಕತೆಯೇ. ಹೀಗಾಗಿ, "ಮಹಿಳೆಯರ ಸಣ್ಣಕತೆಗಳು", "ಮಹಿಳಾ ಅಧ್ಯಯನ", "ಸ್ವಾತಂತ್ರ್ಯೋತ್ತರ ಕಾಲದಲ್ಲಿ ಲೇಖಕಿಯರ ಸಣ್ಣ ಕತೆಗಳು" ಎಂಬ ಪ್ರಾತಿನಿಧಿಕ ಸಂಕಲನಗಳನ್ನು ಅವರು ಸಂಪಾದಿಸಿದ್ದಾರೆ. ಅವರ ಎಲ್ಲ ಕತೆಗಳ ಕೇಂದ್ರ ವಸ್ತು ಮಹಿಳೆ ಮತ್ತು ಅವಳ ಶೋಷಣೆ. ಆದ್ದರಿಂದ ಅವರ ಇತರ ಕೃತಿಗಳಲ್ಲಿ "ಮಹಿಳಾ ಸಾಹಿತ್ಯದಲ್ಲಿ ವೈಚಾರಿಕತೆ", "ಕನ್ನಡ ಸಣ್ಣ ಕತೆಗೆ ಮಹಿಳೆಯರ ಕೊಡುಗೆ", "ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆ", "ಲೇಖಕಿಯ ಸಮಸ್ಯೆಗಳು", "ಕನ್ನಡ ಲೇಖಕಿಯರ ಸಾಧನೆ-ಸಾಧ್ಯತೆಗಳು", "ಮಹಿಳಾ ಜಾಗೃತಿ", "ಮಹಿಳೆಯರು ಮತ್ತು ಪೋಲಿಸರು" ಮತ್ತು "ಮಹಿಳಾ ಸಾಮಾಜಿಕ ಕಾರ್ಯಕರ್ತೆಯರು"-ಇವು ಸೇರುತ್ತವೆ. ಇವಲ್ಲದೇ ಅವರು "ಅಭಿವ್ಯಕ್ತಿ", "ಹೊಸ ಹೆಜ್ಜೆ" ಎಂಬ ಪುಸ್ತಕಗಳನ್ನೂ ಸಂಪಾದಿಸಿ, ಆಕಾಶವಾಣಿಗಾಗಿ ಹದಿನೈದು ನಾಟಕಗಳನ್ನೂ ಬರೆದಿದ್ದಾರೆ. "ಅದೃಷ್ಟ" ಎಂಬ ಹೆಸರಿನಲ್ಲಿ ಅಮೆರಿಕನ್ ಇಂಗ್ಲಿಷ್ ಕತೆಗಳನ್ನೂ, 'ನದೀ ದ್ವೀಪಗಳು' ಎಂಬ ಹೆಸರಿನಲ್ಲಿ ಅಜ್ಞೇಯರ ಹಿಂದೀ ಗ್ರಂಥವನ್ನೂ ಅನುವಾದಿಸಿದ್ದಾರೆ.

ತಮ್ಮ 'ಗಂಡಸರು' ಕಾದಂಬರಿಗೆ ಪ್ರಜಾವಾಣಿ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ವೀಣಾ ಅನಂತರ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡಮಿಯ ಅನುವಾದ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡಮಿ ಗೌರವ ಪ್ರಶಸ್ತಿ, ಅನುಪಮಾ ಪ್ರಶಸ್ತಿ, ಸದೋದಿತಾ ಪ್ರಶಸ್ತಿ, ಮಲ್ಲಿಕಾ ಪ್ರಶಸ್ತಿ ಪಡೆದಿದ್ದಾರೆ.

ಇವರ ಪ್ರಾರಂಭದ ಎಲ್ಲ ಕತೆಗಳಿಂದ ಹಿಡಿದು 'ಬಿಡುಗಡೆ' ಕತೆಯವರೆಗೂ, ಎಲ್ಲ ಕತೆಗಳಲ್ಲೂ ಒಬ್ಬ ಸ್ಥಾಯಿ ಕಥಾನಾಯಕನಿರುತ್ತಾನೆ. ಅವನು ನಾಯಕಿಯ ಎಲ್ಲ ಭಾವನೆಗಳಿಗೂ ಸ್ಪಂದಿಸಲು ಅಸಮರ್ಥನಾದವನು. ಪರಿಪೂರ್ಣನಲ್ಲದವನು. ಹೀಗಾಗಿ ಅವನಿಂದ ಭ್ರಮನಿರಸನ ಹೊಂದಿದ ನಾಯಕಿ ಬದುಕಿನಲ್ಲಿ ಬೇರೊಂದು ತಿರುವನ್ನು ಆಯ್ದುಕೊಳ್ಳುತ್ತಾಳೆ. ಅಲ್ಲೂ ಅವಳು ಸುಖವನ್ನೇ ಕಾಣುತ್ತಾಳೆ ಎಂದೇನೂ ಅಲ್ಲ. ಆ ಕಾಲಕ್ಕೆ, ನವ್ಯದ ಪ್ರಾರಂಭದ ಕಾಲಕ್ಕೆ, ನವೋದಯದ ಸುಖೀ ಕೌಟುಂಬಿಕ ಬದುಕಿನ ಕನಸುಗಳಿಗೆ ವಿರುದ್ಧವಾಗಿ ವಿವಾಹೇತರ ಸಂಬಂಧಗಳು, ವಿವಾಹ ಪೂರ್ವ ಸಂಬಂಧಗಳು, ಮದುವೆಯಿಲ್ಲದೇ ಮಗುವನ್ನು ಪಡೆಯುವ 'ಕೊನೆಯ ದಾರಿ' ಕತೆಯ ನಾಯಕಿಯ ನಿರ್ಧಾರ ಇವು ರೋಚಕವಾಗಿ ಕಂಡವು. [ನಾವು ಎಂ.ಎ. ತರಗತಿಯಲ್ಲಿದ್ದಾಗ ಇವರ ಇಂತಹ ಕತೆಗಳನ್ನು ಓದಿ, ನಮ್ಮನ್ನೇ ನಾಯಕಿಯ ಸ್ಥಾನದಲ್ಲಿ ಕಲ್ಪಿಸಿಕೊಂಡು ಸಂಭ್ರಮಿಸಿದ್ದೂ ಉಂಟು] ಪ್ರಾರಂಭದ ಅನೇಕ ಕತೆಗಳನ್ನು ಈ ಜಾಡಿನಲ್ಲೇ ಬರೆದ ವೀಣಾ 'ನವ್ಯ'ದ ಕಾಲ ಮುಗಿದ ನಂತರವೂ ನವ್ಯದ ಆಶಯವನ್ನು ಒಳಗಿಟ್ಟುಕೊಂಡ ನವ್ಯೋತ್ತರ ಪಂಥದ ಕತೆಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ ತುಂಬಾ ಮುಖ್ಯವಾದ ಎರಡನ್ನು ಇಲ್ಲಿ ಪ್ರಸ್ತಾಪಿಸಬಹುದೆಂದು ತೋರುತ್ತದೆ. 'ಬಿಡುಗಡೆ' ಕತೆಯ ನಾಯಕಿಯ ಗಂಡ ಸತ್ತಿದ್ದಾನೆ. ಅದಕ್ಕಾಗಿ ಅವಳು ದುಃಖಿಸುತ್ತಿದ್ದಾಳೆಂದು ಮನೆಯವರೆಲ್ಲಾ ಭಾವಿಸಿದ್ದಾರೆ. ಆದರೆ ಅವನು ತನ್ನ ಒಂದೊಂದೇ ಕನಸುಗಳನ್ನು ಕೊಂದುದನ್ನು ಅವಳು ಎಳೆ ಎಳೆಯಾಗಿ ನೆನೆಯುತ್ತಿದ್ದಾಳೆ. ಅವನು ಸತ್ತುದರಿಂದ ತನ್ನ ಬದುಕಿಗೆ ಬಿಡುಗಡೆ ಸಿಕ್ಕಿತೆಂದು ಅವಳು ಭಾವಿಸುತ್ತಾಳೆ. ಸಾಂಪ್ರದಾಯಕ ಕುಟುಂಬ ವ್ಯವಸ್ಥೆಯ ಒಳಗಡೆ ಗಂಡ, ಮುತ್ತೈದೆತನ, ಅರಿಶಿನ ಕುಂಕುಮ-ಇವುಗಳಿಗಿರುವ ಸ್ಥಾನದ ಹಿನ್ನೆಲೆಯಲ್ಲಿ ವೀಣಾ ಅವರ ಈ ಕತೆ ತುಂಬಾ ಮುಖ್ಯವಾಗಿ ವಿವಾಹಿತ ಮಹಿಳೆಯರ ಅನಾವರಣವನ್ನು ಕಲಾತ್ಮಕವಾಗಿ ಮಾಡುತ್ತದೆ. ಈ ಆಶಯಕ್ಕೆ ತೀರಾ ವ್ಯತಿರಿಕ್ತವಾದ 'ಕನಸುಗಳು ಒಡೆಯುತ್ತವೆ' ಕತೆಯಲ್ಲಿ ಒಡೆಯವ ಮನೆಯಲ್ಲಿ ಕೆಲಸಕ್ಕಿದ್ದ ಹುಡುಗಿ ಕಸಗುಡಿಸುವಾಗ ಬಟ್ಟೆ ಒಗೆಯುವಾಗ ಅವನ ಮೋಹದ ಬಲೆಯಲ್ಲಿ ಬಿದ್ದು ಅವನನ್ನು ಗಾಢವಾಗಿ ಪ್ರೀತಿಸುತ್ತಾಳೆ. ಅವನಿಗೆ ಮದುವೆಯಾಗಿ ಮಕ್ಕಳಾಗಿ, ಮೊಮ್ಮಕ್ಕಳಾಗಿ ಅವನು ಸತ್ತಾಗಲೂ ಇವಳ ಮೋಹ ಅಳಿಯುವುದಿಲ್ಲ. ಅವನ ಹಳೆಯ ಬಟ್ಟೆಯನ್ನು ಎದೆಗಪ್ಪಿಕೊಂಡು ಅವನ ಗೋರಿಯ ಬಳಿ ಅಳುತ್ತಾ ಕುಳಿತ ಹಣ್ಣು ಮುದುಕಿಯ ಚಿತ್ರದೊಂದಿಗೆ ಕತೆ ಮುಗಿಯುತ್ತದೆ.

ನಗರ ಕೇಂದ್ರಿತ ವಿವರಗಳಿಗೆ ಕಟ್ಟು ಬಿದ್ದ ವೀಣಾ ಅವರ ಕತೆಗಳಲ್ಲಿ ಗ್ರಾಮೀಣ ಬದುಕಿನ ಸೂಕ್ಷ್ಮ ಎಳೆಗಳು ಇಲ್ಲವಾಗುತ್ತವೆ. ಹಾಗಾಗಿಯೇ ಬದುಕಿನ ಎಲ್ಲ ಮುಖಗಳ ಸಂಕೀರ್ಣತೆ ಮಾಯವಾಗಿ ಬರೀ ಕಪ್ಪು ಬಿಳುಪಿನ ಪಾತ್ರಗಳನ್ನು ಅವರು ಚಿತ್ರಿಸುತ್ತಾರೆ. ಇವರ ಎಲ್ಲ ನಾಯಕರೂ ಕೆಟ್ಟವರೇ ಆಗಿ ವಿಜೃಂಭಿಸುವುದರ ಮೂಲಕ ಸ್ತ್ರೀವಾದದ ಒಂದು ಅತಿರೇಕವಾದ ಪುರುಷದ್ವೇಷ ಅವರ ಕತೆಗಳಲ್ಲಿ ಎದ್ದು ತೋರುತ್ತದೆ. ಈ ಹಿನ್ನೆಲೆಯಲ್ಲಿ ಸ್ತ್ರೀವಾದದ ಅಬ್ಬರದ ಚೊಕಟ್ಟಿಲ್ಲದೆಯೇ ಸ್ತ್ರೀ ಸಂವೇದನೆಯನ್ನು ನವಿರಾಗಿ ಕಲಾತ್ಮಕವಾಗಿ ಮೈಗೂಡಿಸಿಕೊಂಡ ನೇಮಿಚಂದ್ರ, ನಾಗವೇಣಿ ಮತ್ತು ವೈದೇಹಿಯವರ ಕತೆಗಳು ಪರಿಪೂರ್ಣತೆಯ ಅಂಚನ್ನು ಮುಟ್ಟುತ್ತವೆ. ವಿವಾಹೇತರ ಸಂಬಂಧವನ್ನೇ ಚಿತ್ರಿಸುವ ನೇಮಿಚಂದ್ರ ಅವರ "ಕಳೆಯ ಬೇಕಿದೆ ನಿಮ್ಮೊಂದಿಗೆ ಒಂದು ಶ್ಯಾಮಲ ಸಂಜೆ" ಮತ್ತು ನಾಗವೇಣಿಯವರ "ಗಾಳ" ಕತೆಗಳು ರೋಚಕತೆಗೆ ಬದಲಾಗಿ ಅನುಕಂಪ ಮೂಡಿಸುವಲ್ಲಿ ಗೆಲ್ಲುತ್ತವೆ. ವೈದೇಹಿಯವರ ಎಲ್ಲ ಕತೆಗಳು ಈ ಸಾಲಿಗೆ ಸೇರುತ್ತವೆ. ಇತ್ತೀಚೆಗೆ ಬರೆಯುತ್ತಿರುವ ಮಿತ್ರಾ ವೆಂಕಟ್‌ರಾಜ್, ತುಳಸೀ ವೇಣುಗೋಪಾಲ್ ಮತ್ತು ಗಂಗಾಪಾದೇಕಲ್ ಕೂಡ ಕಪ್ಪು ಬಿಳುಪಿನ ಚಿತ್ರ ಕೊಡುವುದರಿಂದ ಪಾರಾಗುತ್ತಾರೆ. ಮೊದಲು ಹೀಗೆ ಬರೆಯುತ್ತಿದ್ದ ತ್ರಿವೇಣಿ ನೆನಪಾಗುತ್ತಾರೆ ಮತ್ತು ಲೇಖಕರು ನಿರ್ಮಿಸಿದ ಪಾತ್ರಗಳೂ ಅನೇಕ ವೇಳೆ ಈ ದೋಷಕ್ಕೆ ಸಿಲುಕುತ್ತವೆ.

ಆದರೂ ನವೋದಯದ ಹುಸಿ ಗಾಂಭೀರ್ಯ ಮತ್ತು ಆದರ್ಶದ ಭ್ರಮೆಗಳನ್ನು ಮುರಿದದ್ದು ಮತ್ತು ಸ್ತ್ರೀವಾದ ಎಂಬ ಪದವು ಕನ್ನಡ ಸಾಹಿತ್ಯವನ್ನು ಪ್ರವೇಶಿಸದೇ ಇದ್ದ ಕಾಲದಲ್ಲಿ ತೀವ್ರ ಸ್ತ್ರೀ ಸಂವೇದನೆಯನ್ನು ಕತೆಗಳ ಮೂಲಕ ಪ್ರತಿಪಾದಿಸಿದ್ದು ವೀಣಾ ಅವರ ಸಾಧನೆಯಾಗಿದ್ದು, ಕನ್ನಡ ಕಥಾ ಸಾಹಿತ್ಯದಲ್ಲಿ ಅವರಿಗೊಂದು ದೊಡ್ಡ ಸ್ಥಾನವಿದೆ.

ಪ್ರಾಸಂಗಿಕವಾಗಿ ರಾಜಲಕ್ಷ್ಮಿ ಎನ್. ರಾವ್ ಅವರ ಹೆಸರನ್ನು ಇಲ್ಲಿ ಪ್ರಸ್ತಾಪಿಸಬಹುದೆಂದು ನನಗೆ ತೋರುತ್ತದೆ. ಆವೇ ಮರಿಯಾ ಎಂಬ ಕತೆಯಿಂದ ಪ್ರಸಿದ್ಧಿಗೆ ಬಂದ ಇವರೂ ವೀಣಾ ಅವರಂತೆ ನವ್ಯದ ಮೂಲದಿಂದ ಬಂದವರೆ. ಬಿ.ಎಂ.ಶ್ರೀಕಂಠಯ್ಯನವರ ಮೊಮ್ಮಗಳು ಇವರು ಎಂಬ ಅಂಶ ಇವರ ಪಾಲಿಗೆ ಹೆಮ್ಮೆಯ ವಿಷಯವಾಗದೇ ಅದೇ ಒಂದು ವ್ಯಸನವಾಗಿ ಅವರು ಮನೆಯನ್ನೇ ಬಿಟ್ಟು ಸನ್ಯಾಸಿಯಾದುದು ಒಂದು ದುರಂತ. ಇಲ್ಲದಿದ್ದರೆ 'ವೈಶಾಖ ಶುದ್ಧ ಪೂರ್ಣಿಮೆ' 'ವಿಫಲ'ದಂತಹ ಸಿನಿಕ ಕತೆಗಳನ್ನೊಳಗೊಂಡ ಅವರ ಸಂಕಲನ "ಸಂಗಮ" ಅವರಿಗೊಂದು ಉತ್ತಮ ಪ್ರಾರಂಭವಾಗಿ ನವ್ಯ ಕಥಾ ಲೋಕದಲ್ಲಿ ಅವರು ಉತ್ತಮ ಸೇರ್ಪಡೆಯಾಗಬಹುದಿತ್ತು. ಈ ಘಟನೆ ವೀಣಾ ಅವರ ಹೆಸರು ಹೆಚ್ಚು ಪ್ರಚಾರವಾಗಲು ಸಹಾಯಕವೂ ಆಯಿತು.

ಮಾಸ್ತಿಯವರಿಂದ ಪ್ರಾರಂಭವಾದ ಆಧುನಿಕ ಕನ್ನಡ ಸಾಹಿತ್ಯದ ಸಣ್ಣಕತೆಗಳ ಧಾರೆ ನವೋದಯದಿಂದ ಮೊದಲು ಮಾಡಿ ನವ್ಯ, ಪ್ರಗತಿಶೀಲ, ದಲಿತ ಬಂಡಾಯವನ್ನು ದಾಟಿ ನವ್ಯೋತ್ತರ ಮತ್ತು ಸ್ತ್ರೀ ಸಂವೇದನೆ ಮುಸ್ಲಿಂ ಸಂವೇದನೆಗಳನ್ನೂ ಒಳಗೊಳ್ಳುತ್ತಿರುವ ಈ ಸಂದರ್ಭದಲ್ಲಿ ತಮ್ಮ ಚಿಂತನಶೀಲತೆ, ತೀವ್ರ ಸಂವೇದನೆ ಮತ್ತು ಅಭಿವ್ಯಕ್ತಿ ಕ್ರಮದಿಂದಾಗಿ ವೀಣಾ ಶಾಂತೇಶ್ವರ ಅವರು ವಿಮರ್ಶಕರನ್ನೂ ಸಹೃದಯರನ್ನೂ ಹೆಚ್ಚು ಸೆಳೆದ ಕತೆಗಾರ್ತಿ.

ಅನುಬಂಧ

೧. ನಂಜನಗೂಡು ತಿರುಮಲಾಂಬಾ ಕುರಿತು ಡಾ. ವಿಜಯಾದಬ್ಬೆಯವರ "ಹಿತ್ತಿಲಿನಿಂದ ಹೆಜ್ಜೆಗಳು"
೨. ಆರ್ ಕಲ್ಯಾಣಮ್ಮ ಕುರಿತು ಡಾ.'ಸುಮಿತ್ರಾಬಾಯಿ ಅವರ "ಕಲ್ಯಾಣ ಸರಸ್ವತಿ"
೩. ಸಿ.ಎನ್. ಜಯಲಕ್ಷ್ಮಿ ದೇವಿ ಕುರಿತು ಡಾ. ಚಂದ್ರಮತಿ ಸೋಂದಾ ಅವರ "ವ್ಯಕ್ತಿ ಅಭಿವ್ಯಕ್ತಿ"
೪. ಹೆಚ್.ವಿ. ಸಾವಿತ್ರಮ್ಮ ಕುರಿತು-ಡಾ. ಸುಮಿತ್ರಾಬಾಯಿ ಮತ್ತು ಎನ್. ಗಾಯತ್ರಿಯವರ "ವಿಮುಕ್ತಿಯ ಹಾದಿಯಲ್ಲಿ"
೫. ಶ್ಯಾಮಲಾದೇವಿ ಬೆಳಗಾಂವಕರ ಕುರಿತು ಡಾ. ವಿಜಯಾದಬ್ಬೆಯವರ "ಶ್ಯಾಮಲಾ ಸಂಚಯ"
೬. ಮೂಕಾಂಬಿಕಮ್ಮ ಕುರಿತು ಹೆಚ್.ಎಸ್. ಬೀಳಗಿ
೭. ತಿರುಮಲೆ ರಾಜಮ್ಮ ಕುರಿತು ಹೆಚ್.ಎಸ್. ಪಾರ್ವತಿಯವರ "ಭಾರತಿ"
೮. ಬೆಳಗೆರೆ ಜಾನಕಮ್ಮ ಕುರಿತು ನೇಮಿಚಂದ್ರ

೩೦೧, ೩ನೇ ಮಹಡಿ, ಪಲ್ಲವ ಟೆರೆಸ್, ಜಯನಗರ ೬ನೇ ವಿಭಾಗ, ಬೆಂಗಳೂರು ೫೬೦ ೦೮೨ ❑

೭

ಹರಿಹರಪ್ರಿಯರ ಸಾಂಸ್ಕೃತಿಕ ಚಡಪಡಿಕೆಯ ನಿರಂತರತೆ

ಜಿ.ಬಿ. ಹರೀಶ

ಹರಿಹರಪ್ರಿಯರ ಸಾಹಿತ್ಯವನ್ನು ಓದುವುದು ಎರಡು ರೀತಿಯಲ್ಲಿ ಸಾಧ್ಯ : ಒಂದು ಅದು ಬಂದ ಕಾಲಾನುಕ್ರಮಣಿಕೆಯಲ್ಲಿ, ಅದರ ವಿಕಾಸಕ್ರಮ ಗುರುತಿಸುತ್ತಾ ನೋಡುವುದು. ಇನ್ನೊಂದು ಎಲ್ಲವನ್ನು ಓದಿಯೂ ಅವರ ಕೇಂದ್ರ ಆಶಯಗಳನ್ನು ಸ್ಪಷ್ಟಪಡಿಸಿಕೊಂಡು ಅದರೊಡನೆ ಮುಖಾಮುಖಿಯಾಗುವುದು. ಎರಡಕ್ಕೂ ಅದರದರ ಸೌಭಾಗ್ಯಗಳಿವೆ. ನನ್ನದು ಎರಡನೆಯ ದಾರಿ. ಮೊದಲನೆಯದು ಹೆಚ್ಚು ಸಮಗ್ರವಾದರೂ, ತೀವ್ರತೆ ಮಕ್ಕಾದ ದಾರಿಯಾಗಬಹುದೆಂಬ ಆತಂಕ.

ನಾನು ಹರಿಹರಪ್ರಿಯರ ಬಗ್ಗೆ ಮೊದಲು ತಿಳಿದದ್ದು 'ಸುಧಾ' ಪತ್ರಿಕೆಯಲ್ಲಿ ಅವರ ಪುಸ್ತಕಮನೆ (ಆಗ ರಾಜಾಜಿನಗರದಲ್ಲಿತ್ತು) ಕುರಿತು ಓದಿದಾಗ. ಮುಂದೆ ಬಂಡಾಯ ಸಾಹಿತ್ಯದ ವಿಚಾರಗೋಷ್ಠಿಯೊಂದು ಕನ್ನಡ ಭವನದ 'ನಯನ'ದಲ್ಲಿ ನಡೆದಾಗ ಬಂಡಾಯ ಸಾಹಿತ್ಯದ ನಿಜವಾದ ಬದ್ಧತೆಗಳು ಏನಾದವು? ಎಂದು ವೇದಿಕೆಗೆ ಬಂದು ಹಠಾತ್ತನೆ ಪ್ರಶ್ನಿಸಿ, ಗುಡುಗಿನಂತೆ ಮಾತನಾಡಿ ನಿರ್ಗಮಿಸಿದ್ದ ಚಿತ್ರ ನೆನಪಿಗೆ ಬರುತ್ತದೆ. 'ಬಂಡಾಯ ಚಳವಳಿ ಕಾರ್ಯಕ್ರಮ ಅಂದರೆ ಇಷ್ಟೂ ಕಾವು ಇಲ್ಲದಿದ್ದರೆ ಏನು?' ಎಂದ ಡಾ. ಜಿ. ರಾಮಕೃಷ್ಣ ಅದನ್ನು ತಿಳಿಗೊಳಿಸಲು ಯತ್ನಿಸಿದ್ದೂ ನೆನಪಿಗೆ ಬರುತ್ತದೆ. ಪ್ರಶ್ನೆಗೆ ಉತ್ತರಮುಖಿಯಾಗುವ ಚೈತನ್ಯದ ಕಾಲಹೋಗಿ ಪ್ರಶ್ನೆಯನ್ನು ನೇಪಥ್ಯಗೊಳಿಸಿ, ಧಮ್ಮಸ್ಸು ಮಾಡುವ ಯುಗದ ಚಿತ್ರಣ ಕಣ್ಣಿಗೆ ಕಟ್ಟಿಕೊಂಡು ಅಂದು ನಯನದಿಂದ ಹೊರಟಿದ್ದೆ. ನನ್ನ 'ಬೆಳಕಿನಾಟ' ವಿಮರ್ಶಾ ಸಂಕಲನ ಬಂದಾಗ, ಬೇರೆಯವರಿಂದ ಅದರ ಬಗ್ಗೆ ಕೇಳಿ ಆಸಕ್ತಿ ವಹಿಸಿ ಅದನ್ನು ಅವರು ಅರಸಿ ಬಂದಾಗ ನನ್ನ ಹರಿಹರಪ್ರಿಯರ ನಿಜವಾದ ಮೊದಲ ಭೇಟಿಯಾದದ್ದು. ಸಾಹಿತ್ಯ ಮೊದಲು ಸಾಹಿತಿ ನಂತರ ಎಂಬ ನನ್ನ ನಿಲುವಿಗೆ ತಕ್ಕಂತೆ, ಕನ್ನಡದ ಹೇಮಾಹೇಮಿಗಳು (೧೯೮೨) ಕೃತಿಯನ್ನು ಹಾಸನದ ಸರ್ಕಾರಿ ಗ್ರಂಥಾಲಯದಲ್ಲಿ ಓದಿದ್ದ ನನಗೆ ಹರಿಹರಪ್ರಿಯರ ಉಳಿದ ಕೃತಿಗಳ ಪರಿಚಯವಾದದ್ದು ಇತ್ತೀಚೆಗೆ, ೨೦೦೬ರಲ್ಲಿ. ಹಾಗಾಗಿ ಇದು ಹರಿಹರಪ್ರಿಯ ಸಮಗ್ರ ಕೃತಿಗಳ ಸಮಗ್ರ ಅವಲೋಕನವಲ್ಲ. ಹುಟ್ಟು ಬಂಡಾಯ ಮನೋಧರ್ಮದ ಲೇಖಕರ ಅಂತರಂಗದೊಡನೆ ಸಂವಾದ.

ಸಂವಾದ ಎಂದರೆ ನೆನಪಾಗುತ್ತದೆ, ಹರಿಹರಪ್ರಿಯರಲ್ಲಿ ಸಂವಾದದ ನೆಲೆ ಮತ್ತು ವಾಗ್ವಾದದ ನೆಲೆ ಎರಡೂ ಇದೆ. ವಾಗ್ವಾದದಲ್ಲಿ ಭಿನ್ನ ಸಂದರ್ಭದಲ್ಲಿ ಭಿನ್ನ ನೆಲೆಗಳಲ್ಲಿ ನಿಂತು ನೊಡುವ ದೃಷ್ಟಿಯಿದ್ದು ಖಂಡದರ್ಶನ ಸಾಧ್ಯವಾಗುತ್ತದೆ. ತಾತ್ವಿಕವಾಗಿ ನೋಡಿದರೆ ಸಂವಾದದಲ್ಲಿ ಭಿನ್ನ ನೆಲೆ-ಸಂದರ್ಭವನ್ನು ಬೇರೊಂದು ವಿಶಾಲ ಭಿತ್ತಿಯಲ್ಲಿ ಹೆಚ್ಚು ತಾದಾತ್ಮ್ಯದಿಂದ ನೋಡುವುದು ಸಾಧ್ಯವಾಗುತ್ತದೆ. ಆದರೆ ಪ್ರಶ್ನೆಯೆಂದರೆ ನಾವು ಅಖಂಡದರ್ಶನ ಎಂಬುವುದು ಕೂಡ ವಿಶಾಲವಾದ ಮಾನವ ಅನುಭವ ವ್ಯಾಪ್ತಿಯಲ್ಲಿ ಒಂದು ಭಾಗವಷ್ಟೇ. ಆದರೆ ಸಾಹಿತ್ಯ ವಿದ್ಯಾರ್ಥಿ, ಸಂಸ್ಕೃತಿ ಜಿಜ್ಞಾಸುಗಳಿಗೆ ಇಂಥ ಪ್ರಯಾಸದಿಂದ ಲಾಭವಿದೆ. ಉದಾ: ೭೦-೮೦ರ ದಶಕದ ಬಂಡಾಯ – ದಲಿತ ಹೋರಾಟಗಳ ನೆಲೆಯಲ್ಲಿ ಹೋರಾಟ-ಬರೆಹ-ಸಂಘಟನೆ ಮೂರರಲ್ಲೂ ಗುರುತಿಸಿಕೊಂಡ ವ್ಯಕ್ತಿತ್ವವು ಈಗ ಹಿನ್ನೋಟದಲ್ಲಿ ಆ ಚಳವಳಿಗಳ ಏಳುಬೀಳಿನಲ್ಲಿ ಹೇಗೆ ಕಾಣುತ್ತದೆ ಎಂಬ ನೋಟ ಈ ಬಗೆಯ ತಥಾಕಥಿತ (so called) ಅಖಂಡ ದರ್ಶನದಿಂದ ಸಿಗುತ್ತದೆ, ಸಿಗಬಹುದು.

೧೯೯೩ರಲ್ಲಿ ಬಂದ ಹರಿಹರಪ್ರಿಯರ 'ಪರ್ಯಾಯ ಸಂಸ್ಕೃತಿ'ಯ ಈ ಮಾತುಗಳನ್ನು ಗಮನಿಸಿ : "ಸಾಮಾನ್ಯವಾಗಿ ತನ್ನ ಪ್ರಾಚೀನ ಕಾಲವನ್ನೇ ಪುನರ್‌ಸೃಷ್ಟಿಸಲು ಹೊರಡುವುದೇ ಕನ್ನಡದ ಈವರೆಗಿನ ಸಾಧನೆ. ವಿದೇಶದ ಅನ್ಯಜ್ಞಾನ ಶಿಸ್ತಾದ ಮನಶ್ಶಾಸ್ತ್ರದಲ್ಲಿ, ಸೃಷ್ಟಿಶೀಲರೆಲ್ಲಾ ತಮ್ಮತಮ್ಮ ಬಾಲ್ಯಕ್ಕೆ ಮರಳುವುದು, ಬಾಲ್ಯದ ಅನುಭವದ ಆಧಾರದ ಮೇಲೆ ವಸ್ತುಸ್ಥಿತಿಗೆ ಪ್ರತಿಕ್ರಮಿಸುವುದು ಸತ್ಯ". ('ಸ್ವಾತಂತ್ರ್ಯಪೂರ್ವ ಕಥಾಸಾಹಿತ್ಯದಲ್ಲಿ ಜನಪರಸೃಷ್ಟಿ', ಪುಟ ೪೮).

ಕನ್ನಡದ ಬೌದ್ಧಿಕ ಸಂಸ್ಕೃತಿಯ ಮೇಲೆ ಕ್ಷ-ಕಿರಣ ಬೀರುವಂಥ ಪ್ರಖರ ಮಾತುಗಳಿವು. ಕುವೆಂಪು ಅವರು ಎರಡು ಬೃಹತ್ ಕಾದಂಬರಿಗಳ ದ್ರವ್ಯ ಮಲೆನಾಡಿನ ದಟ್ಟ ಬಾಲ್ಯಾನುಭವದ ಭಿತ್ತಿಯಲ್ಲಿ ರೂಪಿತ, ನಿಜ. ಆದರೆ ಅದರಾಚೆಗಿನ ದ್ರವ್ಯ ಮತ್ತೊಂದು ಕಾದಂಬರಿಯಾಗಿ ಮೈದಾಳಲಿಲ್ಲ. ಕಾರಂತರ ಬದುಕು, ಅವರ ಕಾದಂಬರಿ ಸತ್ವಕ್ಕಿಂತ ದೊಡ್ಡದು. ಏಕೆಂದರೆ ವರ್ಷಗಳು ಕಳೆದಂತೆ ಕಾರಂತರು 'ಎಂದಿನಂತೆ ಈ ವರ್ಷವೂ ಒಂದು ಕಾದಂಬರಿ ಬರೆದೆ' ಎಂಬ ಸ್ಥಿತಿಗೆ ಬಂದಿದ್ದರು. ಭೈರಪ್ಪನವರು 'ಧರ್ಮಶ್ರೀ', 'ದೂರಸರಿದರು', 'ಗೃಹಭಂಗ'ದಲ್ಲಿರುವ ಬಾಲ್ಯದ ಅನುಭವ ದ್ರವ್ಯವನ್ನು ಮೀರಿ 'ಸಾಕ್ಷಿ', 'ಅಂಚು', 'ತಂತು' ಬರೆದರೂ ಅವರ ಕಾದಂಬರಿಯ ಆಳ ಮತ್ತು ತಂತ್ರದ ನಡುವಿನ ಬಿರುಕು ಇನ್ನೂ ಹಾಗೇ ಉಳಿದಿದೆ (ಇದು ಪ್ರತ್ಯೇಕ ಲೇಖನದ ವಸ್ತು ಎಂಬ ಅರಿವು ನನಗಿದೆ). ನಮ್ಮಲ್ಲಿ ಹಲವು ರೀತಿಯ ಜನಜಾತಿಗಳಿವೆ, ಅವುಗಳ ಮನೆತನ, ಬಾಲ್ಯ, ಹರೆಯ, ಮುಪ್ಪು, ಕೌಟುಂಬಿಕ-ಸಾಮಾಜಿಕಕ್ಕೆ ಅದರದ್ದೇ ಆದ ಲಯವಿದೆ, ಸಂಸ್ಕಾರವಿದೆ. ಯಾವುದು ಹೆಚ್ಚು? ಯಾವುದು ಕಮ್ಮಿ? ಎಂಬ ಪ್ರಶ್ನೆಯೇ ಬಾಲಿಶ. ಇನ್ನು ಅಥೆಂಟಿಕ್ ಪ್ರಪಂಚಗಳ ಮಾತು (ಯು.ಆರ್. ಅನಂತಮೂರ್ತಿ) ತೀರಾ ಕೃತಕ. ಯಾಕೆಂದರೆ ಒಂದು ಕಡೆ ಆನಂದಕುಮಾರಸ್ವಾಮಿ ಹೇಳುವಂತೆ – ಭಾರತೀಯ ಸಮಾಜ ಬಹುಸ್ತರದ್ದು. ಅದರದರ ಕಲೆ, ತತ್ತ್ವ ವಿಚಾರಗಳ ಮೂಲಕವೇ ಅದರ ಸಂಸ್ಕಾರ ಮಂಡಲ ವಿಸ್ತಾರಗೊಳ್ಳುತ್ತದೆ. ಆದರೆ ದುರ್ದೈವವೆಂದರೆ ಕನ್ನಡ ಸಾಹಿತ್ಯದಲ್ಲಿ ಬಳಸುವ ಭಾಷೆ ಹಲವು ಜನಪದಗಳ ಸಂಸ್ಕಾರವನ್ನು ಹೀರಿಕೊಂಡ ಬಹುಸ್ತರೀಯ ಕನ್ನಡವಾಗದೆ, ಗ್ರಂಥಸ್ಥವಾದ ವಿಮರ್ಶೆ ಮತ್ತು ಈಗಾಗಲೇ ಸ್ಥಾಪಿತ ಓದುಗವಲಯವನ್ನು ತಣಿಸುವ ಕನ್ನಡವಾಗೇ ಉಳಿದಿದೆ. ಹಲವು ಕನ್ನಡಂಗಳು.... ತಲೆಯೆತ್ತಿ ಮಾತನಾಡುವುದು ಸದ್ಯಕ್ಕೆ ದೂರದ ಮಾತೆಂಬುದು ನೋವಿನ ಸಂಗತಿ.

ಹರಿಹರಪ್ರಿಯರು ಹಾಗೆ ಹಲವು ವಿಭಿನ್ನ ಸಂಸ್ಕಾರಗಳ ದಲಿತ ಸಂವೇದನೆ, ಆ ಜಾತಿಯ ಜನ ಸಾಹಿತ್ಯ ಸೃಷ್ಟಿಸಲು ಹೊರಟಾಗ ಅದರ ಭಾಗವಾಗಿ ನಿಂತವರು. ಸ್ವತಃ ಜಾತಿಯಿಂದ ದಲಿತರಲ್ಲದ ಅವರು ಜೀವನದಲ್ಲಿ ಕಂಡುಕೊಂಡ ಸಾಮಾಜಿಕ ಸತ್ಯದ ಮೂಲಕ ಸಾಹಿತ್ಯ, ಸಂಗೀತ, ಚಿತ್ರಕಲೆಗಳ ನೆಲೆಯನ್ನು ಕಂಡುಕೊಂಡವರು. ಕನ್ನಡದ ಅಸಲಿ ದೇಸೀ ವಿದ್ವಾಂಸರಲ್ಲೊಬ್ಬರಾದ ಶಂಕರ ಮೊಕಾಶಿ ಪುಣೇಕರು, ಹರಿಹರಪ್ರಿಯರ 'ಸಾಹಿತ್ಯವು ಜೀವನವು' (೧೯೮೪) ಗ್ರಂಥಕ್ಕೆ ಬರೆದ ಮುನ್ನುಡಿಯಲ್ಲಿ ಮುಕ್ತವಾಗಿ ಅವರ ವಿಮರ್ಶಕ ಶಕ್ತಿಯನ್ನು ಗುರುತಿಸಿದ್ದಾರೆ : "ಡಿಗ್ರಿ ಇಲ್ಲದೆ ಸಾಹಿತ್ಯದಲ್ಲಿ ಪದಾರ್ಪಿಸಿದ ಹರಿಹರಪ್ರಿಯರಿಗೆ ಸ್ವಾಗತಿಸುತ್ತೇನೆ. ಅವರು ಬಾಳಿನ ತಳ ನೀರಿನಲ್ಲೇ ಈಜುತ್ತ ಮೇಲೆ ಬಂದಿದ್ದಾರೆ.... ಸ್ವಾತಂತ್ರ್ಯಪೂರ್ವದ ವ್ಯಕ್ತಿಗೌರವ, ಉತ್ಸಾಹ, ಆದರಗಳನ್ನು ಪುನರುಜ್ಜೀವಿಸುವ ಇಂಥ ವಿಮರ್ಶೆಯನ್ನು ನಾನು ಮೆಚ್ಚುತ್ತೇನೆ. ಯಾವ ನವ್ಯ ವಿಮರ್ಶಕನಿಗೂ ಕಡಿಮೆಯಿಲ್ಲದಷ್ಟು ಕೃತಿಗಳ ಬಗ್ಗೆ ಒಳನೋಟಗಳನ್ನೂ ತಮ್ಮ ಸಾಹಿತ್ಯ ಪ್ರೇಮದ ಮೂಲಕವೇ ಹೊಮ್ಮಿಸಿದ್ದಾರೆ.... ಮೌಖಿಕ ಸಾಹಿತ್ಯರೂಪವಾದ 'ಹರಿಕಥಾ ಕಾಲಕ್ಷೇಪ'ದ ಬಗ್ಗೆ ಬರೆದ ಲೇಖನವಂತೂ ಈ ಸಾಹಿತ್ಯ ರೂಪದ ಹಿನ್ನೆಲೆಯನ್ನೇ ವಿವರಿಸಿದೆ. ಮಕ್ಕಳ ಸಾಹಿತ್ಯ, ನೃತ್ಯ ಕಲಾವಿದ ಕೌಶಿಕರ ಪರಿಚಯ ಇವರ ವಿಸ್ತಾರ ಅಭಿರುಚಿಯ ದ್ಯೋತಕಗಳು." (ಸಾಹಿತ್ಯವು ಜೀವನವು, ೧೯೮೮, ಪುಟ ೧೦-೧೧).

ಇಷ್ಟು ದೀರ್ಘವಾಗಿ ಕೋಟ್ ಮಾಡಲು ಕಾರಣವಿದೆ. ಹರಿಹರಪ್ರಿಯರ ಸಾಹಿತ್ಯಪ್ರೀತಿ, ಸಂಸ್ಕೃತಿ ಚಿಂತನೆ ಗ್ರಂಥಕೇಂದ್ರಿತವಲ್ಲ, ಆರಂಭದಲ್ಲಿ ಬಂಡಾಯ ಚಳವಳಿ ನೆಲೆಯಿಂದ ಹೊರಟರು. ಆ ಚಳವಳಿಯೊಂದಿಗೇ ಅಂತ್ಯಗೊಂಡ ಚಳವಳಿ ಕೇಂದ್ರಿತ ಆಸಕ್ತಿಯಲ್ಲ. ಇಲ್ಲದಿದ್ದರೆ ಅವರಿಗೆ ಏಕಕಾಲಕ್ಕೆ ರಾಳ್ಳಪಳ್ಳಿಯವರ ಸಾಹಿತ್ಯ-ಸಂಗೀತಗಳ ಅನ್ಯಶಿಸ್ತಿನ ಶಿಸ್ತನ್ನು ಗುರುತಿಸುವ ಶಕ್ತಿಯೊಡನೆ, ಮಾಸ್ತಿಯವರ ಕಥಾಸಾಹಿತ್ಯ ಮಾತ್ರವಲ್ಲ ಅವರ ಸಂವೇದನೆಯನ್ನೇ ಪ್ರಶ್ನಿಸುವ ಶಕ್ತಿ ಬರುತ್ತಿರಲಿಲ್ಲ. ನಿರಂತರವಾದ ಸೃಷ್ಟಿಶೀಲ (ಸೃಜನಶೀಲ ತಪ್ಪು ಬಳಕೆ, ಸರ್ಜನಶೀಲ ಉತ್ತಮ ಪ್ರಯೋಗ, ಆದರೆ ರೂಢಿಯು ಎಲ್ಲ ಕ್ಷೇತ್ರದಂತೆ ಭಾಷಾ ನಿಯಮವನ್ನೂ ತನಗೆ ಬೇಕಾದಂತೆ ಪರಿವರ್ತಿಸುತ್ತಿರುತ್ತದೆ) – ಚಡಪಡಿಕೆ, ವ್ಯಕ್ತಿ-ಸಾಮಾಜಿಕ ಸತ್ಯ – ಮತ್ತು ಕಲೆಯ ಮೌಲ್ಯವಂತಿಕೆ ಇವುಗಳ ಮುಪ್ಪರಿಗೊಂಡ ಅಭಿವ್ಯಕ್ತಿ ಅವರ 'ಸಾಹಿತ್ಯವು ಜೀವನವು', 'ಕಾಳಜಿ', 'ಬಂಡಾಯ ಮನೋಧರ್ಮ', 'ಪರ್ಯಾಯ ಸಂಸ್ಕೃತಿ', 'ಪುನರ್‌ಮೌಲ್ಯೀಕರಣ'ಗಳಲ್ಲಿದೆ. ಬಸವಣ್ಣ, ಲೋಹಿಯಾ ಸುತ್ತ ಬೆಳೆದ ಕನ್ನಡ ನಾಡಿನ ಹೊಸಗನ್ನಡ

ಕಾಲದ ಆಸಕ್ತಿಗಳು ಹರಿಹರಪ್ರಿಯರ ಒಂದು ಚಿಂತನಾಬಿಂದು. ಅಂಬೇಡ್ಕರ್ ಮತ್ತು ಕುವೆಂಪು ನೆಲೆಯಲ್ಲಿ ಮೇಲೆ ನಾನು ಪ್ರಸ್ತಾಪಿಸಿದಂತೆ ನಮ್ಮ ನಾಡಿನ ಹಲವು ಮಟ್ಟದ ಜೀವಿತ, ಸಂಸ್ಕಾರಗಳ ಅಭಿವ್ಯಕ್ತಿಗೆ ಇರುವ ಸಾಂಸ್ಕೃತಿಕ ಉಕ್ಕಿನಗೋಡೆಗಳನ್ನು ಎದುರಾಗುವ ದಿಟ್ಟತನ ಮತ್ತೊಂದು ನೆಲೆಯದು. ಒಂದು ಮಾತು, ನಾನು ಹರಿಹರಪ್ರಿಯರ ಮತ್ತು ಆ ತಲೆಮಾರಿನವರ ಕಿರಿಯ ಸಮಕಾಲೀನ. ಅವರು ಕಂಡುಕೊಂಡ ನೋವು, ಹೋರಾಟಗಳ ನೆಲೆಯನ್ನು ಕೇಳಿ, ಓದಿ ಬಲ್ಲ ಸ್ವತಃ ಆ ಮಾರ್ಗದಲ್ಲಿ ಕ್ರಮಿಸಿ ಬಂದವನಲ್ಲ. ನವೋದಯದ ತಲೆಮಾರಿನವರು - ಇವತ್ತು ಹೇಳ ಹೆಸರಿಲ್ಲದವರಾಗಿರುವ ಡೆಪ್ಯುಟಿ ಚೆನ್ನಬಸಪ್ಪ, ಶಾಂತಕವಿ; ಧಾರವಾಡ, ಮಂಗಳೂರು, ಗಡಿಯ ಹೈದ್ರಾಬಾದ್ ಪ್ರಾಂತದಲ್ಲಿ ಕನ್ನಡದಲ್ಲಿ ಬೇಕಾದ ಕೃಷಿಗೆ ಭೂಮಿಯನ್ನು ಉತ್ತು ಹದ ಮಾಡಿದ ಸಾಹಿತ್ಯ ವ್ಯವಸಾಯಿಗಳು ಪಟ್ಟ ಕಷ್ಟಕ್ಕಿಂತ ಡಿ.ಎಸ್.ಎಸ್., ರೈತಸಂಘ, ಜನಪರ ಹಿರಿ-ಕಿರಿ ಸಂಘಟನೆಗಳನ್ನು ಕಟ್ಟಿ ಬೆಳೆಸಿದವರ ಶ್ರಮ ಯಾವುದಕ್ಕೂ ಕಡಿಮೆಯಿಲ್ಲ. ಸಂಸ್ಕೃತಿಯ ಇಂಥ ತಳರಚನೆಯನ್ನು ಕಟ್ಟಿದವರು ತಳಾದಿಯಲ್ಲೇ ನೆಲಸಮವಾಗುವುದು ಕರ್ನಾಟಕ ಸಂಸ್ಕೃತಿಯ ಒಂದು ಮುಖ್ಯ ಲಕ್ಷಣ. ಆದ್ಯವಚನಕಾರ ದೇವರ ದಾಸಿಮಯ್ಯ, 'ಮರಣಮಂಡಲ ಮಧ್ಯದೊಳಗೆ' ಲೇಖಕ ಮುಳ್ಳೂರು ನಾಗರಾಜ, ವಿಮರ್ಶಕ ದಿವಂಗತ ದೇವಯ್ಯ ಹರವೆ... ಕೆಲವು ನೆನಪುಗಳು ಮಾತ್ರ.

ಹರಿಹರಪ್ರಿಯರು ಬಸವಣ್ಣ - ಲೋಹಿಯಾ ನೆಲೆಯ ಚಿಂತನೆಯನ್ನು ಎದುರುಗೊಳ್ಳುವ ಕ್ರಮದಲ್ಲಿ ಸಾಹಿತ್ಯಿಕ ಕ್ರಮಬದ್ಧ ಅಧ್ಯಯನವಿಲ್ಲ. ಬದಲಿಗೆ ವರ್ತಮಾನದ ತುರ್ತಿಗೆ ಸಮಕಾಲೀನ ಗದ್ಯದಲ್ಲಿ ಸ್ಪಷ್ಟವಾದ ದಾರಿ ಕಾಣುವ ಹುಡುಕಾಟವಿದೆ. ಇದು ತಂತ್ರ-ಶಿಲ್ಪ-ಬಂಧಗಳ ಸಾಹಿತ್ಯ ಕೃತಿ ಕೇಂದ್ರಿತ ಶೋಧವಲ್ಲ; ಸಾಮಾಜಿಕ ಅಸಮಾನತೆ ನೀಗಲು ಈ ಜೋಡಿಯಿಂದ ಏನಾದರೂ ಸಾಧ್ಯವೇ? ಎಂಬ ನೆಲೆ. ಹರಿಹರಪ್ರಿಯರ ಮಟ್ಟಿಗೆ ವಚನ ಚಳವಳಿಗಿಂತ ಬಸವಣ್ಣನೇ ಮುಖ್ಯ. ಏಕೆಂದರೆ "ಬಸವಣ್ಣ ಎಂದೂ ಪಲಾಯನವಾದಿಯಲ್ಲ (ಕನಸಿನಲ್ಲಿ ಎಂದರೂ ತಪ್ಪಾಗಲಿಕ್ಕಿಲ್ಲ. ಮರಣವೇ ಮಹಾನವಮಿ ಎಂದವನಲ್ಲವೆ? ....ಆದರೆ ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಇರುವ ಸಂಬಂಧ, ಆ ನೆಲೆಯನ್ನು ಒಳಗೊಳ್ಳುವುದರಿಂದ ಸಮಾಜದ ಮೇಲೆ ಆಗುವ ಪ್ರತಿಕ್ರಿಯೆಯ, ಮುಂದಿನ ನೆಲೆಯ ಚಿಂತನೆ-ಇವೆಲ್ಲವನ್ನೂ ಒಬ್ಬ ಆರ್ಥಿಕ ಅಧಿಕಾರಿಯಾದ ಬಸವಣ್ಣ ಲೆಕ್ಕ ಹಾಕಿರಲಿಲ್ಲವೆ? ಇವಕ್ಕೆ ಅವನದೇ ಆದ ವಚನಗಳಲ್ಲಿ, ಅನಂತರದ ಸಾಹಿತ್ಯ ರಚನೆಗಳಲ್ಲಿ ಯಾವ ಪುರಾವೆ ಕಾಣುತ್ತಿಲ್ಲ ಎಂದ ಮಾತ್ರಕ್ಕೆ, ತಳ್ಳಿಹಾಕಲಾಗುತ್ತದೆಯೆ?" (ಬಸವಣ್ಣ : ಮರುಚಿಂತನೆ, ೨೪-೫).

ಆದರೆ ಸಾಮಾಜಿಕ ಚಳವಳಿಯ ಬೀಜ ಯಾವುದೋ ಕಾಲದಲ್ಲಿ ಹದವಾದ ಮಣ್ಣು, ಮಳೆ ಸಿಕ್ಕಾಗ ಚಿಗುರುತ್ತದೆಯೆಂಬ ಸತ್ಯ ಹರಿಹರಪ್ರಿಯರ ವಿಮರ್ಶೆಯ ವಿವೇಕದಲ್ಲಿ ಸೇರಿದೆ. "ಎಂದೋ ಹುಟ್ಟಿ ಎಂದೋ ನುಡಿದವನ ಕತೆಯಾಗದೆ, ನಮ್ಮೊಳಗೆ ಸಾಯದೆ ಬದುಕಿರುವವನ ಕತೆ, ಈ ಬಸವಣ್ಣ ಎಂಬುವವನ ವ್ಯಥೆ" (ಪುಟ ೧೭). ಬಸವಣ್ಣ, ಕುವೆಂಪು ಒಟ್ಟಾರೆಯಾಗಿ ಕರ್ನಾಟಕದ ೭೦, ೮೦ರ ದಶಕವನ್ನು ಪ್ರಭಾವಿಸಿರುವುದು, ಅದೇ ಕಾಲಕ್ಕೆ ಶಂ.ಬಾ. ಜೋಶಿಯವರ ಸಂಸ್ಕೃತಿ ಚಿಂತನೆಯು ಯಾವ ಕಾಲದ ಸಾಮಾಜಿಕ ಚಳವಳಿಯಿಂದಲೂ ಪ್ರತಿಸ್ಪಂದನೆ ಪಡೆಯದಿರುವುದು ಕಳವಳಕಾರಿ. ('ನಮಸ್ಕಾರ' - ಡಾ॥ ಹೆಚ್.ಎಸ್. ರಾಘವೇಂದ್ರರಾವ್ : ಪ್ರವಾಹ ಪತಿತರ ಕರ್ಮ 'ಹಿಂದೂ' ಎಂಬ ಧರ್ಮ, ೨೦೦೬, ಪುಟ ೧೪೯-೫೦).

ಹರಿಹರಪ್ರಿಯರ ಅಂದಿನ ದಿನಗಳಲ್ಲಿ ಮಾರ್ಕ್ಸ್, ಲೋಹಿಯಾ ಚಿಂತನೆಯತ್ತ ಉಳಿದ ಬಂಡಾಯ ಸಾಹಿತಿಗಳಂತೆ ಹೊರಳಿದ್ದು ಸ್ಪಷ್ಟ. ಲೋಹಿಯಾ ಚಿಂತನೆಗೂ ಮೊದಲು ಕರ್ನಾಟಕವನ್ನು ಪ್ರವೇಶಿಸಿದ ಮಾರ್ಕ್ಸ್ ಚಿಂತನೆಯನ್ನು ಹರಿಹರಪ್ರಿಯ ೧೯೪೩ರ ಕಾಲದ ಪ್ರಗತಿಶೀಲ ಸಾಹಿತಿಗಳ ಮೂಲಕ ಗುರುತಿಸುತ್ತಾರೆ. ಗಮನಿಸಬೇಕಾದ ಅಂಶ ಇಪ್ಪತ್ತನೆಯ ಶತಮಾನದ ಸಾಹಿತ್ಯ ಚರಿತ್ರೆಯಲ್ಲಿ ೧೯೪೦-೬೦ ವಿಮರ್ಶೆಯ ಮೌನದ ಘಟ್ಟ. ಬರೆಹ-ಬದುಕು ಎರಡನ್ನೂ ಏಕತ್ರಗೊಳಿಸಿಕೊಂಡ ಪ್ರಗತಿಶೀಲನನ್ನು ಎಷ್ಟೇ ಬರೆದರೂ ಕನ್ನಡ ವಿಮರ್ಶೆ ನವೋದಯ-ನವ್ಯ-ದಲಿತ ಬಂಡಾಯದ ನೆಲೆಯಲ್ಲಿಯೇ ನಿಲ್ಲಿಸಿ ನೋಡಿಲ್ಲ. ನಾವು ಕೈಬಿಡುತ್ತಲೇ ಬಂದಿರುವ ಮಹಿಳಾ ಸಾಹಿತ್ಯ, ಪ್ರಗತಿಶೀಲ, ಬಲ್ಲಾಳ-ಪುತಿನ-ಚಿತ್ತಾಲ ಇತ್ಯಾದಿ ಅಧ್ಯಾಪಕರಲ್ಲದ ಸಾಹಿತಿಗಳ ರಚನೆ; ಶಂಬಾ, ಸೇಡಿಯಾಪು, ಮುಳಿಯ, ಸೀತಾರಾಂ ಜಹಾಗೀರ್‌ದಾರ್, ಹರಿಹರಪ್ರಿಯ, ಮೊಖಾಶಿ (ವಿದ್ವಾಂಸರು, ಇಂಗ್ಲಿಷ್ ಅಧ್ಯಾಪಕರು; ಆದರೆ ಸಂಗೀತ, ಭಾರತೀಯ ಮರ್ಮ ತಿಳಿದವರು,

ವಿಮರ್ಶೆಗೆ ಅಸ್ಪೃಶ್ಯರು) ಮೊದಲಾದವರನ್ನು ಕುರಿತು ಬರಬಹುದಾದ ವಿಮರ್ಶೆ ಇಂದಿನ ಸ್ಥಾಪಿತ (established) ವಿಮರ್ಶೆಯ ಗುಡ್ಡವನ್ನು ಮೂದಲಿಸಬಹುದಾದ ಕನ್ನಡ ಸಂಸ್ಕೃತಿಯ ಸೃಜನಶೀಲತೆಯ ಎತ್ತರಗಳು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. 'ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್ ಹಿನ್ನೆಲೆಯಲ್ಲಿ ಬಂಡಾಯ ಮನೋಧರ್ಮ' ಲೇಖನ (ಬಂಡಾಯ ಮನೋಧರ್ಮ ಗ್ರಂಥ) ಹಲವು ಪ್ರಶ್ನೆಗಳನ್ನೆತ್ತುವ ಮುಖ್ಯ ಲೇಖನ. ಹರಿಹರಪ್ರಿಯರ ವಿಮರ್ಶೆಯ ಪ್ರಮುಖ ಘಟ್ಟ. ಮೈಸೂರಿನ ದಿವಾನ (ಶೇಷಾದ್ರಿ ಅಯ್ಯರ್)ರುಗಳ ಕಾಲದ ಜಾತಿವ್ಯವಸ್ಥೆಯನ್ನು, ಕನ್ನಡದ ಸಾವಿರ ವರ್ಷದ ಸಾಮಾಜಿಕ ಧೋರಣೆಗಳನ್ನು ಪರಿಶೀಲಿಸುವ ಉತ್ಸಾಹ ಲೇಖನದಲ್ಲಿದೆ. ಸ್ವತಃ ತಾವೇ ಭಾಗವಾಗಿರುವ ಬಂಡಾಯ ಸಂಘಟನೆಯನ್ನು ಬಿಡದೆ ವಿಮರ್ಶಿಸುವ ಶಕ್ತಿ ಅವರಿಗಿದ್ದರೂ ಏಕಕಾಲಕ್ಕೆ ಸಾವಿರ ವರ್ಷದ ಜಿಂಡಾತರ ಮಾಡುವ ವೇಗದ ವಿಮರ್ಶೆ ಅರಗಿಸಿಕೊಳ್ಳಲು ಕಷ್ಟ. ಈ ಮಾತು ಗಮನಿಸಿ :

"ಸದ್ಯದ ಬಂಡಾಯ ಸಂಘಟನೆಯೊಳಗೆ ಇನ್ನೂ ಹೊಗೆಯಾಡುತ್ತಿರುವ ವರ್ಣಭೇದದ ಈ ತರ-ತಮ ಭೇದಕ್ಕೆ ಬೀಜವಾಪನೆ ಕೇವಲ ಶೇಷಾದ್ರಿ ಅಯ್ಯರ್ ಅವರ ಕಾಲದಿಂದಲೇ ಅಲ್ಲದಿರಬಹುದು. ಜೈನರಾಗಿ ಮತಾಂತರಗೊಂಡ ಕವಿ ಪಂಪನ ಕಾಲದಲ್ಲೇ ರೂಪು ತಳೆದು, ಬಸವಣ್ಣನ ಕಾಲಕ್ಕೆ ಆಸ್ಫೋಟಿಸಿ, ಮುಸ್ಲಿಂ ಹಾಗು ಬ್ರಿಟಿಷರ ಕಾಲದಲ್ಲಿ ಪುನರ್ಜನ್ಮ ಪಡೆದು, ನೆಲೆಗೊಳ್ಳುತ್ತಿದ್ದಿರಬೇಕು" (ಪುಟ ೬೬). ಜೈನರ ಸ್ಯಾದ್ವಾದ, ವೇದಾಂತಿಗಳ ಮೂರು-ನಾಕು ಭೇದಗಳು, ವೀರಶೈವದ ಜಂಗಮಪಂಥ, ಸಾಂಸಾರಿಕ ಮಾರ್ಗ, ವೀರಶೈವ ತತ್ವ (?) ಪದನೆಲೆಯ ೧೯ನೇ ಶತಮಾನದ ತತ್ವದ ಹಾಡುಗಳ ಸಂಕೀರ್ಣ ನೆಲೆ ಇವುಗಳ ತಾತ್ವಿಕ ಮುಖಾಮುಖಿಯನ್ನು ಎದುರುಗೊಳ್ಳುವ ಸುವರ್ಣಾವಕಾಶವನ್ನು ಆ ಕಾಲದ ದಲಿತ-ಬಂಡಾಯ ಸಾಹಿತಿಗಳು ಕಳೆದುಕೊಂಡರು ಎನ್ನದೆ ವಿಧಿಯಿಲ್ಲ. ಈ ನಾಡಿನ ಈ ಮಣ್ಣಿನ ಚಿಂತನೆ ಕೊಡದ ಯಾವ ಹೊಸಬೇರನ್ನು ಲೋಹಿಯಾ, ಮಾರ್ಕ್ಸ್‌ಗಳು ಕೊಟ್ಟಾರು? ಜಾಗತಿಕ ಸ್ತರದ, ಅಖಿಲ ಭಾರತೀಯ ಸ್ತರದ ಚಿಂತನೆಗಳು ಹೋರಾಟಕ್ಕೆ ತುರ್ತಿನ ಬೌದ್ಧಿಕ ರಚನೆ ಕೊಟ್ಟಾವು? ಆದರೆ ಬೇರಿನ, ಈ ನಾಡಿನಲ್ಲಿ ದಲಿತ ಸಾಹಿತ್ಯವೂ, ಬಂಡಾಯವೂ ಮುಟ್ಟದ ಸ್ತರಗಳಿಗೆ ಅವು ಹೊಸ ಸ್ಪರ್ಶ ಕೊಡುವುದು ಅನುಮಾನ. ಆದರೆ ನಮ್ಮರಂತೆ ಕೃತಿಗೆ ಅದರ ಸರ್ವತಂತ್ರ ಸ್ವತಂತ್ರತೆಗೆ ಕಟ್ಟುಬೀಳದೆ ಸಾಹಿತ್ಯ, ಸಾಹಿತ್ಯ ವಿಮರ್ಶೆಯ ಬೇರನ್ನು ಭಾರತದವರೇ ಆದ ಗಾಂಧಿ, ಅಂಬೇಡ್ಕರ್, ಲೋಹಿಯಾ, ಜೆ.ಪಿ. ಮೂಲಕ ಕಾಣಲು ಹೊರಟದ್ದು, 'ಕಮೂಬಂದ', 'ಕಾಫ್ಕಾ ಬಂದ' ಧೋರಣೆಗಿಂತ ಹೆಚ್ಚು ನೈಜ. ಕರ್ನಾಟಕದ ಮನೋಧರ್ಮಕ್ಕೆ ಹತ್ತಿರ. ಈ ಮಾತು ಹೇಳುವಾಗಲೂ ಕರ್ನಾಟಕದಲ್ಲಿ ಅವಿಮರ್ಶಿತ ಲೋಹಿಯಾ ಭಕ್ತಿ ಸ್ವಲ್ಪ ಹೆಚ್ಚು ಎನಿಸುತ್ತದೆ.

ಗಾಂಧಿ ವಿಮರ್ಶೆ, ಮಾರ್ಕ್ಸ್ ವಿಮರ್ಶೆ ನಡೆದಷ್ಟು ಲೋಹಿಯಾ ವಿಮರ್ಶೆ ನಡೆದಿಲ್ಲ. ಅದರ ಪ್ರಾಯೋಗಿಕತೆಯ ಪರೀಕ್ಷೆ ಆಗಿಲ್ಲ ಎಂಬ ಕೊರತೆಯನ್ನು ಹರಿಹರಪ್ರಿಯ ಒಂದು ನೆಲೆಯಲ್ಲಿ ಮಾಡಿದ್ದಾರೆ. ಅವರ ಕೆಲವು ಪ್ರಮೇಯಗಳು :

(೧) ಬಂಡಾಯ ಮನೋಧರ್ಮದ ಸಿ.ಆರ್. ರೆಡ್ಡಿಯವರ ಧೋರಣೆ "ತಮ್ಮ ಜನಾಂಗದ ಶ್ರೇಯಸ್ಸು, ಸಂಘಟನೆಗೆ ಸೀಮಿತವಾಯಿತೇನೋ?" (ಪು. ೩೪)

(೨) ಎಸ್. ಅನಂತನಾರಾಯಣ ಅವರು ಮಾರ್ಕ್ಸ್‌ವಾದ - ಎಡಪಂಥ-ಪ್ರಗತಿಶೀಲರ ಬಗ್ಗೆ ಹೇಳುವ 'ಫ್ಯಾಶನ್', 'ರಷ್ಯನ್ನರ ಮೇಲಿನ ಮೆಚ್ಚುಗೆ', 'ಕುತೂಹಲಕ್ಕಾಗಿ', 'ಆ ಗಳಿಗೆಯ ಪ್ರಚಾರಕ್ಕಾಗಿ' ಎಂಬುದನ್ನು 'ವೈಯಕ್ತಿಕ ಮಟ್ಟದಲ್ಲಿ' ನಿಜವಿರಬಹುದು ಎಂದು ಹರಿಹರಪ್ರಿಯ ಡಿಸ್‌ಮಿಸ್ ಮಾಡುತ್ತಾರೆ. ಇಲ್ಲಿ ಸೇರಿಸಬೇಕಾದ ಒಂದು ಮಾತು ಕನ್ನಡದಲ್ಲಿ ನಿರೀಶ್ವರವಾದಿ – ಭೌತಿಕವಾದಿ ನೆಲೆಯ ಚಿಂತನೆಯಲ್ಲಿ ಭಾರತೀಯ ಪರಂಪರೆಯ ಜೊತೆಗೆ ಮಥಿಸಿ ಬಂದ ತೀವ್ರವಾದ ದೃಷ್ಟಿಕೋನವಿರಬಹುದು. ಆದರೆ ಒಂದಿಯಲ್ಲಿ ಇದಕ್ಕೆ ಅಪವಾದವಿದೆ. (ತೆಲುಗಿನಲ್ಲಿ ಇರಬಹುದು, ನನಗೆ ಆ ಸಾಹಿತ್ಯದ ಪರಿಚಯ ಹೆಚ್ಚಾಗಿಲ್ಲ). ರಾಂವಿಲಾಸ ಶರ್ಮರಂಥ ಹಿರಿಯ ಮಾರ್ಕ್ಸ್‌ವಾದಿ ವಿಮರ್ಶಕರು ಮಾರ್ಕ್ಸ್‌ವಾದದ ಎಳೆಹಿಡಿದು ಹೊರಟು ಋಗ್ವೇದದ ಅಧ್ಯಯನವರೆಗೆ ಮುಟ್ಟಬಲ್ಲರು. ಅವರಿಂದ ಕಟುವಿಮರ್ಶೆಗೆ ಒಳಗಾಗಿರುವ ಮತ್ತೊಬ್ಬ ವಿದ್ವಾಂಸ ರಾಹುಲಸಾಂಕೃತಾಯನರು ಹಿಮಾಲಯ - ಗಂಗಾ – ವೋಲ್ಗಾ ಬಯಲಿನ ತನಕ ಸಾಹಿತ್ಯ ವಿಸ್ತರಿಸಬಲ್ಲರು. ಕನ್ನಡದ ಇಡೀ ವೈಚಾರಿಕ ಭೂಮಿಕೆಗೇ ಇನ್ನೂ ಕೂಡ

ಆಳವಾದ ಹಾರ್ಡ್‌ಕೋರ್ ತತ್ವಜ್ಞಾನದ ತಳ ಸಿಕ್ಕೀ ಇಲ್ಲ ಎಂಬುದು ನನ್ನ ವಾದ. ಇದಕ್ಕೆ ಪ್ರೊ. ಎಸ್.ಕೆ. ರಾಮಚಂದ್ರರಾವ್, ಡಾ. ಜಿ. ರಾಮಕೃಷ್ಣ, ಡಾ. ಮೊಕಾಶಿ ಅಪವಾದವಿರಬಹುದು.

(೩) ಪ್ರಗತಿಶೀಲರಿಂದ ನವೋದಯದವರು ಪ್ರಭಾವಿತರಾದರು ಎಂಬುದು ಹರಿಹರಪ್ರಿಯರವಾದ. "ಇವತ್ತಿನ ಬಂಡಾಯ ಸಂಘಟನೆಯ ಕಚ್ಚಾ ಉದ್ದೇಶಗಳು, ಪ್ರಗತಿಶೀಲರ ಪ್ರಯತ್ನ ಹಾಗೂ ಸೋಲಿನ ಬೇಲಿಯ ಮೇಲೆ ಅರಳಿವೆ" (ಪು. ೩೫). ಹರಿಹರಪ್ರಿಯ ಚಿಂತನೆಯ ಮಜಲುಗಳು ಮಾರ್ಕ್ಸ್‌ದಿಂದ ಕನ್ನಡದ ಪ್ರಗತಿಶೀಲ, ಅಲ್ಲಿಂದ ಸಮಾಜವಾದಿ ಲೋಹಿಯಾ ಧಾರೆಯೆಡೆಗೆ ಪಯಣ.

(೪) ಗೋಪಾಲಗೌಡರ ನಿಕಟದಲ್ಲಿದ್ದ ಅನಂತಮೂರ್ತಿ, ಲಂಕೇಶ್, ತೇಜಸ್ವಿ, ನಂಜುಂಡಸ್ವಾಮಿ ಇವರ ರಾಜಕೀಯ ಧೋರಣೆಗಳನ್ನು ಲೋಹಿಯಾವಾದದ ವೈಚಾರಿಕತೆಯ ಚೌಕಟ್ಟಿನಲ್ಲಿ ಪ್ರಶ್ನಿಸುವ ಹರಿಹರಪ್ರಿಯ, ಇವರಲ್ಲಿ ಒಂದು ಬಿರುಕನ್ನು ತೋರಿಸುತ್ತಾರೆ. ಒಂದು ಕಡೆ ಎಡಪಂಥೀಯರಲ್ಲದ, ನವೋದಯ ಮತ್ತು ಪ್ರಗತಿಶೀಲರ ಬಗ್ಗೆ ಒಲವಿಲ್ಲದ ಗೋಪಾಲಕೃಷ್ಣ ಅಡಿಗರ 'ಓಂಬಾಲಕ'ತ್ವ ಮತ್ತೊಂದು ಕಡೆ ಲೋಹಿಯಾ ಸೆಳೆತ, ಇಷ್ಟಾಗಿ "ಲೋಹಿಯಾ ವಾದಕ್ಕೆ ಒಲಿದದ್ದು – ಇವತ್ತಿಗೂ ಬಿಡಿಸಲಾರದ ಸಮಸ್ಯೆಯಾಗಿದೆ". ಹರಿಹರಪ್ರಿಯರು ಎತ್ತುವ ಈ ಪ್ರಶ್ನೆಯನ್ನು ಬೇರೊಂದು ಮಗ್ಗುಲಿನಿಂದ ನೋಡಬಹುದು. ಬೇಂದ್ರೆಯ ಮೇಲೆ ಅರವಿಂದರ ಪ್ರಭಾವವಿದೆ ಎಂಬುದು ಸಾಹಿತ್ಯ ವಿಮರ್ಶೆಯಲ್ಲಿ ಪ್ರಸಿದ್ಧವಾದ ಮಾತು. ಶಂಬಾ, ಮಧುರಚೆನ್ನರ ನಂತರ ಅವರುಗಳ ಮೂಲಕ ಅರವಿಂದರ ತತ್ವ, ಆಶ್ರಮ ಸಂಪರ್ಕಕ್ಕೆ ಬೇಂದ್ರೆ ಬಂದರು. ಅವರ ಎಲ್ಲ ಕವನ ಸಂಗ್ರಹಗಳ ಮೇಲೂ ಅರವಿಂದರ ಪ್ರಭಾವವಿದೆಯೆ? ಸಾವಿರಾರು ಪುಟಗಳ ಗದ್ಯದಲ್ಲೆಲ್ಲಾ ಅದರ ಪ್ರಭಾವವಿರುವುದು ನಿಜವೆ? ನಿಜಕ್ಕೂ ಯಾವುದೇ ಸರ್ಜನಶೀಲರಂತೆ ಬೇಂದ್ರೆ ಅರವಿಂದರನ್ನೂ ಓದಿದ್ದರು ಅಷ್ಟೆ. ಅವರಲ್ಲಿ ಅರವಿಂದ, ಮಕರಂದ ಇಂಥ ಪ್ರಾಸ ಬಹುಳವಾಗಿ ಬರುತ್ತದೆ. ಆದರೆ ಎಂದೂ ಯಾವುದನ್ನೂ ಕ್ರಮವಾಗಿ ಪಟ್ಟುಹಿಡಿದು ಓದಿದ ಬೇಂದ್ರೆಯವರಿಗೆ, (ಇದಕ್ಕೆ ಅವರ ಭೃಂಗಮಾರ್ಗದ ಗದ್ಯವೇ ತಕ್ಕ ಸಾಕ್ಷಿ) ಅವರ ಪ್ರತಿಭೆಯ ಕಿಡಿ ತಾಕಿಸಲೂ ಎಲ್ಲವೂ ಬೇಕು.

ಹರಿಹರಪ್ರಿಯರು ಸಾಹಿತ್ಯವಲಯ ಮೀರಿದ ರಾಜಕೀಯ ಆಯಾಮವಿರುವ ಪ್ರಶ್ನೆ ಎತ್ತುವುದರಿಂದ ಈ ಸಮಾಧಾನವೂ ಅಷ್ಟು ಸಮಾಧಾನಕರವಲ್ಲ. ಪ್ರಾಯಃ ಹೀಗಿರಬಹುದು. ನೆಹ್ರು, ಇಂದಿರಾಗಾಂಧಿಯವರ ಅಧಿಕಾರ ಕೇಂದ್ರಿತ ರಾಜಕಾರಣಕ್ಕೆ ಲೋಹಿಯಾ ವಿರೋಧದ ಧ್ವನಿಯಾದ್ದರಿಂದ, ಅದರಲ್ಲಿ ರಾಜಕೀಯ, ವಾಕ್‌ಚಟುತ್ವ, ಅಧ್ಯಯನಗಳು ಮೇಳೈಸಿದ್ದರಿಂದ ಆ ಕಾಲದ ತರುಣರನ್ನು ಪ್ರಭಾವಿಸಿರಬಹುದು. ಲೋಹಿಯಾರ ಜನಪರ ಪ್ರಜಾಪ್ರಭುತ್ವದ ಕಾಳಜಿಗಳು ಮತ್ತು ನವ್ಯದ ಕೃತಿ ಕೇಂದ್ರಿತ ಬರವಣಿಗೆ ಇವುಗಳ ಕಂದಕವನ್ನು ಹರಿಹರಪ್ರಿಯರ ವಿಮರ್ಶೆ ಸ್ಪಷ್ಟವಾಗಿ ಗುರುತಿಸುತ್ತದೆ.

೫) ಹಾಗಾದರೆ ಯಾವುದು ಹರಿಹರಪ್ರಿಯರು ಒಪ್ಪುವ ವೈಚಾರಿಕ ನೆಲೆ? ಜಾತಿ ವಿರುದ್ಧದ ಹೋರಾಟಕ್ಕಿಂತ ವರ್ಗ ಸಂಘರ್ಷ ಮುಖ್ಯವೆಂದು ಒಪ್ಪುವ ಮಾರ್ಕ್ಸ್‌ವಾದಕ್ಕಿಂತ, ನಿಷ್ಕ್ರಿಯಗೊಂಡ ಲೋಹಿಯಾವಾದಕ್ಕಿಂತ ಅಂಬೇಡ್ಕರ್ ಚಿಂತನೆ ಅವರಿಗೆ ಒಪ್ಪಿತ. ಇದಕ್ಕೆ ಅವರು ಕೊಡುವ ಕಾರಣಗಳು ಮನನೀಯ.

"ಪರಸ್ಪರ ಮೈಗೂಡದ ಮಾರ್ಕ್ಸ್‌ವಾದಿ – ಲೋಹಿಯಾವಾದಿಗಳನ್ನು ಕೈಬಿಟ್ಟು, ಅಂಬೇಡ್ಕರ್ ನೆಲೆಯಿಂದ ಬಂದ ದಲಿತರು, ಬಂಡಾಯ ಸಂಘಟನೆಯ ಚಾಲಕತ್ವ ಮಾತ್ರವಲ್ಲ, ಸಮಾಜದ ನಾಯಕತ್ವವನ್ನು ವಹಿಸಿಕೊಳ್ಳದೆ ಇರುವ ಅನಿವಾರ್ಯತೆ ಹಾಗೂ ಬಿಕ್ಕಟ್ಟು ಉಂಟಾಗಿದೆ ಎಂಬುದನ್ನು, ಕರ್ನಾಟಕದ ಈ ೧೦೦ ವರ್ಷಗಳ ಸಮಾಜ ಚರಿತ್ರೆ ಬೊಟ್ಟುಮಾಡಿ ತೋರಿಸುತ್ತದೆ" (ಪು. ೪೪– ಬಂಡಾಯ ಮನೋಧರ್ಮ).

ಪ್ರಯಃ ಅಂಬೇಡ್ಕರ್ ಮತ್ತು ಲೋಹಿಯಾ ಚಿಂತನೆಯನ್ನು ಹೀಗೆ ಮುಖಾಮುಖಿ ಮಾಡಿ ತುಲನೆ ಮಾಡುವ ವಿಮರ್ಶೆ ಕನ್ನಡದಲ್ಲಿ ಅತಿವಿರಳ. (ಇದು ನನ್ನ ಓದಿನ ಮಿತಿಯೂ ಇರಬಹುದು. ಕ್ರಿಯಾಶೀಲತೆ ಪ್ರಶ್ನೆ ಬಂದಾಗ ಸೌಂದರ್ಯ ಪ್ರಜ್ಞೆ ಮಾತನಾಡುವುದು, ಸೌಂದರ್ಯ ಎದುರಾದಾಗ ಕ್ರಿಯಾಶೀಲತೆಗೆ ಎಳೆಯುವುದು ಇದು ಹರಿಹರಪ್ರಿಯ ಗುರುತಿಸುವ ಲೋಹಿಯಾವಾದಿಗಳ ಮಿತಿಗಳು. ಲೋಹಿಯಾವಾದಿಗಳ ಮಿತಿ ಲೋಹಿಯಾವಾದದ ಮಿತಿಯೆ? ಎಂಬ ಪ್ರಶ್ನೆಗೆ ಉತ್ತರ ದೊರಕುವುದಿಲ್ಲ. (ಇದೇ ಪ್ರಶ್ನೆಯನ್ನು

ಶಂಕರ, ಬುದ್ಧ, ಬಸವರಂಥ ದಾರ್ಶನಿಕರ, ಪೆರಿಯಾರ್ ರಂಥ ಸಾಮಾಜಿಕ ಚಿಂತಕರ ವಿಚಾರದಲ್ಲೂ ಎತ್ತಬಹುದು).

* * *

ಹರಿಹರಪ್ರಿಯರಲ್ಲಿ ಸಾಮಾಜಿಕ ಕಾಳಜಿ ಇರುವುದು ವ್ಯಕ್ತಿ ಕೇಂದ್ರಿತ ನೆಲೆಯಲ್ಲಿ ಮಾತ್ರವೇ ಅಲ್ಲ; ಅವರು ಕಳೆದ ೪೦ವರ್ಷಗಳಲ್ಲಿ ಮಾರ್ಕ್ಸ್, ಲೋಹಿಯಾ ಧಾರೆಗಳ ಆಕರ್ಷಣೆ – ವಿಕರ್ಷಣೆ ಅನುಭವಿಸಿದ್ದಾರೆ. ಆದರೆ ಅವರ ಚಿಂತನೆಗಿಂತ ಬಸವ, ಅಂಬೇಡ್ಕರ್ ಮತ್ತು ಕುವೆಂಪು ಚಿಂತನೆಯಲ್ಲಿ ನೆಲ ಕಂಡುಕೊಂಡಿದ್ದಾರೆ. ಅದು ಪರಿವರ್ತನೆಗೊಳ್ಳುವ ಸಾಧ್ಯತೆಗಳು ಕಮ್ಮಿ. ಆದರೆ ವೈಚಾರಿಕ ಪ್ರಖರತೆಯೊಡನೆ ಸಾಂಪ್ರದಾಯಿಕ ಕಲೆಗಳ ನಿರಂತರ ಒಡನಾಟವಿರುವುದರಿಂದ, ವಿವಿಧ ಸಂದರ್ಭಗಳಲ್ಲಿ ನೈಜತೆಯನ್ನು ಮುಚ್ಚುವ ವಾದಗಳನ್ನು ಕಳೆದು ಮುಖವನ್ನು ಬಯಲಿಗೆ ತರುವುದರಿಂದ, personaಗಳನ್ನು ದೀರ್ಘಕಾಲ ಎದುರಿಸುತ್ತಿರುವುದರಿಂದ ಈ ಮೂರು ಧಾರೆಗಳು ಅವರಲ್ಲಿ ವೈಚಾರಿಕ ಸಾಹಿತ್ಯದ ಖಚಿತತೆ ಮತ್ತು ಸ್ಪಷ್ಟ ರಾಜಕೀಯ ನಿಲುವು ತಂದಿವೆ. ಆದರೆ ಈ ನಡುವೆ ನನ್ನ ಕಾಳಜಿ ಇರುವುದು ಇಷ್ಟೊಂದು ಓದು, ಹೋರಾಟ, ಒಡನಾಟವಿರುವ ಸೂಕ್ಷ್ಮಗ್ರಾಹಿ ಚಿಂತಕರು ಸರ್ಜನಶೀಲತೆಯನ್ನು ಪೂರ್ಣ ಕೈಬಿಡಬಾರದೆಂದು. ಆ ನಿಟ್ಟಿನಲ್ಲಿ ಹರಿಹರಪ್ರಿಯರ ಕೃಷಿ ಸಾಗಿ ಇದೀಗ (೨೦೦೫) 'ದಾರುಣ ಭಾರತ' ನಾಟಕ ಬಂದಿದೆ. ಅವರ ಸೃಷ್ಟಿಶೀಲ ಕೃತಿಗಳು ಹಿಂದೆ ಬಂದಂಥ ವಿಚಾರ-ವಿಮರ್ಶಾ ಸಾಹಿತ್ಯದ ಮರುಸೃಷ್ಟಿಯೇ ಅಥವಾ ಮತ್ತೊಂದು ಎತ್ತರದಲ್ಲಿ, ವಿಸ್ತೃತಗೊಂಡಿರುವ ಕರ್ನಾಟಕ-ಭಾರತ-ವಿಶ್ವದ ನೆಲೆಯಲ್ಲಿ ಹೊಸಜಾಡು ಹಿಡಿಯುತ್ತವೆಯೇ ಎಂಬ ಕುತೂಹಲ ನನಗಂತೂ ಇದೆ.

ಹರಿಹರಪ್ರಿಯರ ನಿರಂತರ ಸಾಂಸ್ಕೃತಿಕ ಚಡಪಡಿಕೆಯು ಹೊಸ ಕ್ರಿಯಾಶೀಲತೆಗಾಗಿ 'ಪ್ರಜಾಸಾಹಿತ್ಯ' ಪತ್ರಿಕೆಯನ್ನು ಹೊರತರಿಸುತ್ತಿದೆ. ಕನ್ನಡ-ತೆಲುಗು ಬಲ್ಲಂಥ ವಿದ್ವಾಂಸರು ಹರಿಹರಪ್ರಿಯರ ಅನುವಾದ, ಪ್ರೇರಣೆಗಳ ಬಗ್ಗೆ ಮಾತನಾಡಬಲ್ಲರು; ಸಂಗೀತ (ದಕ್ಷಿಣಾದಿ, ಉತ್ತರಾದಿ), ವಾದ್ಯಗಳ ತಜ್ಞತೆ ಇರುವವರು ಅವರ ಸಂಗೀತ ಚಿಂತನೆಯೊಡನೆ ಸಂವಾದಿಸಬಲ್ಲರು; ಎರಡರಲ್ಲೂ ತಜ್ಞತೆಯಿರದ ನಾನು ಅವರ ವೈಚಾರಿಕ ಸೃಷ್ಟಿಶೀಲತೆಯು ರೂಪುಗೊಳ್ಳುವುದನ್ನು ಕಾಯುತ್ತೇನೆ. ಹರಿಹರಪ್ರಿಯರ ಸಮಗ್ರ ಸಾಹಿತ್ಯ ಓದು, ಮರುಚಿಂತನೆಯ ಅಗತ್ಯವಿದೆ.

೧೫೭, ೨೦ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ, ಬಿ.ಟಿ.ಎಂ. ಮೊದಲ ಹಂತ, ಬೆಂಗಳೂರು ೫೬೦ ೦೭೬

❑

ಪ್ರಜಾಸಾಹಿತ್ಯ ಮಾಸಪತ್ರಿಕೆಯನ್ನು ಪ್ರಥಮ ಸಂಚಿಕೆಯಿಂದಲೂ ಓದುತ್ತಾ ಬಂದಿರುವೆ. ಇದು ಓದು, ಬರಹ ಬಲ್ಲವರ ಮಾಸಪತ್ರಿಕೆ ಅಷ್ಟೆ ಅಲ್ಲ, ಮಾತು ಬಲ್ಲವರ ಪತ್ರಿಕೆಯೂ ಆಗಿದೆ. (ಮಾತು ಬಲ್ಲವರಿಗೆಲ್ಲ ಓದು ಬರಹ ಬರುತ್ತದೆ ಎಂಬ ಖಾತ್ರಿಯಿಲ್ಲ) ಏಕೆಂದರೆ ಈ ಪತ್ರಿಕೆಯ ಲೇಖನಗಳ ವಿಚಾರ-ವಿಮರ್ಶೆ ನಮ್ಮ ಅನೇಕ ಮಿತ್ರರ ಮಾತಿನಲ್ಲಿ ಪ್ರಸ್ತಾಪ ಆಗುತ್ತದೆ. ಕರ್ಣಾಕರ್ಣಿಕೆ ಆಗುವುದೂ ಜನಪ್ರಿಯತೆಯ ದ್ಯೋತಕವಲ್ಲವೇ ?... ಒಳ್ಳೆಯ ವೈಚಾರಿಕ ಗುಣಮಟ್ಟದ ಪತ್ರಿಕೆ ತರುತ್ತಿರುವುದಕ್ಕಾಗಿ ಅಭಿನಂದನೆಗಳು. **ಜಿ. ಅಶ್ವತ್ಥನಾರಾಯಣ,** ಬೆಂಗಳೂರು

• • •

ನಾವಿಬ್ಬರೂ ಮಲ್ಲಾಡಿಹಳ್ಳಿಯಲ್ಲಿ ಭೆಟ್ಟಿಯಾದಂದಿನಿಂದ ನಿಮ್ಮ ಬಗ್ಗೆ ನನಗಿದ್ದ ಗೌರವ ಇಮ್ಮಡಿಸಿತು. ನೀವು ಊರಿಗೆ ಹೋದ ಮೇಲೆ 'ಪ್ರಜಾಸಾಹಿತ್ಯ'ದ ಸಂಚಿಕೆಗಳನ್ನು ಕಳಿಸಿದಿರಿ. ಅವೆಲ್ಲವನ್ನೂ ತಿರುವಿ ಹಾಕಿ ಕನ್ನಡಕ್ಕೊಂದು ಕನ್ನಡ ಪತ್ರಿಕೆ ಇದು ಎಂದುಕೊಂಡೆ. ೭ನೆಯ ಸಂಚಿಕೆ ಮತ್ತಷ್ಟು ಕುತೂಹಲ ಮೂಡಿಸಿತು. ನೀವು ಹೇಳಿದಂತೆಯೇ ನಡೆಯುವವರು, ಬರೆಯುವವರು ಎಂಬುದು ಸಾಬೀತಾಯಿತು. ...'ಪ್ರಜಾಸಾಹಿತ್ಯ' ಒಂದು ವಿನೂತನ ರೀತಿಯ ಪ್ರಯತ್ನ. ಅದು ಹೀಗೇ ಪಾರದರ್ಶಕವಾಗಿ ಉಳಿಯಲಿ, ಬೆಳೆಯಲಿ ಎಂದು ಹಾರೈಸುವೆ. **ಚಂದ್ರಶೇಖರ ತಾಳ್ಯ,** ಹೊಳಲ್ಕೆರೆ, ಚಿತ್ರದುರ್ಗ

೮

ಕೆ. ಸತ್ಯನಾರಾಯಣರ ಸನ್ನಿಧಾನ

ನರೇಂದ್ರ ಪೈ

ಕನ್ನಡದಲ್ಲಿ ಬರೆಯುವ ಕುರಿತಾಗಿಯೇ ಚಿಂತನೆಗೆ ಹಚ್ಚುವಂಥ ಜಾಣತನದ ಕೃತಿಯೊಂದು ಅದೂ ಕಾದಂಬರಿ ಪ್ರಕಾರದಲ್ಲಿ ಬಂದಿದೆ ಎಂದರೆ ನಂಬುತ್ತೀರಾ?

೧೯೯೭ರಷ್ಟು ಹಿಂದೆಯೇ ಮನೋಹರ ಗ್ರಂಥ ಮಾಲೆಯಲ್ಲಿ, ಕೀರ್ತಿನಾಥ ಕುರ್ತಕೋಟಿಯವರ ಮುನ್ನುಡಿಯೊಂದಿಗೆ ಇಂಥ ಒಂದು ಕಾದಂಬರಿ ಬಂದಿತ್ತು. ಬರೆದವರು ಕನ್ನಡದ ಖ್ಯಾತ ಕತೆಗಾರ, ಕಾದಂಬರಿಕಾರ, ಅಂಕಣಕಾರ ಕೆ. ಸತ್ಯನಾರಾಯಣ. ಕಾದಂಬರಿಯ ಹೆಸರು 'ಸನ್ನಿಧಾನ'.

ಉಳ್ಳವರ ಮತ್ತು ಇಲ್ಲದವರ, ಸುಖದ ಮತ್ತು ಸಂಕಷ್ಟದ, ವೈಭೋಗದ ಮತ್ತು ನಿರ್ಗತಿಕರ ಕತೆಗಳು ಯಾಕೆ ಒಂದಾಗದ ಎರಡು ಕತೆಗಳಾಗಿಯೇ ಉಳಿಯುತ್ತವೆ ಎಂಬ ಸಾಮಾಜಿಕ, ಆರ್ಥಿಕ ಕಂದರಗಳ ಮಾತನಾಡುತ್ತ ಇಂಥ ವರ್ಗಗಳ ಮನುಷ್ಯ ಮತ್ತು ಮನಸ್ಸುಗಳ ಬಗ್ಗೆ ನಮ್ಮನ್ನು ಕಾಡುವಂಥ ಕತೆ ಹೆಣೆಯುತ್ತಾರೆ ಸತ್ಯನಾರಾಯಣ. ಮತ್ತು ಅದಕ್ಕಿಂತ ಮುಖ್ಯವಾಗಿ ಕತೆಗಾರನ ಸಂಬದ್ಧ ಮತ್ತು ಅಸಂಬದ್ಧ ಕಾಣ್ಕೆಗಳ ಕುರಿತೂ ಸಾಕ್ಷೀಪ್ರಜ್ಞೆಯೊಂದು ಇದ್ದಕ್ಕೂ ಜೀವಂತವಾಗಿರುವಂತೆ ನೋಡಿಕೊಳ್ಳುತ್ತಾರೆ. ಹಾಗೆಯೇ ಸಂಬದ್ಧ ಕತೆಯೊಂದನ್ನು, ಸಾಮಾಜಿಕವಾಗಿ, ತಾತ್ವಿಕವಾಗಿ ಅರ್ಥಪೂರ್ಣವಾದದ್ದನ್ನು ತನ್ನ ಕತೆಯಲ್ಲಿ ಬಿಂಬಿಸ ಹೊರಡುವ ಕತೆಗಾರ ಬದುಕಿನ ಕಟು ಸತ್ಯಗಳಿಂದಲೂ ಸಹಜ ಸೌಂದರ್ಯದಿಂದಲೂ ಕೊನೆಗೆ ಕನಿಷ್ಠ ಮಾನವೀಯತೆಯಿಂದಲೂ ದೂರ ದೂರ ಆಗಿಬಿಡಬಹುದೆಂಬ ಸೂಕ್ಷ್ಮವನ್ನೂ ಅವರ ಈ ಕಾದಂಬರಿ ಸೂಚಿಸುತ್ತದೆ.

ಕತೆ ಬರೆಯುವುದು ಒಂದರ್ಥದಲ್ಲಿ ತೀರಾ ಅಸಹಜ ವಿದ್ಯಮಾನ. ಮನುಷ್ಯನನ್ನು ಹೊರತು ಪಡಿಸಿದರೆ ಜಗತ್ತಿನ ಬೇರೆ ಯಾವುದೇ ಜೀವಿ ಹೀಗೆ ಕಲ್ಪನೆಯ ಅಥವಾ ಕನಸಿನಂಥ ಜಗತ್ತಿನ ವಿದ್ಯಮಾನಗಳನ್ನು ಹಂದರವಾಗಿಸಿ ಸಂವಹನದ ಮೂಲಕ ಹಂಚಿಕೊಂಡು ಇರಬಲ್ಲ ಸಾಧ್ಯತೆಯನ್ನು ಹೊಂದಿಲ್ಲ ಅನಿಸುತ್ತದೆ. (ನಿಜ ಯಾರಿಗೆ ಗೊತ್ತು!) ಆದರೆ ಮನುಷ್ಯ ಇದನ್ನು ಮಾಡುತ್ತ ಬಂದಿದ್ದಾನೆ. ಶ್ರೀರಾಮ ಇದ್ದನೋ ಇರಲಿಲ್ಲವೋ ಅಥವಾ ಶ್ರೀಕೃಷ್ಣ ಇದ್ದನೋ ಇರಲಿಲ್ಲವೋ ಎಂಬ ಪ್ರಶ್ನೆ ಬಿಡಿ. ಅವರು ರಾಮಾಯಣ ಅಥವಾ ಮಹಾಭಾರತದಲ್ಲಿ ಇದ್ದಂತೆ ಅಥವಾ ನಮ್ಮ ಗ್ರಹಿಕೆಗಳಿಗೆ ಲಭ್ಯರಾದಂತೆಯೇ ಇದ್ದಿರಲಾರರು. ಅಥವಾ ಅವರನ್ನು ಚಿತ್ರಿಸಿದ ಕೃತಿಕಾರನಿಗೆ ಅವರ ಎಷ್ಟನ್ನು ಮತ್ತು ಏನನ್ನು ನಮಗೆ ಲಭ್ಯವಾಗಿಸಬೇಕೆಂಬ ಬಗ್ಗೆ ನಿಶ್ಚಿತ ನಿಲುವು ಇದ್ದಿರಲೂಬಹುದು. ಈ ನಿಲುವು ಕೊಟ್ಟ ಮತ್ತು ನಮಗೆ ಗ್ರಹಿಸಲು ಸಾಧ್ಯವಾದ ಒಂದು ವ್ಯಕ್ತಿತ್ವವೇ ಇವತ್ತು ನಮಗೆ ನಮ್ಮ ನಮ್ಮ ಶ್ರೀರಾಮ ಇಲ್ಲವೇ ಶ್ರೀ ಕೃಷ್ಣ. ಇದು ವಾಸ್ತವದಿಂದ ಎಷ್ಟು ದೂರ ಎಂದು ನಿಖರವಾಗಿ ಹೇಳಬಲ್ಲವರಾರು?

ಸತ್ಯನಾರಾಯಣ ಇಂಥ ಮೂಲ ಪ್ರಶ್ನೆಗಳಿಗೇ ಲಗ್ಗೆ ಇಡುತ್ತ ತಮ್ಮ ಕಥಾನಕವನ್ನು ನಿರೂಪಿಸುತ್ತಾರೆ. ಸಾಧ್ಯವಾದಮಟ್ಟಿಗೂ ಈ ಒಣ ಚರ್ಚೆಯನ್ನು ಅವರು ಕಲಾತ್ಮಕವಾಗಿಸುತ್ತ ಸಾಗಿದ ಪರಿಯೇ ಒಂದು ಅಚ್ಚರಿ.

'ಒಂದು ಹಂತಕ್ಕೆ ಬಂದ ಮೇಲೆ, ಬರವಣಿಗೆ ಕೂಡ ಕಾಮದಂತೆ ಅಭ್ಯಾಸವಾಗಿ ಬಿಡುತ್ತದೆ; ಚಟವಾಗಿ ಬಿಡುತ್ತದೆ... ಚಪಲದಿಂದ, ಅಭ್ಯಾಸದಿಂದ ಸಿಗುವ ಸುಖ ಕೂಡ ಅಲ್ಪವಾದದ್ದೇನಲ್ಲ. ಆದರೆ ಈ ಸುಖ ನಿಲುಗಡೆಯದ್ದಲ್ಲ, ಆಳದ್ದಲ್ಲ, ನಿರಾಳ ತರುವಂತದಲ್ಲ. ಮತ್ತೆ ಮತ್ತೆ ಅದೇ ಅಭ್ಯಾಸಕ್ಕೆ ಶರಣು ಹೋಗಬೇಕು, ಚಪಲ ಪೂರೈಸಿಕೊಳ್ಳಬೇಕು. ಅದೇ ತರದ ಸುಖ, ಅದೇ ಸ್ತರದ ಸುಖ – ಅದೇ ವಿಷವೃತ್ತ – ತಿರುಕನ ಕನಸಿನಂತೆ ಅನ್ನೋಣವೆ, ರಾಜನ ಸುಖದಂತೆ ಅಂತ ಅನ್ನೋಣವೇ.'

ಈ ಒಂದು ಪರಿಚ್ಛೇದದಲ್ಲಿ ಸತ್ಯನಾರಾಯಣರು ಏನೆಲ್ಲ ಹೇಳುತ್ತಾರೆ ನೋಡಿ. ಅವರು ಹೇಳುತ್ತಿರುವುದು, ಬರವಣಿಗೆಯ ಯಾಂತ್ರಿಕತೆಯ ಮತ್ತು ಏಕತಾನತೆಯ ಬಗ್ಗೆ. ಆದರೆ ಬರೆಯುತ್ತಿರುವುದು ಕಾಮದ ಬಗ್ಗೆ. ಅದನ್ನು ಜೋಡಿಸುತ್ತಿರುವುದು ಎಮದೂ ಒಂದಾಗದೇ ಹೋದ ಮತ್ತು ತಿರುಕನ ಕತೆಯ ಎಳೆಗೇ!

ಸತ್ಯಾನ್ವೇಷಣೆ ಬರವಣಿಗೆಯ ಒಂದು ಗುರಿ. ಆದರೆ 'ಆಗಾಗ್ಗ ಅತಿಥಿಯಾಗಿಯೋ, ದೈವವಾಗಿಯೋ ಬಂದಾಗ ಕಾಣುವ ಸತ್ಯವನ್ನು ಕೂಡ ನಾವು ಬರೆಯುವುದಿಲ್ಲವಲ್ಲ' ಎನ್ನುತ್ತಾರೆ ಸತ್ಯನಾರಾಯಣ.

ಆದರೆ ಕತೆ ಕತೆಯ ಬೆನ್ನು ಹತ್ತಿ ಹೋದರೆ ಸತ್ಯ ಸಿಗುತ್ತದೆಯೇ ಅಥವಾ ಕತೆ ಸತ್ಯದ ಬೆನ್ನುಹತ್ತಿ ಹೋದರೆ ಕತೆ ಸಿಗುತ್ತದೆಯೆ ಎಂಬ ಪ್ರಶ್ನೆ ಉಳಿಯುತ್ತದೆ. ಸತ್ಯನಾರಾಯಣರು ಈ ಸಮಸ್ಯೆಯನ್ನು ಬಿಡಿಸಿಡುವ ಪರಿ ಗಮನಿಸುವಂಥದ್ದು.

ಇಲ್ಲಿ ಕಥಾನಕ ಮತ್ತು ಬದುಕಿನ ನಡುವೆ ಬಿರುಕು ಇರುವಂತೆಯೇ ಬದುಕು ಮತ್ತು ಕಲ್ಪನೆಯ ನಡುವೆ ಸಾತತ್ಯವನ್ನು ಅರಸುವ ಪ್ರಯತ್ನವೂ ಇರುವುದು ಮನುಷ್ಯನ ಪ್ರವೃತ್ತಿಯನ್ನು ತೋರುವುದಿಲ್ಲವೆ?

ಎಷ್ಟೊಂದು ಕತೆ, ಎಷ್ಟೊಂದು ಮದುವೆ ಎಂಬ ಎರಡನೆಯ ಅಧ್ಯಾಯ ಜಾತಿ, ಗಂಡು ಹೆಣ್ಣು, ಉಳ್ಳವರು ಇಲ್ಲದವರು, ಹಿಂದೂ ಕ್ರಿಶ್ಚಿಯನ್ ಎಂಬೆಲ್ಲ ನಮ್ಮ ನಡುವೆ ಬಿರುಕು ಅಥವಾ ಹೊಸ ಸಂಬಂಧದ ಬೆಸೆಯಬಲ್ಲ ಸಂಗತಿಗಳಿಂದ ತೊಡಗುತ್ತದೆ. ಇಲ್ಲೂ ಕತೆ ಈ ಎಲ್ಲ ಕಾರಣಗಳಿಂದಾಗಿ ಎರಡಾಗುವ, ಎರಡು ಎಂಟಾಗಿ ಎಂಟು ಹದಿನಾರಾಗುವ ಒಂದು ಸಾಧ್ಯತೆ ತೆರೆದುಕೊಳ್ಳುತ್ತದೆ. ಈ ಸಾಧ್ಯತೆಗಳೇ ಕ್ರಮೇಣ ಮುಂದೆ ಎಂದೂ ಇನ್ನೊಂದರ ಜೊತೆ ಒಂದಾಗಲಾರದ ಕತೆಯಾಗಿಯೇ ಉಳಿಯುವ ಕಡೆಗೆ ಮುಖಮಾಡಿದಂತಿದ್ದರೆ ಇನ್ನೊಂದು ಸಾಧ್ಯತೆ ಕೊಂಚ ಬೇರೆ ಬಗೆಯದು. ಅಂಥ ಕತೆಗಳು ಒಂದರ್ಥದಲ್ಲಿ ಒಂದನ್ನೊಂದು ಹೋಲುವ ಮತ್ತು ಈ ಹೋಲಿಕೆಯ ಸಾಮ್ಯತೆಯೇ ಈ ಭಿನ್ನ ಕತೆಗಳನ್ನು ಎಂದೋ ಎರಡೆರಡಾಗಿಸಿದ ಅಥವಾ ಹಾಗಾಗಲು ಕಾರಣವಾದ ಬಿರುಕುಗಳನ್ನು ಮುಚ್ಚುವ ಕಡೆಗೆ ಮುಖಮಾಡಿದಂತಿರುವುದು ಗಮನಾರ್ಹ.

ಬಸವರಾಜು ಲಿಂಗಾಯುತ. ಬ್ರಾಹ್ಮಣಳಾದ ವಿಜಯಲಕ್ಷ್ಮಿಯನ್ನು ಪ್ರೀತಿಸಿ ಮದುವೆಯಾದವ. ಇವರಿಬ್ಬರ ಪ್ರೊಫೆಸರ್ ಲಿಂಗಾಯುತ ಮತ್ತು ಬ್ರಾಹ್ಮಣದ್ವೇಷಿ.

ಬಸವರಾಜುವಿನ ತಂದೆ ಮೌನಿ. ಯಾವುದನ್ನೂ ಪ್ರಶ್ನಿಸದ, ಕೇಳದ, ಏನನ್ನೂ ಬಿಟ್ಟುಕೊಡದ ನಿರ್ಲಿಪ್ತ, ನಿರ್ವಿಕಾರದ ಮೂರ್ತಿ. ಈತನ ತಂಗಿಯೊಬ್ಬಳು ಹರೆಯದಲ್ಲಿ ವೆರೈಟಿ ಎಂಟರಾಟೇನ್‌ಮೆಂಟ್ ಶೋಗೆ ಅಂತ ಬಂದ ಕಂಪೆನಿಯ ಮ್ಯಾನೇಜರ್ ಜೊತೆ ಓಡಿ ಹೋಗಿ, ಅವರ ದಾಂಪತ್ಯ ಸರಿಹೋಗದೆ ಅವಳು ಇನ್ನೆಲ್ಲೋ ನರ್ಸಿಂಗ್ ಟ್ರೇನಿಂಗ್ ಮಾಡಿಕೊಂಡು ಕಷ್ಟ ಪಡುತ್ತಿದ್ದಾಗ ಈ ಅಣ್ಣ ಆಗಾಗ ಹೋಗಿ ಸಹಾಯ ಮಾಡುತ್ತಿದ್ದ ಎಂಬುದು ಕೂಡ ಬರೆ ಅನುಮಾನ, ಅಷ್ಟೆ.

ವಿಜಯಲಕ್ಷ್ಮಿಯ ತಂದೆ ಹಾಗಲ್ಲ. ಸದಾ ಮಗಳ ಮದುವೆಗೆ ಹಣ ಕೂಡಿಡಲಿಕ್ಕೇ ಬದುಕಿರುವವನಂತೆ ಆ ತ್ಯಾಗ, ನಿಷ್ಠೆಗಳನ್ನು ಹೇಳಿಕೊಳ್ಳುತ್ತ ಇದ್ದವನು. ಬಿಎಡ್ ಮಾಡಲು ಹಣವಿದ್ದೂ ಕೊಡಲಿಲ್ಲ ಎಂಬ ಕಾರಣಕ್ಕೆ ವಿಜಯಲಕ್ಷ್ಮಿಯ ಅಣ್ಣನಿಗೆ ತಂದೆಯ ಮೇಲಿನದಕ್ಕಿಂತ ವಿಜಯಲಕ್ಷ್ಮಿಯ ಮೇಲೆಯೇ ಹೆಚ್ಚು ಕೋಪ. ಯಾಕೆಂದರೆ, ದುಡ್ಡು ಕೊಡದಿರಲು ಕಾರಣ ಅವಳ ಮದುವೆಯ ಖರ್ಚು. ಇದು ಬೇರೆ ಬೇರೆ ರೀತಿಯಲ್ಲಿ ಹೊರಬರುತ್ತದೆ ಕೂಡ. ವಿಜಯಲಕ್ಷ್ಮಿಯ ಅಪ್ಪನಿಗಾದರೂ ತನ್ನ ತಂಗಿಯ ಮದುವೆಯನ್ನು ಸರಿಯಾದ ಕಡೆ ಕೊಟ್ಟು ಮಾಡಲಾಗದೆ ಕೊನೆಗೆ ಅಡುಗೆಯವನಿಗೆ ಕೊಡಬೇಕಾಗಿ ಬಂದ ನೋವು ಕಾಡುತ್ತಿರುತ್ತದೆ. ತನ್ನ ಮಗಳೂ ಕಸ ಮುಸುರೆ ಮಾಡುವಂತಾಗಬಾರದು ಎಂಬುದು ಆತನ ಗುರಿ.

ಆದರೆ ಬಸವರಾಜು ವಿಜಯಲಕ್ಷ್ಮಿಯರ ನಡುವೆ ದಾಂಪತ್ಯವೇನೂ ಅಷ್ಟು ಮೇಳೈಸಲಿಲ್ಲವೆನ್ನುವುದು ಸತ್ಯ. ಆದರೆ ಅದೇನೂ ಅವರನ ಅಂತರ್ಜಾತೀ ವಿವಾಹದ ವೈಫಲ್ಯಕ್ಕೆ ಕಾರಣವಾಗುವುದಿಲ್ಲ. ಆದರೆ ಇವರ ಮಗ ಶ್ಯಾಮನಿಗೆ ಮಾತ್ರ ಪೋಲಿಯೋ. ಕಾಲಿಗೆ ಚಿಕಿತ್ಸೆ ಕೊಡಿಸಲು ನಿವೃತ್ತ ಜನರಲ್ ಒಬ್ಬರಲ್ಲಿಗೆ ದಿನವೂ ಹೋಗುತ್ತಿರಬೇಕಾಗುತ್ತದೆ. ಅಲ್ಲಿ ತೆರೆದುಕೊಳ್ಳುವ ಇಂಥದೇ ಇನ್ನಷ್ಟು ಮಕ್ಕಳ ಹಾಗೂ ಅವರನ್ನು ಹೆತ್ತವರ ಸಂಕಟಗಳು ಮುಂದೆ ಒಂದು ವಿಶಿಷ್ಟ ಸಂಘದ ಶುರುವಾತಿಗೆ, ಅದರ ನೆರಳಲ್ಲಿ ವಾರವಾರವೂ

ಒಂದು ಕಡೆ ಸೇರಿ ಅನೇಕ ಒಳ್ಳೆಯ ಕೆಲಸಗಳನ್ನು ನಡೆಸುವ ಸಂಕಲ್ಪಕ್ಕೆ ಕಾರಣವಾಗುತ್ತದೆ. ಈ ಕಾಲು ಊನವಾದವರ ಕತೆಯೊಂದಿಗೇ ತಳುಕು ಹಾಕಿಕೊಂಡಂತೆ ಓಡುವವನ ಆಧ್ಯಾತ್ಮದ ಕತೆಯೂ ತೆರೆದುಕೊಳ್ಳುತ್ತದೆ.

ಬಸವರಾಜು ವಿಜಯಲಕ್ಷ್ಮಿಯರ ಪ್ರೊಫೆಸರ್‌ನ ಬ್ರಾಹ್ಮಣ ದ್ವೇಷಕ್ಕೆ ಹಿನ್ನೆಲೆ ಇದೆ. ಈತನ ತಂದೆಗೆ ನಾಗರಾಜರಾಯ ಎಂಬ ಒಬ್ಬ ಬ್ರಾಹ್ಮಣ ಸಹಪಾಠಿ ಇದ್ದು ಅವರಲ್ಲೇ ಜಾಣತನದ, ನೌಕರಿಯ, ಭಡ್ತಿಯ, ವರ್ಗಾವರ್ಗಿಯ ಜಿದ್ದುಗಳೆಲ್ಲ ಹುಟ್ಟಿಕೊಂಡು ಇಬ್ಬರನ್ನೂ ಹಸಿಹಸಿ ಸುಡುತ್ತಿರುತ್ತವೆ. ಅದು ವ್ಯಕ್ತಿಗತ ಜಿದ್ದಾಗದೆ ಜಾತಿವಾರು ಅಸಮಾನತೆಯ ಪಾಠವಾಗಿ ಮಕ್ಕಳ ಕಾಲಕ್ಕೂ ಅಷ್ಟಿಷ್ಟು ಬೆಳೆದು ಬರುತ್ತದೆ. ನಾಗರಾಜರಾಯ ಸತ್ತದಿನ ಕೆನಡಾದಿಂದ ಬಂದ ಅವನ ಮಗ ಶಂಕರನಾರಾಯಣನ ಸೌಜನ್ಯದ ಔದಾರ್ಯವೇ ಒಳಗಿನ ವಿಷವನ್ನೆಲ್ಲ ಹೊರಬರಲು ಪ್ರೇರಿಸುವುದು ಗಮನಿಸಬೇಕು. ಮೇಲೆ ತೋರುಗಾಣಿಕೆಯ ಪ್ರೀತಿ, ಔದಾರ್ಯ, ಒಡನಾಟ, ಒಳಗೆ ಸುಡುತ್ತಿರುವ ಅಸೂಯೆ, ದ್ವೇಷ, ಜಿದ್ದು, ಎಲ್ಲವೂ ಜಾತಿನೆಲೆಯಲ್ಲೇ ಆದರೂ ಅರ್ಥವಿಲ್ಲದ್ದು ಅನಿಸಿದರೂ ಮನುಷ್ಯ ಮೀರಲಾರದ್ದು ಕೂಡ ಆಗಿಬಿಟ್ಟಿರುವುದು ಸುಳ್ಳಲ್ಲವಲ್ಲ! ಇಷ್ಟಾಗಿಯೂ ಈ ಪ್ರೊಫೆಸರ್ ತನ್ನ ಮಗ ಜ್ಞಾನೇಂದ್ರನ ಇಂಜಿಯರಿಂಗ್ ಮುಗಿದು ಕೆನಡಾಕ್ಕೆ ಹೋಗಬೇಕಾದಾಗ ಅವರಿಗೆ ನೆನಪಾಗುವುದು ಇದೇ ನಾಗರಾಜರಾಯನ ಮಗನೇ. ಆ ಸಂದರ್ಭದಲ್ಲಿ ಅವರು ನಾಗರಾಜರಾಯನ ಮಗನಿಗೆ ಭಾರತೀಯ ಸಂಸ್ಕೃತಿಯನ್ನು ಮುಂದೆ ಮಾಡಿಕೊಂಡು ಮಕ್ಕಳನ್ನು ಬೆಳೆಸುವುದಕ್ಕಾಗಿಯಾದರೂ ವಾಪಾಸು ಭಾರತಕ್ಕೆ ಬಂದು ನೆಲೆಸುವಂತೆ ಮಡದಿ ಮಕ್ಕಳು ಮೆಚ್ಚಿ ತಲೆದೂಗುವಂಥ ಪತ್ರವೊಂದನ್ನು ಬರೆಯುತ್ತಾರೆ. ಆದರೆ ನಾಗರಾಜರಾಯನ ಮಗ ಅದಕ್ಕೆ ಉತ್ತರಿಸುವುದಿಲ್ಲ.

ಶಂಕರರಾಯರ ಒಬ್ಬಳೇ ಮಗಳು ಸಾವಿತ್ರಿಯನ್ನು ಸಂಭ್ರಮದಿಂದ ಅಮೆರಿಕದ ಅಳಿಯನಿಗೆ ಮದುವೆ ಮಾಡಿಕೊಟ್ಟರೂ ಅವಳು ಅಲ್ಲಿ ಇನ್ನಿಲ್ಲದ ಹಿಂಸೆ ಅನುಭವಿಸಿ ಕೊನೆಗೆ ಹೇಗೋ ಊರಿಗೆ ಮರಳಿ ಸಣ್ಣ ಕೆಲಸ ಹಿಡಿದು ಬದುಕುತ್ತಿರುವುದನ್ನು ಬಲ್ಲ ಬಸವರಾಜುವಿಗೆ ಲಿಂಗಾಯುತ ಪ್ರೊಫೆಸರಂಥ ಮಂದಿಯ ಬ್ರಾಹ್ಮಣದ್ವೇಷವಲ್ಲೇ ತನ್ನ ಊರಿನ ಸಾವಿತ್ರಿಯ ಮುಖದ ಮೇಲಿನ ಅತ್ತೆ ಮಾವ ಗಂಡ ಎಲ್ಲಸೇರಿ ಹಾಕಿದ ಬರೆಗಳ ಗುರುತುಗಳ ನೆನಪಾಗುವುದು. ಇಲ್ಲಿ ಸಾವಿತ್ರಿ ಬ್ರಾಹ್ಮಣ ಹುಡುಗಿಯಾಗಿ ಲಿಂಗಾಯತ ಸಣ್ಣತನದ ಪ್ರತೀಕವಾಗುತ್ತಾಳೆ.

ಕಾಶೀಪತಯ್ಯನಿಗೆ ಮನೆಗೆಲಸದ ಕೆಂಪಮ್ಮನಲ್ಲಿ ಹುಟ್ಟಿದ ಮಗ ಮರಿಸ್ವಾಮಿ. ಹೆಂಡತಿಯಲ್ಲಿ ಹುಟ್ಟಿದವರು ಸುರೇಶ ಮತ್ತು ಹರೀಶ. ಸುರೇಶ ಊರಿನಲ್ಲೇ ಫೋಟೋಗ್ರಾಫರ್ ಆಗಿ ಮದುವೆ ಮಕ್ಕಳು ಮಾಡಿಕೊಂಡು ನೆಮ್ಮದಿಯಿಂದಿದ್ದಾನೆ. ಹರೀಶ ಅಮೆರಿಕದಲ್ಲಿ ನೆಲೆಕಂಡುಕೊಂಡವ. ಮರಿಸ್ವಾಮಿಗೂ ಮದುವೆಯಾಗಿದೆ, ಮೂರು ವರ್ಷದ ಮಗ ಶಶಾಂಕ ಹುಟ್ಟಿದ್ದಾನೆ. ಮರಿಸ್ವಾಮಿಗೆ ಮದುವೆಯಾಗಿದ್ದು ತಡವಾಗಿ. ಅದಕ್ಕೆ ಅವನ ಈ ಹಿನ್ನೆಲೆಯೇ ಕಾರಣ.

ಇಲ್ಲಿ ಬೆಂಜಮಿನ್ ಪ್ರಭುವಿನ ಕತೆ ಕೂಡ ಇದೆ. ಎರಡು ತಲೆಮಾರಿನ ಹಿಂದೆ ಅವನ ಪೂರ್ವಜ ಒಬ್ಬ ಮಲೆಯಾಳಿ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾಗಿ ಮಠದಿಂದ ಹೊರಹಾಕಿಸಿಕೊಂಡವ. ಹಾಗಾಗಿ ಬೆಂಜಮಿನ್ ಪ್ರಭುವಿಗೆ ಸಾರಸ್ವತ ಮತ್ತು ಕ್ರಿಶ್ಚಿಯನ್ ಎರಡೂ ಕಡೆ ಅಷ್ಟಿಷ್ಟು ಒಲವಿರುತ್ತ ಅದು ಒಮ್ಮೊಮ್ಮೆ ಆ ಕಡೆಗೆ ಒಮ್ಮೊಮ್ಮೆ ಈ ಕಡೆಗೆ ವಾಲುತ್ತ ಇರುವುದು. ಬೆಂಜಮಿನ್ ತನ್ನ ಸಹೋದ್ಯೋಗಿ ಲಲಿತಳನ್ನು ಪ್ರೀತಿಸಿದ್ದು, ಕೊನೆಗೆ ಅವಳ ಅಪ್ಪನ ಮಧ್ಯಸ್ತಿಕೆಯಲ್ಲಿ ಅವಳನ್ನು ಅಮೆರಿಕದ ಹುಡುಗನಿಗೆ ಅನಾಯಾಸ ಬಿಟ್ಟುಕೊಟ್ಟದ್ದು ಮತ್ತು ಕೊನೆಗೆ ಲಿಲ್ಲಿ ಎಂಬ ಬೇರೊಬ್ಬ ಹುಡುಗಿಯನ್ನು ಮದುವೆಯಾಗಿ ನೆಮ್ಮದಿಯಾಗಿರುವುದು ಮರಿಯಪ್ಪನಲ್ಲಿ ಪ್ರೇಮದ ಮತ್ತು ಮದುವೆಯ ಕುರಿತು ಅನಾಸಕ್ತಿ ತಂದಿತ್ತು. ಅದಕ್ಕಿಂತ ಹೆಚ್ಚಾಗಿ ಬೆಂಜಮಿನ್‌ನ ಅಣ್ಣ ಚರ್ಮದ ವೈದ್ಯನಿಂದಾಗಿ ತಿಳಿದು ಬಂದ ಲೈಂಗಿಕ ವ್ಯಾಧಿಗಳ ವರ್ಣನೆ ಅದಕ್ಕೆ ಕಾರಣವಿರಬಹುದು. ಮುಂದೆ ಈ ಬೆಂಜಮಿನ್ ಪ್ರಭು ಏನೇನೋ ಸಬೂಬು ಹೇಳಿಕೊಂಡು ಲಿಲ್ಲಿಯನ್ನು ಬಿಟ್ಟುಬಿಡುತ್ತಾನೆ. ಲಿಲ್ಲಿಯ ನಡತೆ, ಆರೋಗ್ಯ, ದಾಂಪತ್ಯ ಸಹಕಾರ ಎಲ್ಲದರ ಬಗ್ಗೆ ಬೆಂಜಮಿನ್ ಲಘುವಾಗಿ ಮಾತನಾಡುತ್ತಾನಾದರೂ ನಿಜವಾದ ಕಾರಣ ವರದಕ್ಷಿಣೆ ಕಂತುಗಳು ಸರಿಯಾಗಿ ಪಾವತಿಯಾಗಲಿಲ್ಲ ಎಂಬುದೇ ಆಗಿರುವುದು ಬಲ್ಲವರಷ್ಟೇ ಬಲ್ಲ ಸತ್ಯ.

ಮರಿಸ್ವಾಮಿಯ ಮ್ಯಾನೇಜರ್ ಬಿಸ್ವಾಸ್‌ನದ್ದು ಬಂಗಾಳಿ ಕನ್ನಡ ಕುಟುಂಬ. ಈ ಬಿಸ್ವಾಸನ ವಿಧವೆ ತಂಗಿ ಸುಜಯಳನ್ನೇ ಮರಿಸ್ವಾಮಿ ಮದುವೆಯಾಗಿದ್ದು. ಅತ್ತ ಬಂಗಾಳಿಯೂ ಅಲ್ಲದ ಇತ್ತ ಕನ್ನಡಿಗರೂ ಅಲ್ಲದ ಅವರ ಕುಟುಂಬ ನಾನಾ ಜಾತಿ, ನಾನಾ ಭಾಷೆ, ನಾನಾ ಧರ್ಮಗಳ ವಲಯದಲ್ಲಿ ಹರಿದು ಹಂಚಿಹೋಗಿದ್ದರಿಂದಲೇ ಮರಿಸ್ವಾಮಿ ಜೀವನದಲ್ಲಿ ಮೊದಲಬಾರಿಗೆ ತನ್ನ ಒನ್ನೆಲೆ, ತಂದೆ-ತಾಯಿ, ತನಗೆ ಹೆಣ್ಣುಕೊಡಲು ಬಂದ ಮಹನೀಯರು, ತನ್ನ ಆಸಕ್ತಿ ಇದೆಲ್ಲದರ ಬಗ್ಗೆ ಒಟ್ಟಾಗಿ, ಇಡಿಯಾಗಿ ತೋಡಿಕೊಳ್ಳುವುದು ಸಾಧ್ಯವಾಗುತ್ತದೆ. ಅಲ್ಲದೆ ಸಾಹಿತ್ಯಾಸಕ್ತಿ ಬೆಳೆಸಿಕೊಂಡಿದ್ದ ಮರಿಸ್ವಾಮಿಗೆ ಕತೆಗಾರ ನಾರಾಯಣನೂ ಒತ್ತಾಸೆಯಾಗಿ ನಿಲ್ಲುತ್ತಾನೆ. ಅವನು ಕತೆಗಳು ಕವಲೊಡೆಯುವುದೇ ಮದುವೆಗಳಿಂದ ಎಂಬರ್ಥದ ಮಾತೊಂದನ್ನು ಆಡುತ್ತಾನೆ. ಹಾಗಾಗಿಯೇ ಇಲ್ಲಿ ಎಷ್ಟೊಂದು ಮದುವೆಗಳ, ಕತೆಗಳ ಮಾತು ಬಂದಿದೆ. ಕತೆಗಳು, ಬದುಕಿನ ಎಳೆಗಳು ಮುಂದುವರಿಯದೆ ಹೋದರೆ ಏನಾಗುತ್ತೆ ಅನ್ನೋದನ್ನ ವಿವರಿಸೋಕೆ ಈ ನಾರಾಯಣನೇ ತನಗೂ ತನ್ನ ಹೆಂಡತಿಗೂ ಸಮಾನವಾದೊಂದು ಕತೆಯನ್ನು ಹೇಳುತ್ತಾನೆ. ಕತೆ ಕೇಳಿ ಹುಟ್ಟಿದ ಭಾವಸರಣಿಯಲ್ಲೇ ಮರಿಸ್ವಾಮಿ ಸುಜಯಳನ್ನು ಮದುವೆಯಾಗುವುದಕ್ಕೆ ಒಪ್ಪಿಗೆ ಕೊಡುವುದು ಇಲ್ಲಿನ ವಿಶೇಷ. ಅಲ್ಲೇ ಪ್ರಿನ್ಸಿಪಾಲ್ ಮುಜುಮದಾರ ಒಂದು ಫೈಲ್ ಕೊಡುತ್ತ ಇದರಲ್ಲಿ ಮೂರೇ ಮೂರು ಮೆನುಕಾರ್ಡ್ ತರದ ಬರವಣಿಗೆಯಲ್ಲಿ ವಿಶ್ಲೇಷಣೆ ಇದೆ, ಬಿಡುವಾದಾಗ ಓದಿ ಎಂದು ಕೊಡುತ್ತಾನೆ.

ಮದುವೆ, ಮನುಷ್ಯ ಸಂಬಂಧಗಳು ಮತ್ತು ವಿಘಟನೆಗೊಳ್ಳುವತ್ತ ಸಾಗುತ್ತಿರುವ ನಮ್ಮ ಕುಟುಂಬ ಪದ್ಧತಿಗಳನ್ನು ಕಾಣುವಾಗ ಸತ್ಯನಾರಾಯಣರ ಈ ಜೀವನದೃಷ್ಟಿ ವಿಶೇಷ ಮಹತ್ವ ಪಡೆದುಕೊಳ್ಳುತ್ತದೆ. ತಮ್ಮ ಒಂದು ಮುನ್ನುಡಿಯಲ್ಲಿ ಸತ್ಯನಾರಾಯಣರು ಹೇಳುತ್ತಾರೆ, "ಗಂಡು ಹೆಣ್ಣು ಎರಡೂ ಕೂಡಿ ಕಟ್ಟಬೇಕಾದ ಬದುಕು ಬಾಳು ಒಂದಿರುತ್ತದೆ ಎಂಬ ವಿಚಾರವನ್ನು ನಾವು ಈ ಕಾಲದಲ್ಲಿ ಒಪ್ಪುತ್ತೇವೆಯೇ – ಇದನ್ನು ಒಪ್ಪದಿದ್ದರೆ ದಾಂಪತ್ಯದ ವೈಫಲ್ಯದ ಬಗ್ಗೆ ತಲೆಕೆಡಿಸಿಕೊಳ್ಳಬೇಕಾದ ಅಗತ್ಯವೇ ಇಲ್ಲ. ದಾಂಪತ್ಯದೊಳಗೆ ಗಂಡು-ಹೆಣ್ಣಿನ ಸಂಬಂಧ ಯಾಂತ್ರಿಕವಾಗುತ್ತದೆ ಎಂದು ಹೇಳುವವರು ಕೂಡ ಯಾವ ಮನುಷ್ಯ ಸಂಬಂಧ ತಾನೇ ದೀರ್ಘ ಕಾಲಾವಧಿಯಲ್ಲಿ ಪ್ರತಿದಿನವೂ ಪ್ರತಿಕ್ಷಣವೂ ಬೆಚ್ಚನೆಯ ಪ್ರೀತಿಯಿಂದ ನಳನಳಿಸುತ್ತಿರುತ್ತದೆ ಎಂದು ಇದುವರೆಗೆ ಹೇಳಿಲ್ಲ. ಅತಿಯಾದ ಆತ್ಮಪ್ರತ್ಯಯಕ್ಕೆ ಮಿತಿಯಿರುವಂತೆ ಕೌಟುಂಬಿಕ ಚೌಕಟ್ಟಿಗೂ ಮಿತಿಯಿದೆ. ಕೌಟುಂಬಿಕ ಜೀವನವನ್ನು ವಿಶಾಲವಾದ ಸಮುದಾಯದೊಡನೆ ಬೆಸೆಯುವ ಒಂದು ಮಜಲಾಗಿ ನಮ್ಮಲ್ಲಿ ನೋಡುತ್ತಿದ್ದರು. ನವಮಧ್ಯಮವರ್ಗದವರಿಗೆ ತಾವು ಮತ್ತು ತಮ್ಮ ಕುಟುಂಬದಾಚೆಗೆ ಏನೂ ಕಾಣದು. ವಿಶಾಲವಾದ ಸಮುದಾಯದೊಡನೆ ಬೆರೆಯುವ ಒತ್ತಾಸೆಯಿಲ್ಲದ್ದರಿಂದಲೂ ಗಂಡು ಹೆಣ್ಣಿನ ಸಂಬಂಧ, ಕೌಟುಂಬಿಕ ಚೌಕಟ್ಟು ಎರಡರಲ್ಲೂ ಶಿಥಿಲತೆ ಕಂಡು ಬಂದಿರಬಹುದು."

ನಾರಾಯಣ ಹೇಳುವ ಕತೆ ಆತನಿಗೂ ಅವನ ಹೆಂಡತಿಗೂ ಸಮಾನವಾಗಿರುವಂಥದ್ದು, ಒಬ್ಬರಿಂದ ಮುಚ್ಚಿಡದ್ದು ಆಗಿರಬೇಕೆಂಬ ಒಂದು ಸವಾಲಿಗೆ ಉತ್ತರವಾಗಿ ಕಂಡಿದ್ದು. ಇದು ಕತೆಗಾರನ ಒಳಗಿನ ಬದುಕನ್ನು ತಾನು ತಿಳಿದುಕೊಂಡಿದ್ದೇನೆ, ಕಂಡಿದ್ದನ್ನು ನೆನಪಿನಲ್ಲಿ ದಾಖಲಿಸಿ ಬೇಕೆಂದಾಗ ಬೇಕೆನಿಸಿದ ಆಕಾರದಲ್ಲಿ ಇಟ್ಟು ತನ್ನದೇ ತೀರ್ಪು, ವಿಶ್ಲೇಷಣೆ ಕೊಟ್ಟು ಬರೆಯಬಲ್ಲೆ ಎಂಬ ಅಹಂಕಾರಕ್ಕೆ ಎದುರಾದ ಸವಾಲು. ಒಂದು ಕತೆಯ ಆಶಯ, ಅದರ ಹುಟ್ಟಿನ ಉದ್ದೇಶ ಮತ್ತು ಅದು ಸಾಧಿಸ ಹೊರಡಬಹುದಾದ ಅತ್ಯುತ್ತಮ ಲಕ್ಷ್ಯವೊಂದನ್ನು ಇದು ಸೂಚಿಸುವುದಿಲ್ಲವೆ?

ಇಲ್ಲಿ ನಾರಾಯಣನ ಹೆಂಡತಿ ತನ್ನ ಸೋದರತ್ತೆಯ ಕತೆಯನ್ನೂ, ನಾರಾಯಣ ತನ್ನ ಸೋದರತ್ತೆಯ ಕತೆಯನ್ನೂ ಹೇಳುತ್ತಾರೆ. ಆಶಯದ ದೃಷ್ಟಿಯಿಂದ ಮತ್ತು ನಿಂತುಹೋದ ದೃಷ್ಟಿಯಿಂದಲೂ ಈ ಎರಡೂ ಕತೆಗಳು ಸಮಾನವಾದವು. ಒಬ್ಬಳಿಗೆ ಮುಚ್ಚಟೆಯ ದಾಂಪತ್ಯ ಇನ್ನೊಬ್ಬಳಿಗೆ ಸಾಧಾರಣ ದಾಂಪತ್ಯ ಲಭ್ಯವಾದರೂ ಇಬ್ಬರಿಗೂ ಅದು ತೀರ ಅಲ್ಪಾವಧಿಯದ್ದಾಗಿ ಬಿಡುತ್ತದೆ. ವಿಧವೆಯಾದವಳ ಸಂಕಟ, ಗೋಳುಗಳಿಂದ ತಪ್ಪಿಸಿಕೊಳ್ಳಲು ಒಬ್ಬಳು ಕ್ರಿಶ್ಚಿಯನ್ ಒಬ್ಬರನ್ನು ಮದುವೆಯಾಗಿ ಬದುಕು ರೂಪಿಸಿಕೊಂಡರೆ ಇನ್ನೊಬ್ಬರು ತವರಿಗೆ ಮರಳಿ ವಿಧವೆ ತಾಯಿಯ ಜೊತೆ ತನ್ನಿಬ್ಬರು ಗಂಡು ಮಕ್ಕಳನ್ನು ಬೆಳೆಸುವುದರಲ್ಲಿ ವ್ಯಸ್ತಳಾಗುತ್ತಾಳೆ. ಒಂದು ದಿನ ತನ್ನ ಗಂಡು ಮಕ್ಕಳಿಬ್ಬರನ್ನೂ, ತನ್ನ ತಾಯಿಯ ಬಳಿ ಬಿಟ್ಟು, ತಮ್ಮ ಬಿಡಾರದಲ್ಲೇ ಇದ್ದ ಕಾನ್‌ಸ್ಟೇಬಲ್ ಒಬ್ಬನ ಜೊತೆ ಓಡಿ ಹೋಗಿ ಬದುಕು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ.

ಕೊನೆಯಲ್ಲಿ "......ಆದರೆ ನಿಮ್ಮಂತೋರಿಗೆ ಕತೆ ಅರ್ಥವಾಗುವುದು ಮಾತ್ರವಲ್ಲ, ನಿಮ್ಮಲ್ಲೇ ಆ ಕತೆ ಮುಂದುವರೆಯೋದು. ಆದದ್ದರಿಂದ ಅದನ್ನು ಹೇಳಬೇಕಾಗಿ ಬಂದಿದೆ. ಹಾಗೆ ನೋಡಿದರೆ, ನೀವು ಈ ಕತೆಯ ಕೇಳುಗರು ಮಾತ್ರವಲ್ಲ, ಕತೆಯೊಳಗಿನ ಬದುಕಿಗೆ ವಾರಸುದಾರರು ಹೌದು ಕೂಡ. ನಾನಾಗಲೀ, ನನ್ನಂಥವರಾಗಲೀ ಹರಿಕಥೆ ದಾಸರ ತರ ಕತೆ ಹೇಳತೀವಿ, ಗೊತ್ತಿದೆ ಅನ್ನುವ ಕಾರಣಕ್ಕೇ. ಮುಂದುವರಿಸೋಕೆ ಬೇಕಾದ ಮನೋಧರ್ಮ ಇಲ್ಲ. ನಿಯತ್ತಿಲ್ಲ ನಮ್ಮಲ್ಲಿ. ಅದೂ ಅಲ್ಲದೆ ಯಾರ ಕತೆ ಯಾರಲ್ಲಿ, ಯಾವಾಗ ಮುಂದುವರಿಯುತ್ತೆ, ಹೇಗೆ ಮುಂದುವರಿಯುತ್ತೆ ಅಂತ ಹೇಳೋಕೆ ಒಂದು ನಿಯಮವಾದರೂ ಎಲ್ಲಿದೆ, ಹೇಳಿ." ಎಂಬ ಮಾತಿದೆ. ನಾರಾಯಣ ಮರಿಸ್ವಾಮಿಗೆ ಹೇಳುವ ಮಾತು. ಕತೆಗಾರ ನಮ್ಮ ಬಳಿ ಹೇಳುವ ಮಾತೂ ಆಗಿರುವುದು ಮುಖ್ಯ. ಯಾಕೆಂದರೆ ಈ ಕತೆಯ ಅಥವಾ ಇಂಥದೇ ಕತೆಯ ಸಾಕ್ಷಿಗಳಾಗಿರಬಹುದಾದ ನಮ್ಮ ಸಾಹಿತಿಗಳಿಗೆ ಅಥವಾ ಓದುಗರಿಗೂ ಈ ಕತೆಗಳೆಲ್ಲ ಮುಖ್ಯ ಅನಿಸಲೇ ಬೇಕಿಲ್ಲ. ಹಾಗೆ ಅನಿಸುವಂತೆ ಮಾಡಬಹುದಾದ ಯಾವುದೋ ನಮ್ಮಲ್ಲಿ ಇಲ್ಲದೇ ಇರಬಹುದು. ಅದನ್ನು ಕುರಿತು ಸತ್ಯನಾರಾಯಣರು ಹೇಳುತ್ತಿರುವುದು.

ಇಷ್ಟೇ ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಕೆಲವು ಅಂಶಗಳಿವೆ. ಅದು ಸತ್ಯನಾರಾಯಣರ ಕತೆಗಾರಿಕೆಯ ಕುರಿತು. ಸತ್ಯನಾರಾಯಣರು ಇದುವರೆಗೆ ಒಂದು ಕಥಾನಕದ ಮೂಲಕ, ರಾಜಧಾನಿಯಲ್ಲಿ ಶ್ರೀಮತಿಯರು, ಗೌರಿ ಮತ್ತು ಕಾಲಜಿಂಕೆ ಎಂಬ ನಾಲ್ಕು ಕಾದಂಬರಿಗಳನ್ನು ಬರೆದಿದ್ದಾರೆ. ನಾಲ್ಕನೆಯ ಕಾದಂಬರಿ ಇದು, ಸನ್ನಿಧಾನ. ಅಲ್ಲದೆ ನಿಮ್ಮ ಮೊದಲ ಪ್ರೇಮದ ಕತೆ, ವಿಕ್ಟೋರಿಯಾ ಮಗ ದೇವಲಿಂಗು, ಹಳೆಯ ಕಾಲದ ಹೊಸ ಕತೆ ಮುಂತಾಗಿ ಕೆಲವು ಕಥಾ ಸಂಕಲನಗಳೂ ಬಂದಿವೆ. ಅವರ ಇದುವರೆಗಿನ ಕತೆಗಳು ಎಂಬ ಬೃಹತ್ ಕಥಾ ಸಂಗ್ರಹ ಇದೀಗ ಓದುಗರಿಗೆ ಲಭ್ಯವಾಗಿದೆ.

ಸತ್ಯನಾರಾಯಣರ ಕತೆ ಮತ್ತು ಕಾದಂಬರಿಗಳು ಬಿಡಿ ಬಿಡಿಯಾಗಿ ಮತ್ತು ಒಟ್ಟಾರೆಯಾಗಿ ನೀಡುವ ಅನುಭೂತಿಯಲ್ಲಿ ಮಹತ್ತರ ವ್ಯತ್ಯಾಸವಿದೆ. ಇದು ನನಗೆ ಅತೀವ ಕುತೂಹಲಕರ ಎನಿಸಿದ ಅಂಶ. ಸತ್ಯನಾರಾಯಣರ ಕತೆಗಳನ್ನು ಅಲ್ಲಿ ಇಲ್ಲಿ ಓದಿದಾಗ ಅವು ಓದುಗನ ಮನಸ್ಸಿನಲ್ಲಿ ತಮಗೆ ಬೇಕಾದ ಸ್ಪೇಸ್ ಪಡೆದುಕೊಳ್ಳುವುದಿಲ್ಲ. ಪತ್ರಿಕೆಯಲ್ಲಂತೂ ಅದನ್ನು ನಿರೀಕ್ಷಿಸುವುದೇ ಬಹಳ ಕಷ್ಟ. ಸಂಕಲನದಲ್ಲಿ ಓದಿದಾಗ ಇವುಗಳನ್ನು ತಿಳಿದುಕೊಳ್ಳಲು ನಮಗೆ ಮೈ ಮನಸ್ಸು ಎಲ್ಲಾ ಹೊಸದಾಗಿರೋ, ಶುದ್ಧವಾಗಿರೋ ಹೊಸದೇ ಆದ ಮನಸ್ಸು ಬೇಕೇನೋ ಅನಿಸತೊಡಗುತ್ತದೆ. ಆದರೆ ಹೀಗೆ ಅನಿಸುವುದು ಇವರ ಕತೆಗಳನ್ನು ಒಟ್ಟಾಗಿ ಗ್ರಹಿಸಿದಾಗ ಮಾತ್ರ ಅನ್ನುವುದು ಮುಖ್ಯ. ಮೊದಲ ಪ್ರೇಮದ ಕತೆ ಬಹುಶಃ ಎತ್ತಣಿಂದೆತ್ತ ಕತೆಯ ಹಿನ್ನೆಲೆಯಲ್ಲಿ ಅಥವಾ ಮನೆಬಿಡಿ ಹೇಳಿಕೊಂಡ ಮಗನ ಕತೆಯ ಹಿನ್ನೆಲೆಯಲ್ಲಿ ಕೊಡುವ ದರ್ಶನ ಬಿಡಿಯಾಗಿ ಓದಿದಾಗ ಸಿಗುವುದಿಲ್ಲ. ಹಾಗೆಯೇ ಸುಬ್ಬಿಯ ಕತೆ ಕೂಡಾ ಬಿಡಿಯಾಗಿ ನಿಲ್ಲುವುದಿಲ್ಲ, ಅವಳ ಕಷ್ಟ, ಹೀನಾಯ ಬದುಕು ನಮ್ಮನ್ನು ಕಾಡಿದರೂ ಅದು ಬಹುಶಃ ಅವಳ ಅಕ್ಕಂದಿರಲ್ಲೊಬ್ಬಳಾಗಿರಬಹುದಾಗಿದ್ದ ಸೀತಾಲಕ್ಷ್ಮಿಯ ಹಿನ್ನೆಲೆಯಲ್ಲೇ ಹೆಚ್ಚು ಆಳ ಪಡೆದುಕೊಳ್ಳುತ್ತದೆ ಅನಿಸುತ್ತದೆ. ಇದೇ ಮಾತು ರತ್ನಿ ಮತ್ತು ಹುಸೇನನ ಹೆಂಡತಿಯ ಬಗ್ಗೆಯೂ ಹೇಳಬಹುದು. ವಾಸು ನಮಗೆ ಋಣಾತ್ಮಕವಾಗಿ ಹೌದೆನಿಸಲು ಬಹುಶಃ ಕರಿಯ ಮತ್ತು ಪುಟ್ಟರಾಜು ಕಾರಣ. ಬಿಡಿಯಾಗಿ ವಾಸುವಿಗೆ ಎದುರಾಗಿ ಶಾಸ್ತ್ರಿಗಳಿದ್ದರೂ ಆ ಪಾತ್ರ ವಿಶೇಷ ಮುಖಾಮುಖಿಯ ಮೂಲಕ ಯಾವುದೇ ಹೊಸ ಅರಿವು ಹುಟ್ಟಿಸಬಲ್ಲ ಕಸುಹೊಂದಿಲ್ಲ ಕತೆಯಲ್ಲಿ. ಸಾವಿನ ಜಾಡು ಹಿಡಿದು ಸಾಗುವ ಕತೆಗಳೆರಡಾದರೆ ಪ್ರೇಮದ, ನಲ್ಮೆಯ ಜಾಡು ಹೊತ್ತ ಇನ್ನೆರಡು ಕತೆಗಳು ಮೃತ್ಯು ಪ್ರಜ್ಞೆಯಲ್ಲೇ ಬೆಳಗುತ್ತವಾದರೂ ಸಾವಿನ ಜಾಡಿನ ಕತೆಗಳು ಸ್ವತಂತ್ರವಾಗಿ ಎತ್ತುವ ಪ್ರಶ್ನೆಗಳು ಅಸಂಗತವಾದವೇ ಎನ್ನಬೇಕು. ಶ್ರೀಕಂಠಯ್ಯನವರ ಮತ್ತು ಶ್ರೀನಿವಾಸರ ವಾದ ಎಷ್ಟು ಅಸಂಗತವೋ ಅಷ್ಟೇ ಶ್ರೀಕಂಠಯ್ಯನ ಕೆಲವು ಸಂಗತಿಗಳ ಸರಳ ಸಾರ್ವತ್ರೀಕರಣ ಕೂಡ. ಆದಾಗ್ಯೂ ಮಗಳು ಅಳಿಯಂದಿರ ಕೈಯಲ್ಲೇ ಕೊಲೆಯಾಗುವ ನಂಜಪ್ಪ ಒಡವೆ ಆಸ್ತಿಯ ಮೋಹದ ಹಿಂದೆ ಹೋಗುವ ಬದಲು ಬದುಕಿನಲ್ಲಿ ರುಚಿ ಹತ್ತಿಸಿಕೊಂಡು (ಮಧುಸೂದನ ರೆಡ್ಡಿಯ ಹಾಗೆ?) ಹೆಣ್ಣಿನ ಹಿಂದೆ ಹೋಗಿದ್ದರೂ ಇಷ್ಟು ಭ್ರಷ್ಟನಾಗುತ್ತಿರಲಿಲ್ಲ ಎಂಬ ಮಾತಿಗೆ ವಾಸುವಿನ ಬದುಕೂ ಕರಿಯನ (ಪುಟ್ಟುರಾಜುವಿನ) ಬದುಕೂ ಕನ್ನಡಿ ಒದಗಿಸುತ್ತಿರುವಾಗಲೇ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣಿನಿಂದಲೇ ನಂಜಪ್ಪ ಕೊಲೆಯಾಗುವುದು ಮತ್ತು

ಆ ಮಗನ ಮಹತ್ವಾಕಾಂಕ್ಷೆಯ ಹಿಂದೆ ಸೀತಾಲಕ್ಷ್ಮಿಯ ಬೆಳೆಯುವ ಆಸೆ ಗೋಚರಿಸುವುದು ಕೇವಲ ಆಕಸ್ಮಿಕ ಇರಲಾರದು!

ಅವೇ ಕತೆಗಳನ್ನು ಒಟ್ಟಾಗಿ ಗ್ರಹಿಸಿದಾಗ ಒಬ್ಬ ವಾಸುವಿನ (ಸಂಸ್ಕಾರದ ನಾರಣಪ್ಪನಂತೆ ಕಾಣುವ) ಕ್ರಾಂತಿಕಾರಕ ನಿಲುವುಗಳು ಮತ್ತು ಮುಂದೆ ಬದುಕಿನಲ್ಲಿ ಬದ್ಧತೆಯಿಲ್ಲದೆ ಮಾಡಿಕೊಳ್ಳುವ ಅಧ್ವಾನಗಳಿಂದ ಅಪಾಪೋಲಿಯಾಗುವುದು ಮತ್ತು ಈ ವ್ಯಕ್ತಿಯ ಎದುರು ಶಾಸ್ತ್ರಿ ಇರುವುದು. ಶಾಸ್ತ್ರಿಯ ಮಗ ಇದೇ ವಾಸುವಿನ ಆಕರ್ಷಣೆಗೆ ಬೀಳುವುದು; ಕಪನೀಪತಯ್ಯನ ಮಹತ್ವಾಕಾಂಕ್ಷೆಯ ಐದನೆಯ ಮಗಳು ಸೀತಾಲಕ್ಷ್ಮಿ ಮಂಡಲ ಉಪಾಧ್ಯಕ್ಷೆಯಾಗುವುದು, ಓಡಾಟ ತಿರುಗಾಟಗಳಲ್ಲಿ ಮುಳುಗುವುದು ಮತ್ತು ಈ ವ್ಯಕ್ತಿಯ ಎದುರು ಸ್ಕೂಲ್ ಮೇಷ್ಟ್ರು, ಅರ್ಚಕ ಇತ್ಯಾದಿಯಾಗಿರುವ ಗಂಡ - ಇವರು ಒಂದರ್ಥದ ಮೃತ್ಯು ಪ್ರಜ್ಞೆಯಲ್ಲೇ ಹತ್ತಿರವಾಗುವುದು; ನಂಜಪ್ಪನ ಭ್ರಷ್ಟತೆ, ಕರಿಯ ಮತ್ತು ಪುಟ್ಟರಾಜುವಿನ ನಿರ್ಮಲ ಪ್ರೇಮ, ಮಧುಸೂದನ ರೆಡ್ಡಿಯ ವಿಲಕ್ಷಣ ಬದುಕು ಮತ್ತು ಅದಕ್ಕೆದುರಾಗಿ ಇಲ್ಲಿ ಬರುವ ಹುಸೇನ ಮತ್ತು ರೆಡ್ಡಿಯ ಹೆಂಡಂದಿರು – ಎಲ್ಲಾ ಸೇರಿ ತೆರೆದಿಡುವ ಸಂಕೀರ್ಣ ಮೇಳ ಏನಿದೆ, ಅದನ್ನು ಹೀಗೆ ಒಟ್ಟಾಗಿಯೇ ಗ್ರಹಿಸಬೇಕಾದ್ದು ಸರಿ ಎಂದು ಅನಿಸುತ್ತದೆ. ಆಗಲೇ ಬದುಕನ್ನು ಸತ್ಯನಾರಾಯಣರು ಗ್ರಹಿಸುವ, ಗ್ರಹಿಸಿದ್ದನ್ನು ನಮಗೆ ಕಥಾನಕದ ಮೂಲಕ ತಲುಪಿಸುವ ಕಾಯಕಕ್ಕೆ ಕೊಡುತ್ತಿರುವ ಮಹತ್ವದ ಸ್ಪಷ್ಟ ರೂಪ ಸಿಗುವುದು ಸಾಧ್ಯವೇನೊ ಅನಿಸುತ್ತದೆ.

ಅದೇ ರೀತಿ ಅನೇಕ ಬಾರಿ ಇವರ ಯಾವುದೋ ಹಳೆಯ ಕಥೆಯ ಒಂದು ಪಾತ್ರ ಇನ್ನೊಂದು ಕತೆಯಲ್ಲೋ ಕಾದಂಬರಿಯಲ್ಲೋ ಅತ್ಯಂತ ಸಹಜವಾಗಿ ಕಾಣಿಸಿಕೊಂಡ ಕಥಾನಕದ ಅರ್ಥ ವಿಸ್ತಾರಗಳನ್ನು ಹೆಚ್ಚಿಸುವುದು ಗಮನಿಸಬೇಕಾದ ಅಂಶ. ಅದೇ ರೀತಿ ಒಂದು ಸಂಕಲನದ ಯಾವುದೋ ಕಥೆ ಇನ್ನೊಂದು ಸಂಕಲನದ ಇನ್ನೊಂದು ಕತೆಯೇ ಆಗಿ ಮುಂದುವರಿಯುವುದೂ ಇದೆ. ಈ ಸಂಕಲನದಲ್ಲಿ ಬರುವ ಸೋದರತ್ತೆ ಸಾವಿತ್ರಿಯ ಗಂಡನ ಮುಚ್ಚಟೆಯನ್ನು ಕಾಣುವಾಗ ನಿಮ್ಮ ಮೊದಲ ಪ್ರೇಮದ ಕತೆಯ ಪುಟ್ಟನಂಜನ ನೆನಪು ಬಂದರೆ ಅಚ್ಚರಿಯಿಲ್ಲ. ಅಂದರೆ ಆ ನೆನಪು ಆ ಕತೆಗೆ ಕೊಡುವ ಒಂದು ಪ್ರಭೆ ಬೇರೆಯೇ ಒಂದು ಬಗೆಯದ್ದು. ಹಾಗೆಯೇ ಇಲ್ಲಿನ ಮಿನುಕಾರ್ಡ್ ಕತೆಗಳೊಂದರಲ್ಲಿ ಗೌರಿ ಕಾದಂಬರಿಯ ಗೌರಿ ಕಾಣಿಸಿಕೊಳ್ಳುತ್ತಾಳೆ. ಸತ್ಯನಾರಾಯಣರ ಹಿಂದಿನ ಸೃಷ್ಟಿಯ ಇನ್ನೆಷ್ಟೋ ಪಾತ್ರಗಳು ಇಲ್ಲಿ ಮತ್ತೊಮ್ಮೆ ಅಲ್ಲಿ ಇಲ್ಲಿ ಕಾಣಿಸಿಕೊಳ್ಳುತ್ತವೆ ಅಥವಾ ಕಾಣಿಸಿಕೊಂಡ ಭ್ರಾಂತಿ ಹುಟ್ಟಿಸುವಷ್ಟರಮಟ್ಟಿಗೆ ಇವರ ಪಾತ್ರಗಳು ಸಹಜವಾಗಿ, ಆಪ್ತವಾಗಿ ನಮ್ಮ ಮನಸ್ಸಿನಲ್ಲಿ ಉಳಿದಿರುತ್ತವೆ ಎನ್ನಬೇಕೇನೋ. ಇದೇ ಕಾದಂಬರಿಯ "ಎಷ್ಟೊಂದು ಕತೆ ಎಷ್ಟೊಂದು ಮದುವೆ" ಎಂಬ ಎರಡನೆಯ ಅಧ್ಯಾಯದಲ್ಲಿ ಅರೆಬರೆಯಾಗಿ ಕಾಣಿಸಿಕೊಂಡ ಪಾತ್ರಗಳೂ ಮುಂದೆ ಮತ್ತೆ ಕಾಣಿಸಿಕೊಂಡು ಹಳೆಯ ಕತೆಗೆ ಹೊಸದೇ ಆಯಾಮವನ್ನು ತೊಡಿಸುತ್ತ ಇರುತ್ತವೆ. ಇದೊಂದು ವಿಶಿಷ್ಟ ಬಗೆಯ ತಂತ್ರವಾಗಿ ಓದುಗನನ್ನು ಹೊಸ ದರ್ಶನದತ್ತ ಕೊಂಡೊಯ್ಯುತ್ತದೆ. ಈ ಬಗೆಯಲ್ಲಿ ಕಥಾನಕದೊಳಗೆ ಕಥಾನಕ ನುಸುಳುವ ಬಗ್ಗೆ ಇಲ್ಲಿ ಒಂದು ಮಾತು ಬರುತ್ತದೆ. "...ಅದು ಬಂದ ರೀತಿಯಲ್ಲಿ, ಬೆಳೆದ ರೀತಿಯಲ್ಲಿ ಇವೆಲ್ಲಕ್ಕೂ ಒಂದಕ್ಕೊಂದು ಸಂಬಂಧ ಇದೆಯೆ, ಎಂಬ ಪ್ರಶ್ನೆಯೇ ಅಪ್ರಸ್ತುತವಾದದ್ದು. ಹಾಗೆ ಸಂಬಂಧವಿಲ್ಲದಿದ್ದರೆ, ಅವೆಲ್ಲ ಒಂದರ ಹಿಂದೆ ಒಂದು, ನಾನು, ತಾನು ಅಂತ ಆತುರಾತುರವಾಗಿ ಓಡಿ ಬರುತ್ತಿರಲಿಲ್ಲ. ಬಂದು ಸೇರುತ್ತಿರಲಿಲ್ಲ."

ಈ ಎಲ್ಲ ತಂತ್ರಗಳ ಹಿಂದೆ ಶುದ್ಧ ಕಥಾನಕ ಅನಿವಾರ್ಯ ಅಂಶಗಳನ್ನು ಅಥವಾ, ಸೃಜನಶೀಲ ಸೃಷ್ಟಿಕ್ರಿಯೆಯ ಸ್ವಾಭಾವಿಕ ಚಲನೆಯನ್ನು ಮೀರಿದ ಒಂದು ಉದ್ದೇಶ, ಗುರಿ ಕೆಲಸ ಮಾಡುತ್ತಿರುತ್ತದೆ ಎಂಬುದೇ ಗುರುತಿಸಬೇಕಾದ ಸಂಗತಿ. ಅದು ಕಥಾನಕವೊಂದು ಕತೆಗಾರನ ಕೈಯಲ್ಲಿ ರೂಪುಗೊಳ್ಳುವ ಪ್ರಕ್ರಿಯೆಯನ್ನು, ಆ ಕೆಲಸದಲ್ಲಿ ತೊಡಗಿರುವಾಗಲೇ ಅದನ್ನು ಗಮನಿಸಿಕೊಂಡಿರುವ ಸೂಕ್ಷ್ಮ ಅವಲೋಕನದ ಒಂದು ಸಾಕ್ಷೀಪ್ರಜ್ಞೆ ಇಲ್ಲಿದೆ ಎಂಬುದು. ಹಾಗಾಗಿಯೇ ಇದು ಕಾದಂಬರಿಯ ಕುರಿತಾಗಿರುವ ಕಾದಂಬರಿ!

ಮೂರನೆಯ ಅಧ್ಯಾಯದಲ್ಲಿ ಸತ್ಯನಾರಾಯಣರು ನೇರ ಕತೆಗಾರನ, ಅವನ ಸುತ್ತಲಿನ ಜಗದ ಕತೆಗಳ, ಅವು ಕಥಾನಕಗಳಾಗಿ ಕತೆಗಾರನ ವಿವರಗಳಲ್ಲಿ ಮೈ ತಳೆಯುವ ಮತ್ತು ಒಮ್ಮೆ ಹಾಗೆ ಮೈತಳೆದದ್ದೇ

ಪತ್ರಿಕೆಯ ಸಂಪಾದಕರ, ವಿಮರ್ಶಕರ, ಮುನ್ನುಡಿಕಾರರ ಜಗತ್ತಿನಲ್ಲೆಲ್ಲ ಆ ಕಥಾನಕ ಪಡೆದುಕೊಳ್ಳುವ ವೈವಿಧ್ಯಮಯ ಆಕೃತಿಗಳ ವಿವರಗಳೊಂದಿಗೆ ತೊಡಗುತ್ತಾರೆ.

ಮುನ್ನುಡಿ ಬರೆಸಿಕೊಳ್ಳಲಿಕ್ಕೆ ಅಂತ ಹೋದವರಿಗೆ ಮುನ್ನುಡಿಕಾರರ ಕತೆಯನ್ನು ಓದುವ ಕೆಲಸ (?) ಗಂಟು ಬೀಳುತ್ತದೆ. ಅದಕ್ಕಿಂತ ಮುಖ್ಯವಾಗಿ ಆವತ್ತೇ ಅವರಲ್ಲಿಗೆ ಬಂದಿದ್ದವರೊಬ್ಬರು ಕೊಟ್ಟ ಪತ್ರಗಳ ಮುದ್ರಿತ ಪ್ರತಿಗಳೂ ಸಿಗುತ್ತವೆ. ಬ್ರಾಹ್ಮಣ ಮಿತ್ರ ಬ್ರಾಹ್ಮಣರ ಕುರಿತು ಮಾಡಿದ ಟೀಕೆ ಮತ್ತು ಬ್ರಾಹ್ಮಣೇತರ ಮಿತ್ರ ಬ್ರಾಹ್ಮಣರ ಕುರಿತು ಮಾಡಿದ ಟೀಕೆ ಎರಡೂ ಒಂದೇ ಇದ್ದರೂ ಒಂದು ಮಾತ್ರ ಉಂಟುಮಾಡುವ ನೋವೇ ಕಾರಣವಾಗಿ ಅವುಗಳನ್ನು ಮುದ್ರಿಸಿ ಸಿಕ್ಕಿದವರಿಗೆಲ್ಲ ಹಂಚಿ, ಅಭಿಪ್ರಾಯಗಳನ್ನು ಸಂಗ್ರಹಿಸುವ 'ಹಪಿವೆ' ಹಿಡಿದ ಒಬ್ಬರು ನೀಡುವ ಮುದ್ರಿತ ಪತ್ರದ ಪ್ರತಿಗಳು ಅವು. ಮುಂದೆ ಅಲ್ಲೇ ಭೇಟಿಯಾಗುವ ಅರವಿಂದ ಹೇಳುತ್ತಾನೆ : "ನಾನೇನು ಕೊಡೋಲ್ಲ ನಿಮಗೆ ಓದೋಕ್ಕೆ. ಕತೆ ಕವನದ ಪೈಕಿಯವನಲ್ಲ ನಾನು. ಡೋಂಟ್ ಬಿ ನರ್ವಸ್". ಆದರೆ ಮುಂದೆ ಇದೇ ಅರವಿಂದ ತೆರೆದಿಡುವ ಓದುವವನ ಆಧ್ಯಾತ್ಮ ಯಾವುದೇ ಕತೆಗೂ, ಕತೆ ನೀಡಬಹುದಾದ ಕಾಣ್ಕೆಗೂ ಕಡಿಮೆಯಾದುದೇನಲ್ಲ.

ನಮ್ಮ ಕಾಲದ ಜಾನಪದ ಕತೆ ಎಂಬ ಹೆಸರಿನ ನಾಲ್ಕನೆಯ ಅಧ್ಯಾಯದಲ್ಲಿ ಐದು ಮಂದಿ ಬರಹಗಾರರು ತಮ್ಮತಮ್ಮ ಬದುಕಿನ ಸ್ಥೂಲ ಹಿನ್ನೋಟ ನೀಡುತ್ತಾರೆ. ಅವರವರ ಆಸೆ, ಕನಸು, ಆದರ್ಶ ಬಾಲ್ಯದಲ್ಲಿ ಇದ್ದದ್ದು ಈಗ ಆಗಿರುವುದು ಎಲ್ಲದರ ಕುರಿತು ಹೇಳುತ್ತಾರೆ. ಇಲ್ಲಿ ಕತೆ, ಕತೆಗಾರನ ಬದುಕು ಮತ್ತು ಸ್ವಾನುಭವ ಹಾಗೂ ಅವನು ಕಟ್ಟುವ ಕಥಾನಕ - ಇವುಗಳ ನಡುವಿನ ಕಂದಕವನ್ನು ಹೇಳುತ್ತಲೇ ಇಬ್ಬರು ಮುದುಕರ ನಡುವೆ ಕತೆಯೊಂದರ ಕುರಿತಾಗಿಯೇ ನಡೆಯುವ ಹೊಡೆದಾಟದ ಪ್ರಸಂಗ ಬರುತ್ತದೆ. ನಮ್ಮ ಕಾಲದ ಜಾನಪದ ಕತೆ ಎಂದು ಹೇಳಿಕೊಂಡು ಇಬ್ಬರೂ ಕತೆಗಾಗಿ ನನ್ನದು ಎಂಬ ಪ್ರತಿಷ್ಠೆಯನ್ನೆ ಮುಂದೆ ಮಾಡಿಕೊಂಡು ಜಗಳವಾಡುವುದನ್ನು ಕತೆಯ ಸಹಿತ ಸತ್ಯನಾರಾಯಣರು ಕಾಣಿಸಿ ಬೆಚ್ಚಿಬೀಳಿಸುತ್ತಾರೆ! ಇಲ್ಲಿನ ವಂದನಾಳ ಕತೆ ಯಾರ ಹೃದಯವನ್ನಾದರೂ ನಾಟುವಂಥದ್ದು. ಆದರೆ ಜಗಳವೇ ಮುಖ್ಯವಾಗಿ ಬಿಡುವುದೂ ಸಾಧ್ಯ!

ಕತೆಗಾರ ಬದುಕನ್ನು ನೋಡುವ ಬಗೆಯ ಕುರಿತೇ ಇಲ್ಲಿ ಅನುಮಾನ ಹುಟ್ಟಿಸುತ್ತಾರೆ ಸತ್ಯನಾರಾಯಣ. "ನಿಮಗೆ ಗೊತ್ತಿಲ್ಲ, ಯಾವುದಾದರೂ ಒಂದು ಘಟನೆ, ಒಂದು ಸಂದರ್ಭನ ಕತೆ ಬರೆಯೋರು ನಾಲ್ಕು ಜನ ಲೇಖಕರು ಕೇಳಿಸಿಕೊಂಡರೆ, ಅವರು ಕೇಳಿಸಿಕೊಂಡ ಕತೆಗಿಂತ, ಅವರಿಗೆಲ್ಲ ಅದು ತಮ್ಮ ಮನಸ್ಸಿನಲ್ಲಿ ಹೇಗೆ ಬೆಳೆಯುತ್ತೆ ಅನ್ನೋದೇ ಮುಖ್ಯವಾಗುತ್ತೆ. ಪ್ರತಿಯೊಬ್ಬ ಲೇಖಕನಿಗೂ ವಸ್ತು, ಪಾತ್ರಗಳು, ಸಂದರ್ಭ ತನ್ನ ಮನಸ್ಸಿನೊಳಗೆ ಬೆಳೆಯುತ್ತಿರುವ, ಮಾಗುತ್ತಿರುವ ಕ್ರಮವೇ ಸರ್ವಶ್ರೇಷ್ಠವಾದ್ದು ಅನ್ನುವ ಭಾವನೆ, ಅಹಂಕಾರ ಇರುತ್ತೆ".

ಅದೇ ರೀತಿ ಬ್ರಾಹ್ಮಣನಿಗೆ ಬ್ರಾಹ್ಮಣನಿಂದಲೂ ಬ್ರಾಹ್ಮಣೇತರನಿಂದಲೂ ಬಂದ ಪತ್ರಗಳು ಕಾರಿಕೊಳ್ಳುವ ಪರಸ್ಪರ ಮತ್ತು ಜಾತೀಯ ನೆಲೆಯ ಜಿದ್ದುಗಳನ್ನು, ಈ ಜಿದ್ದೇ ಅವರ ಬದುಕಿನ ಪ್ರಮುಖ ಅಂಗವಾಗಿಬಿಟ್ಟು ಅದು ಅವರ ವ್ಯಕ್ತಿತ್ವವನ್ನೇ ರೂಪಿಸುವಷ್ಟರಮಟ್ಟಿಗೆ ಮುಖ್ಯವಾಗಿಬಿಡುವುದನ್ನು ಸೂಚಿಸುತ್ತವೆ. ಇವೂ ಬದುಕಿನ ಕತೆಗಳೇ. ಸ್ವ ಮುಖ್ಯವಾಗುವ ಒಂದಾನೊಂದು ನೆಲೆಗಟ್ಟಿನ ಕುರಿತೇ ಹೇಳುತ್ತಿವೆ ಇವು.

ಹಾಗೆಯೇ ರಷ್ಯಾ ಒಡೆಯುವುದು ಇಲ್ಲಿ ಒಂದು ರೂಪಕವಾಗುವ ಬಗೆ ಮತ್ತು ಅದು ರೂಪಕವಾಗಿರುವದನ್ನು ಕೊಂಚ ವ್ಯಂಗ್ಯ ಬೆರೆತ ಧ್ವನಿಯಲ್ಲಿ ಕತೆಯನ್ನಾಗಿಸಿ ಕತೆಗೊಂದು ವಿಮರ್ಶೆ ಅಥವಾ ರಿವ್ಯೂ ನೀಡುತ್ತಿರುವ ರೂಪದಲ್ಲಿ ವಿಶ್ಲೇಷಿಸುವುದೂ ನಮ್ಮನ್ನು ಚಿಂತನೆಗೆ ಆಹ್ವಾನಿಸುವಂತಿದೆ.

ನಿಜ, ಇಷ್ಟಾಗಿಯೂ ಇಲ್ಲಿ ಅದ್ಭುತವಾದ ಕತೆ, ಕಥಾನಕ ಇಲ್ಲ. ಕುತೂಹಲ ಹುಟ್ಟಿಸುವ ಒಂದು ಕತೆಯ ಬೆಳವಣಿಗೆಯಾಗಲೀ (ಒಂದು ಕಥಾನಕದ ಮೂಲಕ), ಒಂದು ಮುಖ್ಯ ಪಾತ್ರದ ಒಳತೋಟಿಗಳ ಚಿತ್ರವಾಗಲೀ (ಗೌರಿ), ಸಾಮಾಜಿಕ, ತಾತ್ವಿಕ ಆಯಾಮವಿರುವ ಕಲಾತ್ಮಕ ಅಭಿವ್ಯಕ್ತಿಯಾಗಲೀ (ರಾಜಧಾನಿಯಲ್ಲಿ ಶ್ರೀಮತಿಯರು) ಇಲ್ಲಿಲ್ಲ. ಆದರೆ ಸಾಹಿತ್ಯ, ಸಾಹಿತಿ, ಅವನ ಬರೆಯುವ ಕ್ರಿಯೆ, ವಿಮರ್ಶೆಯ–ಮೆಚ್ಚುಗೆಯ ನಿರೀಕ್ಷೆ, ಕತೆಯ ಶರೀರ, ಕತೆಗಾರ ಅದಕ್ಕೆ ಚೌಕಟ್ಟು ಒದಗಿಸಲು ಹೋಗಿ ಸತ್ಯಾನ್ವೇಷಣೆಯ ಹೆಸರಲ್ಲಿ ಸತ್ಯದಿಂದ (ದಕ್ಕುವ ಸತ್ಯ ಎಂಬುದೊಂದು ಇದ್ದರೆ – ಎಂಬ ಸಕಾರಣ ಅನುಮಾನದೊಂದಿಗೇ) ದೂರವಾಗುವ

ವಿಪರ್ಯಾಸಗಳನ್ನು ಕಾಣಿಸುತ್ತಲೇ ಈ ಕಥಾನಕ ಸೂಕ್ಷ್ಮವಾಗಿ ತನ್ನ ಒಡಲೊಳಗೆ ಸೇರಿಸಿಕೊಳ್ಳುವ ಸಾಮಾಜಿಕ ಆಯಾಮ ತುಂಬ ಸೂಚ್ಯವಾಗಿರುವುದು ಒಂದು ಸಿದ್ಧಿ ಎಂದೇ ಹೇಳಬೇಕು.

ಏಳನೆಯ ಮತ್ತು ಎಂಟನೆಯ ಅಧ್ಯಾಯ ಕಾದಂಬರಿಯ ಚೌಕಟ್ಟಿಗೆ ನೇರ ಸಂಬಂಧಿಸಿದ ಕಥನಕಗಳೇನೂ ಅಲ್ಲ. ಆದರೆ ತಥಾಕಥಿತ ಸಂಬಂಧದ ಪರಿಕಲ್ಪನೆಯನ್ನೆ ಅಲ್ಲಾಡಿಸುತ್ತಿರುವ ಕಾದಂಬರಿಯ ಅಧ್ಯಾಯಗಳ ಬಗ್ಗೆ ಹಾಗೆ ಹೇಳುವುದೂ ಕಷ್ಟ ! ಸರಳವಾಗಿ ಈ ಎರಡೂ ಅಧ್ಯಾಯಗಳು ಬದುಕಿನ ಸೂಕ್ಷ್ಮಗಳ ಬಗ್ಗೆ ಆಳವಾದ ಒಳನೋಟ ನೀಡುವಂಥವು. ಆದಾಗ್ಯೂ ಕತೆ, ಈ ಅಧ್ಯಾಯಗಳು ಬದುಕಿನ ಸೂಕ್ಷ್ಮಗಳ ಕುರಿತು ನೀಡುವ ಒಳನೋಟದಷ್ಟು ಕಥನ ಕ್ರಮ ಮತ್ತು ಕತೆಗಾರನ ಕುರಿತು ಒಂದಲ್ಲ ಒಂದು ರೀತಿಯಲ್ಲಿ ಉಳಿದ ಅಧ್ಯಾಯಗಳು ನೀಡುವ ಒಳನೋಟಗಳು ಇಲ್ಲಿ ಇಲ್ಲ.

ಲಿಂಗಾಯತರ ಸ್ವಯಂವರ ಎನ್ನುವ ಅಧ್ಯಾಯದಲ್ಲಿ ಗಂಡು ಹೆಣ್ಣು ಸಂಬಂಧದ ಮದುವೆ, ಕಾಮ, ವಿಚ್ಛೇದನ, ವಿವಾಹೇತರ ಸಂಬಂಧ ಮತ್ತು ಈ ಆಕಸ್ಮಿಕವೇ ಇರಬಹುದಾದ ಸಂಬಂಧಗಳ ಪರ್ಯಾಯ ಸಂಭವನೀಯತೆಗಳ ಕುರಿತ ಯೋಚನೆ ಹುಟ್ಟಿಸುವ ಪಾಪಪ್ರಜ್ಞೆ ಮತ್ತು ಮನುಷ್ಯನ ಆಳದ ಹಪಹಪಿಕೆಗಳ ಒಳ ಅರಿವು ಇವುಗಳ ಬಗ್ಗೆ ಇದೆ. ಮನುಷ್ಯನ ಆಳದ ಸಣ್ಣತನ, ನೀಚತನ ಮತ್ತು ಅವುಗಳ ಸಹಜತ್ವ ಕೂಡಾ ಬದುಕಿನ ಅನಿವಾರ್ಯ ಅಂಗವೇ ಎಂಬ ಅರಿವು ಇಲ್ಲದೇ ಹೋದರೆ ಏನಾದೀತು?

ಆ ಏನಾದೀತು ಎಂಬ ಪ್ರಶ್ನೆಯಲ್ಲಿರುವ ಸಾಧ್ಯತೆಗಳ ಮಹಾಪೂರವನ್ನೇ ನಮ್ಮೆದುರು ತೆರೆದಿಡುವ ಅಧ್ಯಾಯ ಗೌರಿಯೆಂಬ ಮೂರು ಟಿಪ್ಪಣಿಗಳು. ಇಲ್ಲಿ ಬರುವ ಗೌರಿ ಸತ್ಯನಾರಾಯಣರ ಗೌರಿ ಕಾದಂಬರಿಯ ಗೌರಿಯೇ ಎಂದರೂ ಆದೀತು. ಅಲ್ಲವೆಂದರೂ ಓದಿಗೂ ಅದರ ಸತ್ವದ ಅರಿವಿಗೂ ತೊಡಕಾಗದು. ಹಾಗೆಯೇ ಇಲ್ಲಿ ತೆರೆದುಕೊಳ್ಳುವ ಮೂರು ವಿಭಿನ್ನ ಎನಿಸುವ ಮೂರು ಟಿಪ್ಪಣಿಗಳೂ ಎಲ್ಲೋ ಸಂಧಿಸುತ್ತವೆ ಮತ್ತು ಒಂದೇ ಎನಿಸುತ್ತವೆ. ಹಾಗೆಯೇ ಈ ಮೂರೂ ಟಿಪ್ಪಣಿಗಳು ಕಾದಂಬರಿಯ ಎರಡನೆಯ ಅಧ್ಯಾಯದಲ್ಲಿ ಬರುವ ಎಷ್ಟೊಂದು ಕತೆ ಎಷ್ಟೊಂದು ಮದುವೆಗಳಲ್ಲಿ ಯಾರೊಬ್ಬರದೂ ಅನಿಸಿದರೆ ಅಚ್ಚರಿಯೇನಿಲ್ಲ. ಈ ಸಂಬಂಧ ಇದೆ ಎಂದರೆ ಇದೆ, ಇಲ್ಲ ಎಂದರೆ ಇಲ್ಲ !

ಕೊನೆಯ ಅಧ್ಯಾಯದಲ್ಲಿ ಕಾಶೀಪತಯ್ಯನ ಮೊದಲನೆಯ ಹೆಂಡತಿಯ ಮಗ ಹರೀಶ ಅಮೆರಿಕದಿಂದ ಬಂದು ತನ್ನ ಹಣವನ್ನು ಸದ್ವಿನಿಯೋಗಗೊಳಿಸುವ ಯೋಜನೆಗಳನ್ನು ರೂಪಿಸಿವು ವಿವರಗಳಿವೆ. ಇಲ್ಲಿ ಬರುವ, ಒಬ್ಬೊಬ್ಬರೂ ತಮ್ಮ ಮನೆಯೊಳಗೇ ತಮ್ಮದಲ್ಲದ ಒಂದು ಮಗುವನ್ನು ಬೆಳೆಸುವುದು ಎಂಬ ಪರಿಕಲ್ಪನೆಯೇ ಎಷ್ಟೊಂದು ಅದ್ಭುತ ಮತ್ತು ಚೇತೋಹಾರಿ! ವಾಸ್ತವದಿಂದ ಕೊಂಚ ದೂರಸರಿದಂತೆ ಕಾಣುವ ಇದರ ಆದರ್ಶಮಯತೆಯನ್ನು ಒಂದು ಘಳಿಗೆ ಮರೆತು ಯೋಚಿಸಿದರೂ ಈ ಕಥಾನಕದಲ್ಲಿ ಬರುವ ಜಾತೀಯ ಭಾವನೆ, ಅದು ಹುಟ್ಟಿಸುವ ಕ್ಷುದ್ರ ಮನಸ್ಸುಗಳು, ಮತ್ತೆಮತ್ತೆ ಬರುವ ಮದುವೆಗಳ ಮೂಲಕ ಮನುಷ್ಯ ಸಂಬಂಧಗಳು ಹೇಗೆಲ್ಲ ರೂಪುಗೊಳ್ಳಬಹುದು, ಯಾಕೆಲ್ಲ ವಿರೂಪಗೊಳ್ಳಬಹುದು ಎಂಬ ವಿವರಗಳೇ ಇಂಥ ಒಂದು ದಾರಿ ಬಿಟ್ಟರೆ ಅನ್ಯ ಪರಿಹಾರವೇ ಇಲ್ಲವೆಂಬಂಥ ಸ್ಥಿತಿಯನ್ನು ಹುಟ್ಟಿಸುವುದಂತೂ ಖಂಡಿತ.

"ತನಗೆ ವ್ಯತಿರಿಕ್ತವಾದದ್ದನ್ನೂ ತಿಳಿದುಕೊಳ್ಳುವ, ಪ್ರೀತಿಸುವ ಶಕ್ತಿ ಮತ್ತು ಪ್ರಜ್ಞೆ ಮಧ್ಯಮ ವರ್ಗಕ್ಕೆ ಇಲ್ಲ ಎನ್ನುವುದು ಈ ಕಾಲದ ಸತ್ಯ ಮತ್ತು ಈ ಕಾಲದ ಕತೆ" ಎಂದಿರುವ ಕುರ್ತಕೋಟಿಯವರ ಮಾತು ಈ ಕೃತಿ ಕನ್ನಡದ ಮನಸ್ಸುಗಳನ್ನು ತಲುಪಬೇಕಾದ ಪರಿಯಲ್ಲಿ ತಲುಪದೇ ಇರಲು ಇದ್ದಿರಬಹುದಾದ ಕಾರಣವನ್ನೂ ಸೂಚಿಸುತ್ತದೆ ಎನಿಸುತ್ತದೆ.

"ಅಷ್ಟಕ್ಕೆ ಮಾತ್ರವೇ ರಾಜರಾಣಿ – ತಿರುಕನ ಕತೆ ಒಂದಾಗಬಲ್ಲವೆ, ಒಂದೇ ಕತೆಯಾಗಬಲ್ಲವೆ?" ಎಂಬ ಪ್ರಶ್ನೆಯನ್ನೂ ಸೇರಿದಂತೆ ಈ ಕಾದಂಬರಿ ಎತ್ತುವ ನೂರಾ ಒಂದು ಪ್ರಶ್ನೆಗಳನ್ನು ಎದುರಿಟ್ಟುಕೊಂಡು ಬಹುಕಾಲ ಧೇನಿಸುವಂತೆ ಮಾಡುವುದೇ ಈ ಕಾದಂಬರಿಯ ವಿಶಿಷ್ಟ ಸಾಧನೆ ಎಂದು ನನಗನಿಸಿದೆ.

ಬಿಂದಿಯಾ, ಸೀಕ್ವೆರಾಲೇನ್, ಮಾರಿಗುಡಿ ಕ್ರಾಸ್ ರೋಡ್, ಉರ್ವ ಮಾರ್ಕೆಟ್, ಮಂಗಳೂರು ೫೭೫ ೦೦೬

❑

ಮೈತ್ರಿ ಸರ್ಕಾರದ ಸಾಧನೆಗಳು

ರಾಜ್ಯದ ಸರ್ವತೋಮುಖ ಪ್ರಗತಿಗೆ ಪಣತೊಟ್ಟು ಫೆಬ್ರವರಿ 3, 2006 ರಂದು ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ನೇತೃತ್ವದಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಮೈತ್ರಿಕೂಟ ಸರ್ಕಾರವು ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿಗೆ ಸಮಾನ ಆದ್ಯತೆ ನೀಡಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಈ ದಿಕ್ಕಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಹಗಲು-ಇರುಳು ಎನ್ನದೆ, ಹಳ್ಳಿ-ಹಳ್ಳಿಗೆ ಭೇಟಿ ನೀಡಿ ಅಲ್ಲಿಯೇ ವಾಸ್ತವ್ಯ ಹೂಡಿ, ಹಳ್ಳಿಗರ ಮನದಾಳಕ್ಕೆ ಇಳಿದು ಅವರ ಕುಂದು-ಕೊರತೆಗಳಿಗೆ ಸ್ಪಂದಿಸುತ್ತಿರುವುದು ಜನತೆಯಲ್ಲಿ ಹೊಸ ಭರವಸೆ ಮೂಡಿಸಿದೆ. ಮೈತ್ರಿಕೂಟ ಸರ್ಕಾರದ ಪರಿಶ್ರಮದ ಫಲವಾಗಿ ಕರ್ನಾಟಕ ಇಂದು ದೇಶದ ಹಲವಾರು ರಂಗಗಳಲ್ಲಿ ಪ್ರಥಮ ಸ್ಥಾನದಲ್ಲಿದೆ.

ಬೆಂಗಳೂರು ಸಮಗ್ರ ಅಭಿವೃದ್ಧಿಗೆ ನೀಲನಕ್ಷೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ : ಮೈಸೂರು ರಸ್ತೆ ಹಾಗೂ ಮಾಗಡಿ ರಸ್ತೆ ನಡುವೆ 92 ಕೋಟಿ ರೂ. ವೆಚ್ಚದಲ್ಲಿ ಹೊರವರ್ತುಲ ರಸ್ತೆ ಕೆಲಸ. *2007ರ ಜೂನ್ ವೇಳೆಗೆ ಮಾಗಡಿ ರಸ್ತೆ-ಕಾರ್ಡ್ ರಸ್ತೆ ನಡುವೆ ಅಂಡರ್‌ಪಾಸ್. *ಆರ್ಥಿಕ ದುರ್ಬಲ ವರ್ಗಗಳಿಗಾಗಿ ತಲಾ 3 ಲಕ್ಷ ಮೊತ್ತದ 2 ಲಕ್ಷ ಮನೆ ವಿತರಿಸುವ ಮಿತ ಬಜೆಟ್ ವಸತಿ ಕಾರ್ಯಕ್ರಮ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ : 20 ತಿಂಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿರುವ 1800 ಕೋಟಿ ರೂ. ವೆಚ್ಚದ 30 ಕಿ.ಮೀ. ಒಳವರ್ತುಲ ರಸ್ತೆ ಮತ್ತು 33 ಅಂಡರ್‌ಪಾಸ್‌ಗಳು. *131 ಕೋಟಿ ರೂ. ವೆಚ್ಚದಲ್ಲಿ 6 ಅಂಡರ್‌ಪಾಸ್ ನಿರ್ಮಿಸಲು ಉದ್ದೇಶ. *155 ಕಿ.ಮೀ. ಉದ್ದದ 70 ಒಳರಸ್ತೆಗಳ ಅಭಿವೃದ್ಧಿ.

ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ : ಕಾವೇರಿ ನಾಲ್ಕನೇ ಹಂತದ 2ನೇ ಘಟ್ಟದ ಯೋಜನೆ ಒಂದು ವರ್ಷ ಮೊದಲೇ ಪೂರ್ಣಗೊಳಿಸುವ ಗುರಿ. *ಹೆಚ್ಚುವರಿಯಾಗಿ 500 ಎಂಎಲ್‌ಡಿ ನೀರು ಬೆಂಗಳೂರಿಗೆ. *ಸಮರೋಪಾದಿಯಲ್ಲಿ ಮ್ಯಾನ್‌ಹೋಲ್‌ಗಳ ಸ್ವಚ್ಛತಾ ಕಾರ್ಯಕ್ರಮ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ : ಬೆಂಗಳೂರು ಮಹಾನಗರದಲ್ಲಿ ಬಸ್‌ಗಳು ಸಂಚರಿಸುತ್ತಿರುವ ನಿಖರ ಮಾಹಿತಿ ಒದಗಿಸುವ ಗ್ರಿಡ್ ವ್ಯವಸ್ಥೆ ಪರಿಣಾಮಕಾರಿ ಅಳವಡಿಕೆ. *ಒಂದು ಸಾವಿರ ಓಲ್ವೋ ಬಸ್‌ಗಳು, 737 ಯುರೋ-3 ಬಸ್‌ಗಳು.

ಬೆಂಗಳೂರು ಮೆಟ್ರೋ ರೈಲು ನಿಗಮ : ಕಂಠೀರವ ಕ್ರೀಡಾಂಗಣ ಹಾಗೂ ಬೈಯಪ್ಪನಹಳ್ಳಿಯವರೆಗೆ 7 ಕಿ.ಮೀ. ಉದ್ದದ 138 ಕೋಟಿ ರೂ. ವೆಚ್ಚದ ನಮ್ಮ ಮೆಟ್ರೋ ಕಾಮಗಾರಿಗೆ ಚಾಲನೆ.

ಬೆಂಗಳೂರು ಮಹಾನಗರಾಭಿವೃದ್ಧಿ ಪ್ರಾಧಿಕಾರ : ಸಕಲ ಸವಲತ್ತು ಒಳಗೊಂಡ ದುಡಿಯುವ ವರ್ಗಕ್ಕೆ ಅನುಕೂಲಕವಾದ, ಜೀವನ ನಿರ್ವಹಣೆಗೆ ಸಹಕಾರಿಯಾದ ಉಪನಗರಗಳ ನಿರ್ಮಾಣ. *180 ಕಿ.ಮೀ. ವೇಗದಲ್ಲಿ ಸಂಚರಿಸಲು ಅನುಕೂಲವಾದ ಬೆಂಗಳೂರು ಮಹಾನಗರ ರಿಂಗ್‌ರಸ್ತೆ, 2ನೇ ಹಂತದಲ್ಲಿ ವಿಮಾನ ನಿಲ್ದಾಣ ಎಕ್ಸ್‌ಪ್ರೆಸ್ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿ 207ಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿ.

ಕರ್ನಾಟಕ ವಾರ್ತೆ
Karnataka Information

ವಿಶ್ವಕನ್ನಡಿಗರಲ್ಲಿ ಓದು ಬರಹ ಬಲ್ಲವರಿದ್ದಾರೆಯೆ

"ಕಟ್ಟಿಯುವೇನೋ ಮಾಲೆಗಾರನ ಪೊಸಬಾಸಿಗಂ
ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ"

ಜನ್ನ

ನಾನಾ ಕ್ಷೇತ್ರದಲ್ಲಿ ದುಡಿಯುವವರನ್ನು, ಜವಾಬ್ದಾರಿಯುತವಾಗಿ ಆಲೋಚಿಸುವವರನ್ನು, ಮಾನವ ಸಮಾಜ ನಿರ್ಮಾಣದಲ್ಲಿ ಆಸಕ್ತಿಯುಳ್ಳವರನ್ನು – ಕನ್ನಡದ ಓದು ಬರಹಕ್ಕೆ ಗಂಭೀರವಾಗಿ ತೊಡಗಿಸಲಿಕ್ಕಾಗಿ "ಪ್ರಜಾಸಾಹಿತ್ಯ" ಮಾಸಪತ್ರಿಕೆ ೨೦೦೬ ಸೆಪ್ಟೆಂಬರ್‌ನಲ್ಲಿ ಪ್ರಾರಂಭಿಸಲಾಯಿತು. ಮೊದಲ ಸಂಚಿಕೆಯಿಂದಲೇ ಸಂವೇದನಾಶೀಲರ, ಸಹೃದಯರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಯಿತು. ಈವರೆಗೆ ೯ ಸಂಚಿಕೆಗಳು ತಪ್ಪದೆಯೇ, ವೇಳೆಗೆ ಸರಿಯಾಗಿ, ನಿರೀಕ್ಷಿಸಿದ ಲೇಖನಗಳು – ಮುದ್ರಣದ ಅಚ್ಚುಕಟ್ಟಿನಿಂದ ಚಂದಾದಾರರಿಗೆ ತಲಪಿಸಲಾಯಿತು.

ಆದರೆ ಕೋಟಿಕೋಟಿಗೂ ಮೀರಿರುವ ವಿಶ್ವಕನ್ನಡಿಗರಲ್ಲಿ ಕೊನೆಯಪಕ್ಷ ಓದಲು ಬರೆಯಲು ಬಲ್ಲ ಕನ್ನಡಿಗರು ಅದರಲ್ಲಿಯೂ ಕೊಳ್ಳಬಲ್ಲವರು ಹತ್ತಾರು ಸಾವಿರವೂ ಇಲ್ಲವೆ !

ಈವರೆಗೆ ಶ್ರೀಮಂತ ಹೃದಯವುಳ್ಳವರ ಧನಸಹಾಯ, ಜಾಹೀರಾತುದಾರರ ಸಹಕಾರದಿಂದ ೧೨ ಸಂಚಿಕೆಗಳು ಪ್ರಕಟಿಸಲು ಸಾಧ್ಯವಾಗುತ್ತಿದೆ, ನಿಜ. ಮುಂದಿನ ವರ್ಷವೂ (೨೦೦೭ ಸೆಪ್ಟೆಂಬರ್‌ನಿಂದ) ಹೀಗೇ ಕೈಚಾಚಿ ಪತ್ರಿಕೆ ಹೊರತರುವುದು ಕನ್ನಡಿಗರಿಗೆ ಶೋಭೆ ತರುವ ಕೆಲಸವೆ?

ಪತ್ರಿಕೆ ನಿಮಗೆ ಬೇಡವಾದರೆ, ನಿಮ್ಮ ನೆರವು ಸಿಗದೇ ಹೋದರೆ
೧೨ನೇ ಸಂಚಿಕೆಗೇ ನಿಲ್ಲಿಸದೇ ಬೇರೆ ಮಾರ್ಗವಿಲ್ಲ.

ಕಾಲ/ಪ್ರವಾಹ ಹರಿದರೆ ಜ್ಞಾನ/ಸೇತುವೆ ಕಡಿದರೆ
ಕನ್ನಡಿಗರೇ ಬೊಬ್ಬೆಹಾಕಿ ಪ್ರಯೋಜನವಿಲ್ಲ

ನಿಮ್ಮ ಸಲಹೆ ಸೂಚನೆ
ಬೆಂಬಲಕ್ಕೆ ಎದುರು ನೋಡುವ

ಪ್ರಜಾಸಾಹಿತ್ಯ

“ಬೆಲೆಯಿಂದಕ್ಕುಮೆ ಗಾವಿಲ ಭುವನದ ಭಾಗ್ಯದಿಂದಮಕ್ಕುಂ”

ನೇಮಿಚಂದ್ರ

೧೯೯೨ರಿಂದ ಸುಮಾರು ೫ ವರ್ಷಗಳ ಕಾಲ ಬೆಂಗಳೂರಿನ ರಾಜಾಜಿನಗರದಲ್ಲಿ ಹಗಲು ರಾತ್ರಿ ಕನ್ನಡ ಪುಸ್ತಕ ಪ್ರದರ್ಶನ ನಡೆಸಿದ್ದು ಈಗ ಇತಿಹಾಸ. ಅದಕ್ಕೆ ಸುಮಾರು ೨೫ ವರ್ಷಗಳ ಅವಿರತ ಶ್ರಮ ಹಾಗೂ ಅಪಾರ ವೆಚ್ಚ ತಗುಲಿದ್ದು ಬಲ್ಲವರು ಮಾತ್ರ ಬಲ್ಲರು.

ಅನಿವಾರ್ಯ ಕಾರಣಗಳಿಂದ ಪುಸ್ತಕ ಸಂಗ್ರಹವನ್ನು ಮಾರಾಟ ಮಾಡಲು ನಿರ್ಧರಿಸಿದಾಗ, ಕೊನೆಗೆ ಸರ್ಕಾರದ ಮುಖೇಣ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೆಗೆದುಕೊಂಡಿತು. ಆದರೆ ಬಂಡಾಯದ ಸರ್ವಾಧಿಕಾರಿಯೊಬ್ಬರು ಮತ್ತೆ ಸಂಗ್ರಹ ಮಾಡಕೂಡದೆಂಬ ನಿಬಂಧನೆ ಒಡ್ಡಿದಾಗ ಅ.ರಾ. ಚಂದ್ರಹಾಸಗುಪ್ತ ಹಾಗೂ ವೈ.ಕೆ. ಮುದ್ದುಕೃಷ್ಣ ಅಂತಹ ನಿಜವಾದ ಕನ್ನಡಪ್ರೇಮಿ ಅಧಿಕಾರಿಗಳು ಆ ನಿಯಮ ಕಿತ್ತು ಹಾಕಿ ಕೊಂಡದ್ದು, ಮಾನವೀಯತೆಗೆ, ಪುಸ್ತಕಪ್ರೇಮಕ್ಕೆ, ಕನ್ನಡಿಗನ ಸ್ವಾಭಿಮಾನಕ್ಕೆ ದೊರಕಿದ ಮಾನ್ಯತೆ ಹಾಗು ಐತಿಹಾಸಿಕ ಮಹತ್ತ್ವದ ಗೆಲುವು. ಅಷ್ಟು ಹೊತ್ತಿಗೆ ೮ ಲಕ್ಷದ ವ್ಯವಹಾರ ೫ ಲಕ್ಷಕ್ಕೆ ಇಳಿದು ೩ ಲಕ್ಷ ಕೈ ತಪ್ಪಿದ್ದು ಸಮೂಹ ಮಾಧ್ಯಮಗಳು ಬಚ್ಚಿಟ್ಟು ಕೊಂಡ ಹೃದಯವಿದ್ರಾವಕ ಸಂಗತಿ. ನಿರೀಕ್ಷಿಸಿದ ಹಣ ಬಾರದಂತೆ ಬೆಲೆಕಟ್ಟಿದ್ದು ಕೂಡ ಕನ್ನಡ ಚಳವಳಿಯ ಏಕೈಕ ಸಂಶೋಧಕ ನಾಯಕನೇ ಎಂಬುವುದೂ ಒಂದು ದುರಂತ.

ಆದರೆ ನಾಡಿನ ಊರುಕೇರಿಗಳಲ್ಲಿ ಇದೀಗ ಒಂದೊಂದು "ಪುಸ್ತಕಮನೆ" ಕಾಣಿಸಿಕೊಳ್ಳುತ್ತಿದ್ದು, ಅದಕ್ಕೆ ಮೂಲ ಕಾರಣವಾದದ್ದು, ಆ ಮೂಲಕ ಒಂದು ಕನಸು ಈಡೇರಿದ್ದು ಕೂಡ ಯಾರು ಒಪ್ಪಲಿ ಬಿಡಲಿ ಈ "ಪುಸ್ತಕಮನೆ" ಹೆಗ್ಗಳಿಕೆ. ಸರಕಾರದ ಸಾರ್ವಜನಿಕ ಗ್ರಂಥಾಲಯಗಳನ್ನೇ ಪುಸ್ತಕಮನೆ ಎನ್ನುವ 'ಪ್ರಜಾವಾಣಿ'ಯ ಕುಚೋದ್ಯದ ಪರಮಾವಧಿ ಕೂಡ ಇತ್ತೀಚೆಗೆ ನಡೆದಿದೆ. ಆ ಪತ್ರಿಕೆಯ ಹಿರಿತನಕ್ಕೆ ಇದು ಘನತೆ ತರುವಂಥದ್ದಲ್ಲ. ಮೊದಲು ಅಂಥವರ ಮನೆ, ಕಛೇರಿ 'ಪುಸ್ತಕಮನೆ'ಯಾಗಲಿ ಎನ್ನದೆ ವಿಧಿಯಿಲ್ಲ.

ಮತ್ತೆ ೧೫ ವರ್ಷಗಳ ನಿರಂತರ ಪ್ರಯತ್ನದಿಂದ ೩೦ ಸಾವಿರಕ್ಕೂ ಮೀರಿ ಪುಸ್ತಕಗಳನ್ನು ಪತ್ರಿಕೆಗಳನ್ನು ಸಂಗ್ರಹಿಸಿ 'ಪುಸ್ತಕಮನೆ' ಪ್ರಾರಂಭಿಸಲಾಗುತ್ತಿದೆ. ಭಾರತದ ಇತಿಹಾಸದಲ್ಲೇ ಕೊಲ್ಕತ್ತದ ಸರ್ ಆಶುತೋಷ ಮುಖರ್ಜಿಯವರ ಸಂಗ್ರಹ ಬಿಟ್ಟರೆ, 'ಪುಸ್ತಕಮನೆ' ಸಂಗ್ರಹವೇ ಎರಡನೆಯದೆಂದು ಬಲ್ಲವರು ಹೇಳುತ್ತಿದ್ದಾರೆ.

ಇಂದಲ್ಲ ನಾಳೆ ದೇಶದಲ್ಲಿಯೇ ಒಂದು ವ್ಯವಸ್ಥಿತ

ಪುಸ್ತಕ ಸಂಗ್ರಹಾಲಯ

ಕರ್ನಾಟಕದಲ್ಲಿ ನೆಲೆಗೊಳ್ಳಲು ಸಾಧ್ಯವೋ ?

ಕನ್ನಡಿಗರು ಅನುಗೊಳಿಸಿಯಾರೊ ?